ಶೂದ್ರ

ಶರೀರವನ್ನೂ ಮನಸ್ಸನ್ನೂ ಬೇರ್ಪಡಿಸಿ ಅವೆರಡಕ್ಕೂ ಮಧ್ಯೆ ದೊಡ್ಡ ಅಂತರವನ್ನು ತಂದೊಡ್ಡಿದವನು ಆಧುನಿಕ ತಾತ್ವಿಕನಾದ ದೇಕಾರ್ಟ್. ಇವನು ಪ್ರತಿಪಾದಿಸಿದ ಈ ದ್ವೈತಸಿದ್ಧಾಂತಕ್ಕೆ ಸೆರೆಯಾಗಿ ಸಿಕ್ಕಿ ಆಧುನಿಕ ತಾತ್ವಿಕರು ಮೂರು ಶತಮಾನಗಳ ಕಾಲ ಒಂದೇ ಸಮನಾಗಿ ನರಳುತ್ತಿರುವರು. ಈಗ ಇವರು ಈ ಕಷ್ಟದಿಂದ ಸ್ವಲ್ಪಮಟ್ಟಿಗೆ ಬಿಡುಗಡೆ ಹೊಂದುವ ಚಿಹ್ನೆಗಳು ತಲೆದೋರುತ್ತಿವೆ.

ಜಿ. ಹನುಮಂತರಾವ್
(ಪ್ರಸಿದ್ಧ ತತ್ವಜ್ಞಾನಿ)

ಈ ಸಂಚಿಕೆಯಲ್ಲಿ :

ಪ್ರೊ|| ಆರ್. ಡಿ. ಹೆಗಡೆ
ಜಯಪ್ರಕಾಶ ಮಾವಿನಕುಳಿ
ಕುಂ. ವೀರಭದ್ರಪ್ಪ
ಸತೀಶ ಕುಲಕರ್ಣಿ
ಲೋಕೇಶ ಅಗಸನಕಟ್ಟೆ
ಡಾ|| ಹೆಚ್.ಎಸ್. ಸುಜಾತೆ
ಜಿ. ರಾಜಶೇಖರ
ಪ್ರೊ|| ಎ.ಎನ್. ಮೂರ್ತಿರಾವ್
ಪಿ.ವಿ.ಎಸ್. ರಾವ್
ನಟರಾಜ್ ಹುಳಿಯಾರ
ಡಾ|| ಕೆ. ಮರುಳಸಿದ್ದಪ್ಪ
ಕೆ.ವೈ. ನಾರಾಯಣಸ್ವಾಮಿ

ಪಿ. ಲಂಕೇಶ್
ಸುದ್ದಿಯ ಗುದ್ದಾಟ
ಕನಸಿಗೊಂದು ಕಣ್ಣು

ನಾನೊಬ್ಬಳು ಕಲಾವಿದನ ಕೈಗೆ ಸಿಕ್ಕಿದ ಕನ್ಯೆ

ಬೆಲೆ : 4-00 ದೂರವಾಣಿ : 643337

ಮುಕ್ತಚರ್ಚೆಗಾಗಿ 'ಶೂದ್ರ' ತಿಂಗಳ ಪತ್ರಿಕೆ

ಸಂಚಿಕೆ : 3 ಜನವರಿ 1990 ಸಂಪುಟ : 16

ಸಹಾಯಕ ಸಂಪಾದಕರು : ನಿರ್ಮಲಾ ರೆಡ್ಡಿ – ಉತ್ತನೂರು ರಾಜಮ್ಮ ವಿ. ಶೆಟ್ಟಿ
ಕೆ. ಎನ್. ಅರುಣ್ – ಸ. ರಘುನಾಥ್
ಜರಗನಹಳ್ಳಿಶಿವಶಂಕರ್–ಎಲ್. ಎನ್. ಮುಕುಂದರಾಜ್

ಶೂದ್ರಕ್ಕೆ ಚಂದಾ ಕಳಿಸಿ. ಆಜೀವ ಚಂದಾ ಬಾಬ್ತು ಕಂತುಗಳಲ್ಲಿ ಕೊಡುವವರು ಸ್ವಲ್ಪ ಜಾಗ್ರತೆ ಕೊಟ್ಟರೆ ಒಳಿತು. ಚಂದಾದ ರೀತಿಯಲ್ಲಿ ನಾಲ್ಕೈದು ವರ್ಷ ಕೊಟ್ಟರೆ ನಿಜವಾಗಿಯೂ ತೊಂದರೆಯಾಗುತ್ತದೆ. ಶೂದ್ರ ಬರದಿದ್ದರೆ ಪತ್ರ ಬರೆಯಿರಿ. ಚಂದಾವನ್ನು ಎಂ. ಒ. ಮೂಲಕ ಕಳುಹಿಸುವವರು ದಯುವಿಟ್ಟು ಕೌಂಟರ್ ಭಾಗದಲ್ಲಿ ವಿಳಾಸ ಬರೆಯಿರಿ. ಲೇಖನ ಮತ್ತು ಕವನ ಕಳುಹಿಸುವವರು 15 ಪೈಸೆಯ ರಿಪ್ಲೈ ಕಾರ್ಡಿಡಿ. ಚೆಕ್ ಮೂಲಕ ಕಳುಹಿಸುವವರು 5 ರೂ. ಹೆಚ್ಚುವರಿ ತುಂಬಿ.

ಮುಖಚಿತ್ರ : ಪ್ರಸಿದ್ಧ ಬಂಗಾಳಿ ಕಲಾವಿದ ಪ್ರದೋಶ್ ದಾಸಗುಪ್ತ

1990 ಹೊಸವರ್ಷ ಶೂದ್ರದ ಓದುಗರಿಗೆ ಕ್ರಿಯಾಶೀಲ ಬದುಕನ್ನು ನೀಡಲಿ

ಪ್ರಸಿದ್ಧ ನೋಬೆಲ್ ಪಾರಿತೋಷಕ ವಿಜ್ಞಾನಿ ಸಖರೋವ್ ಅವರ ನಿಧನಕ್ಕೆ ಮತ್ತು ಸುಮಾರು ಅರವತ್ತು ವರ್ಷಗಳ ಕಾಲ ನಮ್ಮ ಅಭಿರುಚಿಯನ್ನು ತಿದ್ದಿದ (ಶಂಕರ್ ವೀಕ್ಲಿಯಂಥ ಉತ್ತಮ ಪತ್ರಿಕೆಯನ್ನು ಕೊಟ್ಟ) ಶಂಕರ್ ಪಿಳ್ಳೆಯವರ ನಿಧನಕ್ಕೆ ಶೂದ್ರ ತನ್ನ ಅತೀವ ದುಃಖವನ್ನು ವ್ಯಕ್ತಪಡಿಸುತ್ತದೆ. —ಸಂ

ನೀವು ಕಳಿಸುವ ಚಂದಾ ಶೂದ್ರದ ಬೆಳವಣಿಗೆಯ ಸಂಕೇತ

ವಾರ್ಷಿಕ ಚಂದಾ : 45-00 ರೂ. ಪುಸ್ತಕ ಭಂಡಾರಗಳಿಗೆ 50-00 ರೂ.
ಆಜೀವ ಚಂದಾ 400-00 ರೂ. (ನಾಲ್ಕು ಕಂತುಗಳಲ್ಲಿ)

ಶೂದ್ರ ಶ್ರೀನಿವಾಸ್, ನಂ. 1, 3 ನೇ ಕ್ರಾಸ್, ಬಾಲಾಜಿನಗರ, ಸುದ್ದುಗುಂಟೆಪಾಳ್ಯ,
ಡಿ. ಆರ್. ಕಾಲೇಜ್ ಅಂಚೆ, ಬೆಂಗಳೂರು-560 029

ರೂಪಕದ ಬೆಳಕಿನಲ್ಲಿ ಕೇನೋಪನಿಷತ್ತು

—ಆರ್.ಡಿ. ಹೆಗಡೆ

ಉಪನಿಷತ್ತುಗಳ ಸಾಲಿನಲ್ಲಿ 'ಕೇನ' ಎರಡನೆಯದು. 'ಕೇನ' ಸಾಮವೇದಕ್ಕೆ ಸೇರಿದ ಉಪನಿಷತ್ತು. ಮೊದಲನೆಯದಾದ ಈಶಾವಾಸ್ಯ ಉಪನಿಷತ್ತಿನಷ್ಟೇ ಇದೂ ಕೂಡ ವೈದಿಕಯುಗದ ಕರ್ಮಠ ಆಚರಣೆಗೆ ವಿದಾಯ ಬಯಸುವ, ಆಧ್ಯಾತ್ಮಿಕ–ಎಚ್ಚರವೇ ಮುಖ್ಯ ಎನ್ನುವ ಗ್ರಂಥ. 'ಕೇನ'ದ ಈ ಅಭಿಪ್ರಾಯ ಅದರ ಮೂರನೆಯ ಅಧ್ಯಾಯದಲ್ಲಿರುವ ರೂಪಕದ ಶಕ್ತಿ ಪಡೆಯುವ ಒಂದು ಕಥಾನಕದಿಂದ ಸ್ಪಷ್ಟವಾಗುತ್ತದೆ. ದೇವತೆಗಳ ಮಿತಿಯನ್ನು ಆಡಿತೋರಿಸುವ, ಸಂಕೇತದಿಂದ ಚೇಷ್ಟೆಮಾಡುವ, ಈ ಕಥಾನಕವನ್ನು ಗುರು ಶಿಷ್ಯನನ್ನು ಎದುರಿಗೆ ಕೂರಿಸಿಕೊಂಡು ಹೇಳುತ್ತಾನೆ.

"ಒಮ್ಮೆ ದೇವತೆಗಳಿಗೆ ಬ್ರಹ್ಮನ ಸಹಾಯದಿಂದ ಜಯ ದೊರಕಿತು. ಆದರೆ ದೇವತೆಗಳು ತಾವು ಮಹಾಮಹಿಮರು, ಇದು ತಾವೇ ಗಳಿಸಿದ ಜಯ ಎಂದು ಭ್ರಮಿಸಿದರು.

ಅವರ ಅಹಂಕಾರವನ್ನು ಅರಿತ ಬ್ರಹ್ಮ ಅವರೆದುರು ಕಾಣಿಸಿಕೊಂಡನು. ದೇವತೆಗಳಲ್ಲಿ ಯಾರೊಬ್ಬನಿಗೂ ಬ್ರಹ್ಮನನ್ನು ಗುರುತಿಸಲು ಆಗಲಿಲ್ಲ.

ದೇವತೆಗಳು ಒಂದೆಡೆ ಸೇರಿದರು; ತಮ್ಮಲ್ಲೇ ಒಂದು ನಿರ್ಣಯಕ್ಕೆ ಬಂದು ಅಗ್ನಿಗೆ ಹೇಳಿದರು: "ಜಾತವೇದನೇ, ಆ ಮಾಯಾವಿ ಯಾರೆಂದು ಕಂಡು ಹಿಡಿ." ಅಗ್ನಿ ಒಪ್ಪಿಕೊಂಡು ಬ್ರಹ್ಮನ ಬಳಿಗೆ ಓಡಿದನು. ಬ್ರಹ್ಮ ಕೇಳಿದ; "ನೀನು ಯಾರು ?"

ಅದಕ್ಕೆ ಅಗ್ನಿ ಹೇಳಿದ: "ನಾನು ಅಗ್ನಿ. ನಾನೇ ಶ್ರೇಷ್ಠನಾದ ಜಾತವೇದ ಅಗ್ನಿ."

"ನಿನ್ನ ಪರಾಕ್ರಮ ಎಂತಹುದು ?"

"ನಾನು ಸುಡಬಲ್ಲೆ. ಜಗತ್ತಿನ ಪ್ರತಿಯೊಂದು ವಸ್ತುವನ್ನೂ ಸುಡಬಲ್ಲೆ." ಬ್ರಹ್ಮನು ಅಗ್ನಿಯ ಎದುರಿಗೆ ಒಂದು ಹುಲ್ಲುಕಡ್ಡಿಯನ್ನು ಎಸೆದು ಹೇಳಿದನು–"ಇದನ್ನು ಸುಡು,"

ಅಗ್ನಿ ಪ್ರಜ್ವಲಿಸುತ್ತ ಅದರತ್ತ ಧಾವಿಸಿದ. ಆದರೆ ಅದನ್ನು ಸುಡಲಾಗಲಿಲ್ಲ. ಅಲ್ಲಿಂದ ಅಗ್ನಿ ದೇವತೆಗಳೆಡೆಗೆ ಮರಳಿ ಬಂದು "ಆ ಮಾಯಾವಿ ಯಾರೆಂದು ತಿಳಿಯಲಿಲ್ಲ" ಎಂದು ವರದಿ ಮಾಡಿದ. ಆಗ ದೇವತೆಗಳು ಮರುತ್ತ (ವಾಯು)ನನ್ನು ಆ ಕೆಲಸಕ್ಕೆ ಅಟ್ಟಿದರು. ಅವನು ಅದನ್ನೊಪ್ಪಿಕೊಂಡು ಬ್ರಹ್ಮ ನಿಂತಲ್ಲಿಗೆ ರಭಸದಿಂದ ಬಂದನು. "ನಾನು ಮರುತ ದೇವತೆ. ನಾನೇ ಶ್ರೇಷ್ಠನಾದ ಮಾತರಿಶ್ವ" ಎಂದು ಬ್ರಹ್ಮನಿಗೆ ತಿಳಿಸಿದ. ಬ್ರಹ್ಮ ಕೇಳಿದ: "ನಿನ್ನ ಪರಾಕ್ರಮ ಎಂತಹುದು ?"

ಆರ್.ಡಿ. ಹೆಗಡೆ, ಕೃಷ್ಣ ಮನೆ, ಸಿ.ಎಂ. ರಸ್ತೆ, ಕೆ.ಆರ್. ನಗರ-571602 (ಮೈಸೂರು ಜಿಲ್ಲೆ)

"ನಾನು ಗಾಳಿ ಬೀಸಿ ಎಲ್ಲವನ್ನೂ ಹಾರಿಸಬಲ್ಲೆ. ನನಗೆ ಭೂಮಿಯಲ್ಲಿರುವ ಎಲ್ಲ ವಸ್ತುವನ್ನೂ ಹಾರಿಸುವ ಶಕ್ತಿಯಿದೆ."

ಬ್ರಹ್ಮ ಅವನೆದುರು ಅದೇ ಹುಲ್ಲು ಕಡ್ಡಿಯನ್ನಿಸೆದು ಹೇಳಿದ–"ಹಾಗಾದರೆ, ಇದನ್ನು ಹಾರಿಸು."

ಮರುತ್ತ ಸರ್ವಶಕ್ತಿಯನ್ನೂ ಬಳಸಿ ಅದರತ್ತ ಬೀಸಿದನು. ಆದರೆ ಅದನ್ನವನು ಅಲುಗಾಡಿಸಲೂ ಆಗಲಿಲ್ಲ. ಅಲ್ಲಿಂದ ದೇವತೆಗಳೆಡೆಗೆ ಮರಳಿ ಮರುತ್ತ "ಆ ಮಾಯಾವಿ ಯಾರೆಂದು ನನಗೆ ತಿಳಿಯಲಿಲ್ಲ" ಎಂದು ತಿಳಿಸಿದ. ಆಗ ದೇವತೆಗಳೆಲ್ಲ ಸೇರಿ "ಓ ಮಘವನ್, ಇಂದ್ರನೇ, ಆ ಮಾಯಾವಿ ಯಾರೆಂದು ಕಂಡುಹಿಡಿ" ಎಂದು ತಮ್ಮ ದೊರೆ ಇಂದ್ರನನ್ನೂ ಕೇಳಿಕೊಂಡರು. ಇಂದ್ರನು ಅದನ್ನೊಪ್ಪಿಕೊಂಡು ಬ್ರಹ್ಮನೆಡೆಗೆ ಹೊರಟಾಗ ಬ್ರಹ್ಮ ಕಾಣಿಸಿಕೊಳ್ಳದೆ ಅಂತರ್ಧಾನನಾದನು.

ಅದೇ ಸ್ಥಳದಲ್ಲಿ ಅನುಪಮ ಲಾವಣ್ಯವತಿಯಾದ ಉಮೆ ಕಾಣಿಸಿಕೊಂಡಳು. ಆಕೆ ಹಿಮಾಲಯನ ಮಗಳು. ಸಾಕ್ಷಾತ್ ಜ್ಞಾನ ಸ್ವರೂಪಿಣಿ. ಇಂದ್ರ ಆಕೆಯನ್ನು ಕೇಳಿದ–"ಆ ಮಾಯಾವಿ ಯಾರೆಂದು ತಿಳಿಸು."

ಉಮೆ ಹೇಳಿದಳು "ಅವನು ಬ್ರಹ್ಮ. ಅವನಿಂದ ದೊರಕಿಸಿಕೊಂಡ ಗೆಲುವನ್ನು ನೀವು ನಿಮ್ಮ ಪ್ರತಾಪವೆಂದೇ ಭ್ರಮಿಸಿದ್ದೀರಿ" ಅಂದಾಗಲೇ ಇಂದ್ರನಿಗೆ ಆ ಮಾಯಾವಿ ಬ್ರಹ್ಮ ಎಂದು ತಿಳಿದದ್ದು.

o o o o

ಕ್ರಿಸ್ತಪೂರ್ವ ಎಂಟನೆಯ ಶತಮಾನದ ಹೊತ್ತಿಗೆ ರಚನೆಯಾಗಿರಬಹುದಾದ ಕೇನೋಪನಿಷತ್ತಿನ ಈ ಕ್ಷುಲ್ಲಕವೆಂದು ತೋರುವ ಕಥಾನಕ ವೇದಕಾಲದ ದೈನಂದಿನ ಅನುಷ್ಠಾನಗಳಲ್ಲಿ ಪ್ರತಿಷ್ಠಿತರಾದ ಈ ದೇವತೆಗಳನ್ನು ಗೇಲಿಮಾಡುವ ಮೂಲಕ ಸಾಧಿಸುವುದೇನು ಎಂದು ಪರಿಶೀಲಿಸೋಣ.

ಕೇನೋಪನಿಷತ್ತು ಗುರು-ಶಿಷ್ಯರ ಸಂವಾದರೂಪದಲ್ಲಿದೆ. ಶಿಷ್ಯ ಎದುರಿಗೆ ಕುಳಿತಿದ್ದಾನೆ. ಅವನ ಮನಸ್ಸಿನಲ್ಲಿ ದೇವತೆಗಳು ವಿರಾಜಿಸಿದ್ದಾರೆ. 'ಇಹ'ವನ್ನು ಅದರ ಕ್ಷುದ್ರತೆ ಮತ್ತು ಅಗತ್ಯದೊಡನೆ ಮನಗಂಡ ವಿವೇಕದಿಂದ ತಣ್ಣಗೆ ಕುಳಿತ ಗುರು ಇಂದ್ರಾದಿ ದೇವತೆಗಳ ಬಗ್ಗೆ ಕಥೆ ಕಟ್ಟುತ್ತ ಶಿಷ್ಯನನ್ನು ಅಲ್ಲಾಡಿಸುತ್ತಾನೆ. ಅಟ್ಟಹಾಸಗೈಯುವ ದೇವತೆಗಳು ಕುಬ್ಜರಾಗುವ, ಅನಾತ್ಮಜ್ಞನಾದ ದೊರೆ ಇಂದ್ರ ಶಿಷ್ಯನ ಸರಿಸಮಾನಕ್ಕೆ ಇಳಿದುಬಿಡುವ ಈ ಕಥಾನಕದ ಉದ್ದೇಶ : ನಂಬುಗೆಯನ್ನು ನಿರ್ನಾಮಗೊಳಿಸಿ ಬೆಚ್ಚಿಬೀಳಿಸುವುದು; ಹೀಗೆ ಹದಗೊಳ್ಳುವ ಶಿಷ್ಯನನ್ನು ಆಧ್ಯಾತ್ಮಿಕ ಅನ್ವೇಷಣೆಯಲ್ಲಿ ತೊಡಗಿಸುವುದು. ಗುರು ಹೇಳುವ ಕಡೆ ಶಿಷ್ಯನ ಆರಾಧ್ಯ ದೈವಗಳನ್ನು ಒದ್ದು

ಶೂದ್ರ

ನೀಳಿಸುತ್ತದೆ. ತಳಮಳಗೊಳ್ಳುವ ಶಿಷ್ಯನಲ್ಲಿ ಸಂದೇಹವನ್ನೂ ಜಿಜ್ಞಾಸೆಯನ್ನೂ ಮೂಡಿಸುವುದು ಗುರುವಿಗೆ ಸದ್ಯ ಮುಖ್ಯವಾಗಿದೆ. ಶಿಷ್ಯ ಕೇಳುತ್ತಾನೆ: ಹಾಗಾದರೆ ಇಂದ್ರಿಯ ಸಿದ್ಧಾಂತವ ಈ ದೇವತೆಗಳಾರೂ 'ಸತ್ಯ'ವಲ್ಲ. 'ಸತ್ಯ'ದ('ಬ್ರಹ್ಮ'ದ) ಸ್ವರೂಪವೇನು ? ಅದು ಹೇಗೆ ಅಷ್ಟೊಂದು ಅಗಮ್ಯ ರಹಸ್ಯ ? ನಮ್ಮ ಕಿವಿ, ಕಣ್ಣು, ಮೂಗು, ಇವೆಲ್ಲ ಪ್ರೇರಣೆ ಪಡೆಯುವುದು ಯಾರಿಂದ ? ಮನಸ್ಸಿನಿಂದಲೇ ? ಮನಸ್ಸಿಗೆ ಪ್ರೇರಣೆ ಏನು ?

ಶಿಷ್ಯನ ಈ ಸಂದೇಹಗಳಿಗೆ ಗುರು ನೀಡುವ ಸಮಾಧಾನ ಅವನನ್ನು ಆತ್ಮದ ಸಾಕ್ಷಾತ್ಕಾರಕ್ಕೆ, ಆಧ್ಯಾತ್ಮಿಕ ಅನುಭವಕ್ಕೆ ಸಿದ್ಧಗೊಳಿಸುವುದಾಗಿದೆ. ಇದು 'ಸತ್ಯ'ದ ಕುರಿತು ಪಡಕೊಂಡ ಅನುಭವಗಳನ್ನು ಎದುರು ಬದುರಾಗಿಸಿ ಅಲ್ಲಿ ಬೀಳುವ ನೆರಳನ್ನು ಅಳಿಸುತ್ತ ಅಳಿಸುತ್ತ ನಿಜಕ್ಕಾಗಿ ಕಾವಿಗೆ ಕೂರುವಂತಿದೆ.

o o o o

ತುಂಬ ಮುಖ್ಯವಾದ ರಹಸ್ಯದ ಬಗ್ಗೆ ಮಾತನಾಡುವಾಗಿನಂತೆ ಕಿವಿಯೊಳಗೆ ಮೆಲುದನಿಯಲ್ಲಿ ನುಡಿಯುವಂತಿರುವ ಉಪನಿಷತ್ತುಗಳನ್ನು(ಉಪನಿಷತ್ತಿನ ಅರ್ಥವೇ ಹೀಗೆ: ಆಪ್ತತೆ, ರಹಸ್ಯದ ಬೋಧನೆ ಹಾಗು ಅರಿಯಲು ಬೇಕಾದ ಸ್ವಾತಂತ್ರ್ಯ) ಓದಿದಾಗ ನಾವು ಎರಡು ಬಗೆಯನ್ನಾದರೂ ಕಾಣುತ್ತೇವೆ. ಮೊದಲನೆಯದು ಈಶಾವಾಸ್ಯ ಉಪನಿಷತ್ತಿನಲ್ಲಿ ಕಾಣುವ ರೀತಿಯದು; ಅದು ಕಾವ್ಯದ ಮಾಧ್ಯಮದಿಂದ ನಂಬುಗೆಯನ್ನು ಗಳಿಸಿಕೊಳ್ಳುವಂತಹುದು. ಎರಡನೆಯ ಬಗೆಯನ್ನು ಕೇನೋಪನಿಷತ್ತಿನಲ್ಲಿ, ಕಠ, ಛಾಂದೋಗ್ಯ, ಬೃಹದಾರಣ್ಯಕ, ಮೊದಲಾದ ಮುಖ್ಯ ಉಪನಿಷತ್ತುಗಳಲ್ಲಿ ಕಾಣುತ್ತೇವೆ. ಇಲ್ಲಿ ಈಶಾವಾಸ್ಯದ ಧಾವಂತವಿರುವುದಿಲ್ಲ; ಅದರ ಒಂಟಿತನ, ಪ್ರಿಯವಾಗುವ ಏಕಾಂತ ಇಲ್ಲಿಲ್ಲ. ಅದು ಬುದ್ಧಿಗಮ್ಯವಲ್ಲದ ಸಾಕ್ಷಾತ್ಕಾರ. ಈ ಎರಡನೆಯ ಬಗೆಯ ಉಪನಿಷತ್ತುಗಳಲ್ಲಿ ಕಾಣುವ ಏಕಾಗ್ರತೆ ನಿರುಮ್ಮಳ ಕುಳಿತು ಚರ್ಚಿಸುವ, ಕಸ–ಕಡ್ಡಿಯನ್ನು ಆರಿಸಿ ತೆಗೆದೆಸೆಯುತ್ತ ಗಣಪನನ್ನು ಮಾಡಲು ಮಣ್ಣನ್ನು ಹದಗೊಳಿಸುವಂತಹುದು. ಇಲ್ಲಿ ಎಚ್ಚರವಿರುತ್ತದೆ; ವಿಸ್ಮಯಕ್ಕೊಳಗಾಗುವ ಮುಗ್ಧತೆಯೂ ಇರುತ್ತದೆ. ಒಟ್ಟಿನಲ್ಲಿ ಎಲ್ಲವನ್ನೂ–ಸಂವಾದದಲ್ಲಿ ಭಾಗಿಯಾಗುವ ಎಲ್ಲರನ್ನೂ–ಒಳಗೊಂಡ ಧ್ಯಾನಾವಸ್ಥೆ ಇಲ್ಲಿ ಕಾಣುತ್ತದೆ. ಇಲ್ಲಿ ವೈಚಾರಿಕ ತೀಕ್ಷ್ಣತೆಗೆ ಅವಕಾಶವಿಲ್ಲ ಎನ್ನುವಂತಿಲ್ಲ; ಮಾತು ಚುರುಕಾಗಿ ಬಳಸುತ್ತ ಸಂಚರಿಸುತ್ತದೆ. ಶಿಷ್ಯ ತುಸು ಅನ್ಯಮನಸ್ಕನಾದರೂ ಸಾಕು, ಗುರುವಿನ ಮಾತಿನಲ್ಲಿ ಸರ್ವಜ್ಞತೆಯ ಧಿಮಾಕನ್ನು ಶಂಕಿಸಬಹುದಾದ ಭೀತಿಯೂ ಇಲ್ಲಿದೆ. ಈ ಎರಡನೆಯ ಬಗೆಯುಳ್ಳ ಕೇನೋಪನಿಷತ್ತು ಇಷ್ಟವಾಗುವುದು ಹೀಗೆ.

ಆದರೆ, ಕೇನೋಪನಿಷತ್ತು ಆಪ್ತವೆನಿಸುವ ರೀತಿಯನ್ನು ಇನ್ನೂ ಹೆಚ್ಚಿನ ವಿವರಗಳಿಂದ ನೋಡಬೇಕು. ಅಂತಿಮವಾಗಿ ಆಧ್ಯಾತ್ಮಿಕ ಜಯ ದೊರೆಯುವ ಇದರಲ್ಲಿ ಗುರುವಿಗೆ ತನ್ನ ಸಾಕ್ಷಾತ್ಕಾರದ ಸ್ವರೂಪ ಖಚಿತವಾಗಿದೆ–ಎನ್ನುವುದು ನಮ್ಮ ನಿಲುವಾಗುತ್ತದೆ. ಆದರೆ ಶಿಷ್ಯನಲ್ಲಿ ಅದನ್ನೀಗ ಬೆಳಗಬೇಕು. ಅವನಿಗೆ ಇನ್ನೂ ವೈದಿಕ ಮತದ ಯಾಂತ್ರಿಕ ಆಚರಣೆಗಳೇ ಮುಖ್ಯವೆನ್ನಿಸುತ್ತಿವೆ. ಹೀಗಾಗಿ ಗುರುವಿಗೆ ನೇರವಾದ ವೈಚಾರಿಕ ಸಂವಾದ ಬೇಕಾಗುವುದಿಲ್ಲ. ಗುರುವಿಗೆ ಆಧ್ಯಾತ್ಮಿಕ ಅನುಭವ ಬೌದ್ಧಿಕ ಸೆಣಸಾಟವಲ್ಲ; ಹಾಗೇ, ತರ್ಕದ ತಪಾಸಣೆಯೂ ಅಲ್ಲ; ಅದು ತೀರಾ ಅನ್ನಬಹುದಾದ ವೈಯಕ್ತಿಕ ಸಾಕ್ಷಾತ್ಕಾರ.

ಶಿಷ್ಯನಲ್ಲಿರಬಹುದಾದ ಚಿಕ್ಕ ಸಂದೇಹವನ್ನೇ ಬಳಸಿಕೊಂಡು ಗುರು ಅವನ ಅರಿವನ್ನು ಬೆಳಗುವ ಈ ಉಪನಿಷತ್ತಿನ ಬಗೆ ನಮಗೆ ಹಿತವೆನ್ನಿಸುವುದು ಸಾಹಿತ್ಯಕ್ಕೆ ಹತ್ತಿರವಾದ ರೂಪಕದ ಬೆಳಕನ್ನು ಇಲ್ಲಿ ಕಾಣುವುದರಿಂದ. ಈ ಕಥಾನಕವೇ ಗುರು ತತ್‌ಕ್ಷಣದಲ್ಲಿ ಕಟ್ಟುವ ಕ್ಷುಲ್ಲಕವೆನ್ನಿಸಬಹುದಾದ ರೂಪಕ(allegory). ಕಥೆ ಶಿಷ್ಯನ ಸಲುವಾಗಿ, ಆತನ ಸಂದೇಹ ಹೆಚ್ಚಲೆಂದು. ಶಿಷ್ಯನ ನಂಬುಗೆಯಲ್ಲಿ ವಿರಾಜಮಾನನಾದ ಸರ್ವಶಕ್ತ ಸೋತಾಗ ಏನಾದೀತು ?

ಹೀಗೆ ಕಥೆ ಕಟ್ಟುವುದು ಕರ್ಮಠ ವೈದಿಕನಿಗೆ ಗುರುವಿನ ನೀಚತನವಾಗಿ ತೋರಬಹುದಾದ್ದರಿಂದ, ಹಾಗೆ ತೋರಬೇಕೆನ್ನುವ ಎಚ್ಚರದಿಂದಲೇ ದಿಟ್ಟತನದಲ್ಲಿ ಸ್ವಚ್ಛಂದವಾಗಿ ಗುರು ಕಥೆ ಕಟ್ಟಿ ಗೇಲಿ ಮಾಡುವುದು, ಸ್ವಚ್ಛಂದತೆಯೇ ಆಧ್ಯಾತ್ಮಿಕ ಅನುಭವಕ್ಕೆ ಅಗತ್ಯವಾದ ಸ್ವಾತಂತ್ರ್ಯವಾಗುವುದು, ಇಲ್ಲಿ ಗಮನಾರ್ಹ. ಈ ಸ್ವಚ್ಛಂದತೆಯಿರುವಾಗಲೇ ದೇವತೆಗಳ ಸಾಮ್ರಾಜ್ಯವನ್ನು ಅಳಿಸಬಹುದು. ಹೀಗೆ ನಂಬುಗೆಯ ಆಸರೆ ಕಳಕೊಂಡ ಶಿಷ್ಯ 'ಸತ್ಯ'ದ ಹುಡುಕಾಟಕ್ಕೆ ಅಣಿಯಾಗುತ್ತಾನೆ. ತನ್ನ ಕಥೆಯ ಬೆಳಕಿನಲ್ಲೇ ಹೊರಟ ಶಿಷ್ಯನನ್ನು ಗುರು ಈಗ 'ನೇತಿ'ವಾದದಿಂದ ಇಕ್ಕಟ್ಟಾದ ದಾರಿಯಲ್ಲಿ ನಡೆಸಿಕೊಂಡು ಹೋಗಿ ಆಧ್ಯಾತ್ಮಕ್ಕೆ ಪಕ್ವಗೊಳಿಸಬೇಕು.

o o o o

ಇಲ್ಲಿಂದ 'ಕೇನ'ದ ಬಗ್ಗೆ ಇನ್ನಷ್ಟು ವಿವರ ಅಗತ್ಯ. 'ಕೇನ' ಎಂದರೆ 'ಯಾರಿಂದ?' 'ಯಾವುದರಿಂದ ?' 'ಕೇನ'ದಿಂದ ಶುರುವಾಗುವ ಕಾರಣ ಇದು 'ಕೇನೋಪನಿಷತ್ತು.' ಹಿಂದೂ ತತ್ವಶಾಸ್ತ್ರದ ಸಾಧ್ಯತೆ ಮತ್ತು ಸ್ವಚ್ಛಂದತೆ ಬಹಿರಂಗಗೊಳ್ಳುವುದು ಇಲ್ಲಿಂದಲೇ. ಆದುದರಿಂದ ಭಾದಪ್ರಪಂಚದ ಮೂಲಕ ನಮ್ಮನ್ನು ಹೋಗುವ 'ಈಶಾವಾಸ್ಯ'ದಷ್ಟೇ 'ಕೇನವೂ ಕೂಡ ಮುಖ್ಯವೆನಿಸುತ್ತದೆ. ತಾತ್ವಿಕ ಆವಿಷ್ಕಾರಗಳ ತಾಕಲಾಟದ ವಿಶಿಷ್ಟ ಕ್ರಮದಿಂದ, ಕಾವ್ಯದಲ್ಲಿ ಹೇಗೋ ಹಾಗೇ, ಅಮೂರ್ತವನ್ನು ರೂಪುಳ್ಳದ್ದನ್ನಾಗಿ

ಮಾಡುವ ಈ ಉಪನಿಷತ್ತಿನ ಓದಿಗೆ ಅಗತ್ಯವಾದ ಚೌಕಟ್ಟು ಇದರೊಳಗೆ ನಿರ್ಮಾಣ ವಾಗುತ್ತದೆ.

ಪ್ರಸಿದ್ಧವಾದ 'ಸಹನಾವವತು ಸಹನೌ ಭುನಕ್ತು' ಎನ್ನುವ ಶಾಂತಿ ಮಂತ್ರ ಹಾಗೂ 34 ಶ್ಲೋಕಗಳಿರುವ 'ಕೇನ' ಚಿಕ್ಕದಾದರೂ ಸ್ವರೂಪದಿಂದ ತುಂಬಾ ಗಾತ್ರ ವುಳ್ಳದ್ದು. ನಾಮರೂಪಗಳ ಮೂಲಕ ಅರಿವಿಗೆ ಬರುವವಲ್ಲಿ 'ಪರಮ ಸತ್ಯ'ವಲ್ಲ 'ನಿಜ'ವಲ್ಲ, ಎನ್ನುವ ಮನಸ್ಥಿತಿಯ ತರಬೇತಿಯೇ ಇದರ ಗಾತ್ರವೆನ್ನಬಹುದು. ಇದು ಬೆರಗಿನ ಚೈತನ್ಯದಿಂದ ಕೂಡಿದೆ.

'ಕೇನ'ದ ರೀತಿ 'ನಿಜಕ್ಕಾಗಿ ಕಾವಿಗೆ ಕೂರುವ ಕ್ರಮ' ಎಂದು ಮೊದಲು ಹೇಳಿದ ಅಭಿಪ್ರಾಯವನ್ನು ಇದೀಗ ಪರಿಶೀಲಿಸಲು ತಕ್ಕ ಸಮಯ. ನಮಗೆ ನಮ್ಮ ಬಾಳ್ವೆಯೇ ಮುಖ್ಯ; ಇಲ್ಲೇ ಎಲ್ಲ ಆಧ್ಯಾತ್ಮಿಕ ಚಟುವಟಿಕೆಗಳೂ ಅರ್ಥಪೂರ್ಣವಾಗಬೇಕಾಗಿದೆ ಎನ್ನುವ ನಿಲುವು ತಾಳುವ ಕೇನೋಪನಿಷತ್ತಿಗೆ ಮಹತ್ವ ಒದಗುವುದು ಇಲ್ಲಿಯ ಶಾಂತಿ ಮಂತ್ರದಿಂದ :

"ಓಂ ಸಹನಾವವತು ಸಹನೌ ಭುನಕ್ತು ಸಹವೀರ್ಯಂಕರವಾವಹೈ,

ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ,

ಓಂ ಶಾಂತಿ : ಶಾಂತಿ : ಶಾಂತಿ" –ನಾವಿಬ್ಬರೂ ಒಟ್ಟಿಗೆ ರಕ್ಷಿಸಿಕೊಳ್ಳೋಣ, ಒಟ್ಟಿಗೆ ಊಟ ಮಾಡೋಣ, ಜೊತೆ ಜೊತೆಯಾಗಿ ಬಲವನ್ನು ಹೆಚ್ಚಿಸಿಕೊಳ್ಳೋಣ; ನಮ್ಮ ಜ್ಞಾನ ಕಾಂತಿಯುಕ್ತವಾಗಲಿ, ನಾವಿಬ್ಬರು ವೈರಿಗಳಾಗದಿರೋಣ; ನಮ್ಮಿಬ್ಬರಿಗೆ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ ಶಾಂತಿ ಸಿಗಲಿ.

ಇದು ನಿಚ್ಚಳವಾಗಿ ಸಹಬಾಳ್ವೆಯ ನಿರೀಕ್ಷೆ; ಅದನ್ನೇ ಹಂಬಲಿಸುವ ಮಂತ್ರ. ಈಶಾವಾಸ್ಯದ ಶಾಂತಿ ಮಂತ್ರದ ನೇರವಾದ ಒತ್ತು ನೈತಿಕತೆಯ ಮೇಲಿದ್ದರೆ, ಇಲ್ಲಿ ಯದು ಅದೇ ನಿರೀಕ್ಷೆಯುಳ್ಳ ಹೆಚ್ಚು ಪದ್ಯಗುಣದಿಂದ ಕೂಡಿದ ಕಲಾತ್ಮಕ ಶಕ್ತಿಯದು. 'ಕೇನ್'ದ ಗುರು (ಮೂರನೆಯ ಅಧ್ಯಾಯ ಐದನೆಯ ಶ್ಲೋಕದಲ್ಲಿ) ಹೇಳುತ್ತಾನೆ: ಈ ಬಾಳಿನಲ್ಲೇ ಅನನ್ಯ ಸತ್ಯದ Absolute Truth (ಬ್ರಹ್ಮ) ಸಾಕ್ಷಾತ್ಕಾರವಾಗ ಬೇಕು. ಅದಿಲ್ಲದ ಈ ಬಾಳು ಹಾಳಾದಂತೆಯೇ. ಸತ್ಯದ ದರ್ಶನ ಈ ಬಾಳಿನಲ್ಲಿ ಎಷ್ಟು ಅಗತ್ಯವೋ ಅಷ್ಟೇ ಸಹಬಾಳ್ವೆ ಕೂಡ, ಈ ಗುರುವಿಗೆ.

"ನೈತಿಕತೆಯೇ ಧರ್ಮದ ತಿರುಳು" ಎನ್ನುವ ಈಶಾವಾಸ್ಯದ ಶಾಂತಿಮಂತ್ರ (ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತೆ) ಕ್ಕಿಂತ ಮತ್ತೂ ಹೆಚ್ಚು ಘನವಾಗಿ 'ಕೇನ'ದ ಶಾಂತಿಮಂತ್ರವು ನಮ್ಮ ವ್ಯಕ್ತಿತ್ವದಲ್ಲಿ ಲೀನವಾಗುವುದನ್ನು ಕಾಣು ತ್ತೇವೆ. ಈಶಾವಾಸ್ಯದ ನಿಲುವು ತಾತ್ವಿಕವಾದದ್ದು. 'ಕೇನ'ದಲ್ಲಿ ಇದು ಹೆಚ್ಚು

ಸಾಹಿತ್ಯಕವಾದನ್ನು. ಕೇನೋಪನಿಷತ್ತಿನಲ್ಲಿ ಸಹಬಾಳ್ವೆಯೇ ಆಧ್ಯಾತ್ಮಿಕ ಅನುಭವಕ್ಕೆ ದಾರಿ. ಹೀಗೆ ಸಹಬಾಳ್ವೆಯು ಒಂದೇ ತತ್ವ ತೀರಾ ತಾತ್ವಿಕ ಮಾತಾಗಿ ಬಂದಾಗಲೂ ಮತ್ತೊಮ್ಮೆ ಪದ್ಯದ ಆತ್ಮವಾಗಿ ಬಂದಾಗಲೂ ಉಂಟಾಗುವ ಪರಿಣಾಮದಲ್ಲಿಯ ವ್ಯತ್ಯಾಸವನ್ನು ಈ ಎರಡು ಶಾಂತಿಮಂತ್ರಗಳನ್ನು ತೂಗಿದಾಗ ಕಾಣಲು ಸಾಧ್ಯ. ಸಹಬಾಳ್ವೆ ಎರಡೂ ಕಡೆ ತೋರುತ್ತದಾದರೂ, "ಈ ವಿಶ್ವವೇ ದೇವರ ಮನೆ" (ಈಶಾವಾಸ್ಯಮಿದಂ ಸರ್ವಂ) ಎನ್ನುವ ಕಲ್ಪಿತ ಮನೋಭಾವದ, ಅಂತಹ ಕಲ್ಪನೆಯ ದೆಸೆಯಿಂದಾಗಿಯೇ ಸಾಚಾ ಎನ್ನಿಸಿಕೊಳ್ಳಲು ಹೆಣಗಬೇಕಾಗಿ ಬಂದ ಈಶಾವಾಸ್ಯದ ಶಾಂತಿಮಂತ್ರಕ್ಕಿಂತ, ಕಣ್ಣಿಗೆ ಕಟ್ಟುವ 'ನೌ' (ನಾವಿಬ್ಬರು) ಎನ್ನುವ ಸಾಹಿತ್ಯದ ಒಳ ಬಳಕೆಯ ಮಾತಿನ ಕೇನೋಪನಿಷತ್ತಿನ ಶಾಂತಿಮಂತ್ರವು ಪರಿಣಾಮದಿಂದ ಹೆಚ್ಚು ಆಪ್ತ ವೆನಿಸುತ್ತದೆ. ನಮ್ಮ ಆಧ್ಯಾತ್ಮಿಕ ವ್ಯಕ್ತಿತ್ವಕ್ಕಿಂತ ಇಂದ್ರಿಯಾಧೀನ ವ್ಯಕ್ತಿತ್ವಕ್ಕೆ ನೇರ ವಾಗಿ ದೇವತೆಗಳೆನಿಸುವ ಇಂದ್ರ ಮುಂತಾದವರ ಸೋಲಿನ ಕಥಾನಕಕ್ಕೂ ಈ ಶಾಂತಿ ಮಂತ್ರವೇ ಚಾಲನೆ ನೀಡುತ್ತದೆ. ಇಲ್ಲಿ ಇದಿಷ್ಟೂ ಕಾಣುವುದು ಕಾವ್ಯಕ್ಕೆ ಸಂವಾದಿ ಯಾಗಬಲ್ಲ ಕೇನೋಪನಿಷತ್ತಿನ ಶಾಂತಿಮಂತ್ರದ ಪ್ರಸನ್ನ ಶೈಲಿಯಿಂದಲೇ ನಮ್ಮ ದೈನಂದಿನವಾದ ಒಟ್ಟಿಗೆ ಉಣ್ಣುವ, ಓದುವ, ಒಟ್ಟಿಗೇ ಪ್ರವರ್ಧಮಾನರಾಗುವ ದ್ವೇಷಿಸಿಕೊಳ್ಳದಿರುವ ಪರದಾಟಗಳೇ ಶೋಭಾಯಮಾನವಾಗಿ ಬೆಳಗಿ ನಮಗೆ ಪ್ರಿಯ ವೆನಿಸುತ್ತವೆ, ಹೀಗೆ ಈ ಬಾಳ್ವೆಯಲ್ಲೇ ಆಧ್ಯಾತ್ಮಿಕ ಅನುಭವ ಪಡೆಯಬೇಕೆನ್ನುವ ಗುರು ನಮ್ಮ ದೈನಂದಿನಗಳ ಮೂಲಕವೇ ನಾವು ನಿಜಕ್ಕಾಗಿ ಕಾವಿಗೆ ಕೂರಬೇಕೆನ್ನುತ್ತ ದೈನಂದಿನವನ್ನೇ ಆಧ್ಯಾತ್ಮಿಕ ಚಟುವಟಿಕೆ ಅದಲು ಬದಲಾಗಿಸುತ್ತಾನೆ.

೦ ೦ ೦ ೦

ಸಾಹಚರ್ಯ_ಸಹಬಾಳ್ವೆಗಳಿಂದ ಮಾತ್ರವೇ ಪಕ್ವಗೊಳ್ಳಬೇಕಾದ ಮನುಷ್ಯನ ಆಧ್ಯಾತ್ಮಿಕ ಸಾಧನೆ ವೈಯಕ್ತಿಕವಾಗಿ ಉಳಿಯುವುದು ಸಾಧ್ಯವಿಲ್ಲ. ಅವನ ಅನುಭವ ನಿಗೂಢವಾಗಿ ಉಳಿಯದೆ ಭಾಷೆಗೆ ತರ್ಜುಮೆಗೊಂಡು ತನ್ನ ಜೊತೆ ಸಾಹಚರ್ಯದ ವ್ರತದಲ್ಲಿ ತೊಡಗಿದವನಿಗೆ ತಲುಪಲು ಸಿದ್ಧವಾಗುತ್ತದೆ. ಗುರು ಆಧ್ಯಾತ್ಮಿಕ ಅನುಭವದ ಪರಮಗಮ್ಯವಾದ ಬ್ರಹ್ಮದ (ಅದೇ ಆತ್ಮಜ್ಞಾನ ಹಾಗು, ಸತ್ಯದ ದರ್ಶನ ಕೂಡಾ) ಕುರಿತು ಹೀಗೆ ಮಾಹಿತಿ ನೀಡುತ್ತಾನೆ;—

"ಬ್ರಹ್ಮ ಕಿವಿಯ ಕಿವಿ, ಮನಸ್ಸಿನ ಮನಸ್ಸು, ಮಾತಿನ ಮಾತು, ಪ್ರಾಣದ ಪ್ರಾಣ, ಕಣ್ಣಿನ ಕಣ್ಣು; ಬ್ರಹ್ಮನಿಗಾಗಿ ಈ ಎಲ್ಲ ಇಂದ್ರಿಯಸುಖವನ್ನೂ ತ್ಯಜಿಸುವ ಧೀಮಂತರರಿ ಅಮೃತಾತ್ಮರಾಗುತ್ತಾರೆ. ಬ್ರಹ್ಮನ ಬಗ್ಗೆ ತಿಳಿಸಲು ಯಾವ ಇಂದ್ರಿಯವೂ ಸಮರ್ಥ ವಲ್ಲ. ನಮಗಂತೂ ಗೊತ್ತಿಲ್ಲ; ಮತ್ತೊಬ್ಬನಿಗೆ ಇದನ್ನು ತಿಳಿಸುವುದು ಹೇಗೆಂತಲೂ

ನಮಗೆ ಗೊತ್ತಿಲ್ಲ. ನಮಗೆ ಈತನಕ ಗೊತ್ತಿರುವ ಎಲ್ಲದಕ್ಕಿಂತ ಇದು ಬೇರೆ. ತಿಳಿಯದೇ ಉಳಿದುದಕ್ಕಿಂತ ಬೇರೆ. ಇದಿಷ್ಟನ್ನು ಮಾತ್ರ ನಮ್ಮ ಪೂರ್ವಜರಿಂದ ನಾವು ತಿಳಿದದ್ದು."

"ಮಾತು ಇದನ್ನು ವಿವರಿಸಲಾರದು, ವರ್ಣಿಸಲಾರದು. ಆದರೆ ಮಾತು ಇದರಿಂದ ಆಕಾರ ಪಡೆಯುತ್ತದೆ; ಮನಸ್ಸಿಗೂ ಇದು ಹೊಳೆಯದು, ಆದರೆ ಇದರಿಂದಲೇ ಮನಸ್ಸು ಯೋಚಿಸಬಲ್ಲದಾಗುತ್ತದೆ; ಕಣ್ಣು ಇದನ್ನು ಕಾಣದು, ಆದರೆ ಇದರಿಂದಲೇ ಕಣ್ಣಿಗೆ ದೃಷ್ಟಿ ಸಿಗುತ್ತದೆ; ಇದನ್ನು ಕಿವಿ ಆಲಿಸದು, ಆದರೆ ಕಿವಿಗೆ ಇದರಿಂದಲೇ ಆಲಿಸುವ ಶಕ್ತಿ ಬರುತ್ತದೆ; ಪ್ರಾಣದಿಂದ ಇದು ರಂಜುವಾತುಗೊಳ್ಳಬಾರದು, ಆದರೆ ಪ್ರಾಣ ಇದರಿಂದಲೇ ನಿರಂತರವೆನಿಸುತ್ತದೆ. ಒಟ್ಟಿನಲ್ಲಿ, ಬ್ರಹ್ಮ ನಮ್ಮ ಅರಿವು–ಇರವಿನ ಆಚೆಯದು. ನಾವು ಆರಾಧಿಸುತ್ತ ಬಂದ ಯಾವ ಆಕಾರವೂ ಇದಲ್ಲ."

"ಇಲ್ಲಿ ನಮಗೆ ತಿಳಿದ ದೇವತೆಗಳಿಗೂ ಕೂಡ ಸೋಲುತ್ತಾರೆ. ನನಗಿದು ತಿಳಿದಿದೆ ಎಂದು ನಾನಂತೂ ಅನ್ನಲಾರೆ. ಆದರೆ, ನನಗಿದು ತಿಳಿದಿಲ್ಲ ಎನ್ನುವುದೂ ನನ್ನಿಂದಾಗದು. ನಮ್ಮಲ್ಲಿ ಇಷ್ಟನ್ನು ತಿಳಿದವನು, ತಿಳಿಯಬಲ್ಲ. ಆದರೆ ತನಗಿದು ಗೊತ್ತಿಲ್ಲ ಎಂಬ ಅರಿವಿಲ್ಲದವರೂ ನಮ್ಮಲ್ಲಿ ಇದ್ದಿರಬಹುದು."

"ಬ್ರಹ್ಮನ ಕುರಿತು ಚಿಂತಿಸದವನಿಗೂ ಇದರ ಅರಿವು ಇದ್ದಿರಬಹುದು; ಇದರ ಕುರಿತೇ ಯೋಚನೆಯಲ್ಲಿ ಮಗ್ನನಾದವನಿಗೆ ನಿಜವಾಗಿಯೂ ಇದು ತಿಳಿಯುವುದಿಲ್ಲ. ಜ್ಞಾನಿ ಎಂದು ತನ್ನನ್ನು ಭಾವಿಸಿಕೊಳ್ಳುವವ ಜ್ಞಾನಿಯಲ್ಲ; ಆದರೆ ತನ್ನನ್ನು ಅಜ್ಞಾನಿ ಎಂದುಕೊಂಡವನಿಗೆ ಇದು ಹೊಳೆದಿರಬಹುದು."

"ಪ್ರತಿಯೊಂದು ಎಚ್ಚರದ ಸ್ಥಿತಿಯಲ್ಲಿಯೂ ಇದರ ಗ್ರಹಿಕೆ ಇರುವವನಿಗೆ ಮಾತ್ರ ಇದು ಹೊಳೆಯಬಲ್ಲದು. ಈ ಮಿಂಚಿನ ಗ್ರಹಿಕೆಯೇ ಅಮೃತತ್ವಕ್ಕೆ ದಾರಿ. ಹೀಗೆ ಮನುಷ್ಯ ಬ್ರಹ್ಮಸಾಕ್ಷಾತ್ಕಾರಕ್ಕೆ ತಾನೇ ಸಾಧನವಾಗುತ್ತಾನೆ, ಅಮೃತನಾಗುತ್ತಾನೆ. ನಾವು ಈ ಜೀವನದಲ್ಲಿಯೇ 'ಸತ್ಯ'ವನ್ನು ಕಂಡುಕೊಳ್ಳಬೇಕು. ಇಲ್ಲದಿದ್ದರೆ ಎಲ್ಲವೂ ವ್ಯರ್ಥ. ಹೀಗೆ ಆಧ್ಯಾತ್ಮಿಕವಾಗಿ ಧೀಮಂತರಾದವರು ಪ್ರತಿಯೊಂದು ಚೇತನದಲ್ಲಿಯೂ ಏಕರೂಪದ 'ನಿಜ'ವನ್ನು ಕಾಣುತ್ತ ಇಲ್ಲಿಂದ ಅಮೃತತ್ವಕ್ಕೆ ನಿರ್ಗಮಿಸುತ್ತಾರೆ."

"ಇದು ಎವೆಯಿಕ್ಕುವಾಗಿನಷ್ಟು, ಬೆಳಕಿನ ಒಂದು ಸೆಳಕಿನಷ್ಟು, ತೋರಬಹುದು; ದೇವತೆಗಳಿಗೆ ಹೊಳೆದರೂ ಸಹ ಇದು ಹೀಗೇ. ಒಂದು ದುರ್ಬಲವಾದ ಹೋಲಿಕೆಯಿಂದ ಹೇಳುವುದಾದರೆ, ಮನಸ್ಸು, ನೆನಪಿಸಿಕೊಳ್ಳುವಾಗ ಆ ವಿಷಯದ ಕಡೆಗೆ ಚಲಿಸಿದಂತೆ ತೋರುತ್ತದಲ್ಲವೇ, ಹಾಗೇ ಮನುಷ್ಯನಿಗೆ ಈ 'ನಿಜ' ತನ್ನತ್ತ ಚಲಿಸಿದಂತೆ ಹೊಳೆಯುತ್ತದೆ."

"ಆಧ್ಯಾತ್ಮಿಕ ಅನುಭವವು ನಮ್ಮ ವ್ಯಕ್ತಿತ್ವದ ಅತ್ಯಂತ ಆಳದಲ್ಲಿ ಮುಚ್ಚಿರುವ ಕಾರಣ ತುಂಬ ಪ್ರಿಯವಾಗಬಲ್ಲದು. ಈ ಅನುಭವವಲ್ಲಿಯೇ ನಮ್ಮನ್ನು ಪೂರ್ತಿ ಕೇಂದ್ರೀಕರಿಸಿಕೊಳ್ಳಬೇಕು. ಬಹುಶಃ ಈ ಸ್ಥಿತಿ ಅನಿವಾರ್ಯ, ಮಂಗ್ನತೆ, ತನ್ನ ವರ್ತನೆಯ ಪರಿಶೀಲನೆ, ತನ್ನ ದೈನಂದಿನದಲ್ಲಿ ಪ್ರೀತಿ—ಇವೇ ಆಧ್ಯಾತ್ಮಿಕ ಅನುಭವಕ್ಕೆ ಬೆಂಬಲವಾಗುತ್ತವೆ. ಆಧ್ಯಾತ್ಮಿಕ ಅನುಭವ ಅನಿವಾರ್ಯ ಎಂದು ಮನಗಂಡಾಗ ಮಾತ್ರ ಮನುಷ್ಯ ಪಾಪವನ್ನು ಜಯಿಸಬಲ್ಲ."

ಇದೇ ತಾತ್ವಿಕ ಅನ್ವೇಷಣೆಯನ್ನು ಎದುರುಬದುರಾಗಿಸುತ್ತ ನೆರಳನ್ನು ಅಳಿಸುತ್ತ ಹದಗೊಳ್ಳುವ ವ್ರತ. ನಮ್ಮ ಬದುಕಿನ ರೀತಿಯೇ ನಮ್ಮ ಆಧ್ಯಾತ್ಮಿಕ ಚಟುವಟಿಕೆ ಎನ್ನುವ 'ಕೇನ' ಮನುಷ್ಯನ ಬಗ್ಗೆ ಶುಭ ನುಡಿಯುವ ಉಪನಿಷತಾದರೂ ಇಡೀ ಉಪನಿಷತ್ತಿನಲ್ಲಿ ಶಾಂತಿಮಂತ್ರವೊಂದನ್ನು ಬಿಟ್ಟು ವಾಗರ್ಥಕ್ಕೆ ಬೇಕಾದ ಛಂದದ ಬಗ್ಗೆ ನಿರುತ್ಸಾಹ ಕಾಣುವುದರಿಂದ ಮಾತನ್ನು ಪ್ರೀತಿಸುವ ಸ್ವಭಾವದ ನಮಗೆ ಇಲ್ಲಿ ಸಿಗುವ ಸಾಂತ್ವನ ಗಮನಾರ್ಹವೆನಿಸಲಾರದು. ಇದಕ್ಕೆ ಕಾರಣ, ನಾವು ಈ ಮೊದಲೇ ಪರಿಶೀಲಿಸಿದಂತೆ, ಈ ಉಪನಿಷತ್ತಿನ ಎರಡನೆಯ ಬಗೆ. ಆದರೆ ಕೇನೋಪನಿಷತ್ತಿನ ಮನೋಭೂಮಿಯನ್ನು ಅರಿಯಲಾದಾಗ ಇದು ಗೆಲ್ಲುತ್ತದೆ.

●

ಎರಡು ಹಾಡುನ ಹಾಡು

೧. ಹೃದಯ ಗೀತೆ

ಹಾಡೊಂದು ಹಾಡುವಿರಾ ಎನಗಾಗಿ ನೀವು
ಕೇಳುವೆನು ಎಲ್ಲರೊಳು ಒಂದಾಗಿ ನಾನು ॥ಪ॥

ಬೇಕಿಲ್ಲ ಎನಗೆ ಮಂಜು ಮುಸುಕಿದ ಹಾಡು
ತೊರೆ ತುಂಬಿ ಬರಲಿ ಎದೆ ತೆರೆದ ಹಾಡು

ಕೇಳಲಾರೆನು ನಾನು ಹಾಲು ಜೇನಿನ ಹಾಡು
ತುಂಬಲಾರಿರ ನೀವು ಹಾಡಿನಲಿ ಪಾಡು ?

ನಿಟ್ಟುಸಿರ ನಡುರಾತ್ರಿ ಬರಲಿ ಬಾನಿಗೆ ಬೆಳಕು
ಅವತಾರ ಎದ್ದು ಬರಲಿ ಅದಕೇಕೆ ಅಳಕು

ಜಯಪ್ರಕಾಶ ಮಾವಿನಕುಳಿ. ಶ್ರೀ ಮಹಾವೀರ ಕಾಲೇಜು, ಮೂಡುಬಿದ್ರೆ-574197

ಕುಣಿ ಕುಣಿದು ಬರಲಿ ಈ ಜಗಕೆ ಹರೆಯ
ಹುಟ್ಟಲಿ ಅಖಂಡ ಚೇತನ ಕಾಯಲಾರೆಯ ?

ತಿಕ್ಕಾಟದಲಿ ಚಿಮ್ಮಲಿ ಅಮೃತದ ಪಾಕ
ಸೀಳಿ ಬರಲಿ ಹಸಿರು ಬಾರೇ ಚುಂಬಕ

ಹೇಳದಿರಿ ಇಂಪಾಗಿ ಬಾಯಿ ಹೇಳುವ ಗೀತ
ಹಾಡುವಿರಾ ತಂಪಾಗಿ ನಿಮ್ಮ ಹೃದಯಗೀತ

೨. ಸಂಜೆಯ ಹಾಡು (ಯುಗಳ ಗೀತೆ)

ತುಂಬಿಹದು ದೇಹದಲಿ ಹೇಳಲಾಗದ ಹಾಡು
ಹೇಳುವೆನು ನಿನಗಾಗಿ ಗೆಳೆಯ ಈ ಕಡೆ ನೋಡು ॥ಪ॥

ಸಂಜೆ ತೀರುತಿದೆ ಆ ಸೊಬಗ ನೋಡ
ಸುಮ್ಮನಿರೇ ಸರೋಜ ಎನ್ನ ಕಾಡಬೇಡ
ಹೇಳುವೆನು ನಿನ್ನಲ್ಲಿ ಒಲ್ಲೆ ಎನಬೇಡ
ನೋಡಯ್ಯ ನಲ್ಲ ಮುರುಕು ವೀಣೆ ಪಾಡ
ದಟ್ಟವಾಗಿಹ ಮುಗಿಲ ತುಂಬಾ ಮೋಡ
ಬಾನನ್ನು ಭೇಧಿಸಿ ಬರಲಿ ಹೊಸ ಬಾಳ ಹಾಡ.
ದುಂಬಿ ಹೀರುತಲಿಹದು ಅರಳಿದ ಮಲ್ಲಿಗೆ
ಹಾರಾಡತಿಹುದು ಹಕ್ಕಿ ಬೀಸುವ ಗಾಳಿಗೆ
ತಪ್ಪುವುದು ಆಕಾಶ ಕೆಂಪಿನ ಧರೆಗೆ
ನೋಡು ಇನಿಯನೇ ಅಲ್ಲಿ ಹೋಗುವೆ ಎಲ್ಲಿಗೆ
ನೋಡೆ ಅದಾರು ಅಲ್ಲಿ ಚಂದಿರನ ಕಣ್ಣಲ್ಲಿ
ಕಳೆದ ಇರುಳಿನ ಮೇಲೆ ಬೆಳಕು ಬಂದಿದೆ ಅಲ್ಲಿ
ಹೊಸಕಂಪು ತುಂಬಿದೆ ಹಸಿ ಹಸಿ ಮಣ್ಣಲ್ಲಿ
ಬಾಡದಿರು ಸರೋಜ, ಮೌನದಲಿ ಬಾ ಇಲ್ಲಿ.

ಜಯಪ್ರಕಾಶ ಮಾವಿನಕುಳಿ

ದೂರದಿಂದ

ಆ ಒಂದು ದ್ವೀಪಕಲ್ಪದೊಳಗೆ ಸಂಜೆ ಹೊಂಬೆಳಕೊಳಗೆ ಹೊಂಚಿ ಕೂತಿದೆ ಸಾವು
ಆ ಒಂದು ದ್ವೀಪಕಲ್ಪದೊಳಗೆ ಪ್ರತಿಧ್ವನಿಸುತ್ತಿವೆ ಕೊರಳುಗಳು
ದೃಷ್ಟಿ ಕಳೆದುಕೊಂಡಿದೆ ಕಣ್ಣು, ಬೆಳಕು ಕಳೆದುಕೊಂಡಿವೆ ನೆರಳು
ಹಣ್ಣೆಲೆಗಳ ನಿರಂತರ ಪ್ರೇಮಿಗಾಳಿ ಬಂಧಿತ ಈಜುಗಾರನ ಕಟ್ಟು ಬಿಚ್ಚಿಸಿದಿದೆ
ಮಾಂಸದುಂಡೆಗಳಿಲ್ಲದ, ಅಸ್ಥಿಪಂಜರವಿಲ್ಲದ ಹೊಂಬೆಳಕಿನ ಸಂಜೆ ಅದು,
ಅಂತ್ಯಗಳಿಲ್ಲದ ಸಾವಿರ ಕತೆಗಳ ಬೆಳ್ಳಿ ಬೆಳಕಿನ ಸಂಜೆ ಅದು
ದೀಪಗಳು ಇಲ್ಲ, ಬಾವುಟಗಳಿಲ್ಲ, ನೆನಪು ಒನಪು ವಯಸ್ಸೊಂದೂ ಇಲ್ಲದ ಸಂಜೆ ಅದು
ಯಾಕೆಂದರೆ ಆಶ್ಚರ್ಯಕರ ಅನಿವಾರ್ಯ ದುರ್ಬರ ಘಟನೆಗಳು ಈ ದೇಶದಲ್ಲಿ
ಘಟಿಸುತ್ತಿರುವಾಗ
ನಾವು ಚರ್ಚಿಸುತ್ತಿರುವೆವು ನಿರ್ವಿಕಾರವಾಗಿ ಮಾಮೂಲು ಸಂಗತಿಗಳ ಕುರಿತು
ಹಿಮವರ್ಣದ ಕೋಣೆ ಶ್ವೇತ ಪುಷ್ಪಗಳ ನಡುವೆ ಜೀವ ಬೆಳಕಿನ ಬಣ್ಣ ಕಳೆದುಕೊಂಡಿವೆ
ಕಣ್ಣು

ಕ್ರಿಸ್ಟೋಫರ್ ಒಕಿಕ್ಬೊ

ಕ್ರಿಸ್ಟೋಫರ್ ಒಕಿಕ್ಬೊ 1932ರಲ್ಲಿ ಹುಟ್ಟಿದ್ದು. ಪೂರ್ವ ನೈಜೀರಿಯಾದ ಒಜಾಟೊ (Ojato) ಈತನ ಜನ್ಮಸ್ಥಳ. ಊಮುಯಾಪಾದ ಸರಕಾರಿ ಕಾಲೇಜಿನಲ್ಲಿ ಮತ್ತು ಯೂನಿವರ್ಸಿಟಿಯಲ್ಲಿ (ಇಬಡಾನ್) ಪದವೀಧರನಾದ. ವಿಶ್ವವಿದ್ಯಾಲಯದಲ್ಲಿ ಸಾಹಿತ್ಯವನ್ನು ಶಾಸ್ತ್ರೀಯವಾಗಿ ಅಭ್ಯಸಿಸಿದ. ಕೆಲವು ವರ್ಷ ಸಿವಿಲ್ ಸರ್ವೀಸ್‌ನಲ್ಲಿ, ಮತ್ತೂ ಕೆಲವು ವರ್ಷ ಪ್ರಾಧ್ಯಾಪಕನಾಗಿಯೂ, ಕೆಲವು ವರ್ಷಗಳು ಗ್ರಂಥ ಪಾಲಕನಾಗಿಯೂ ಕೆಲಸ ಮಾಡಿದ. ಮುದ್ರಣ ಕಾರ್ಯದಲ್ಲೂ ಬದುಕ ಲೆತ್ನಿಸಿದ ಕ್ರಿಸ್ಟೋ ಬಯಾಫ್ರಾನ್ (Biafran) ಸೈನ್ಯವನ್ನು 1967ರಲ್ಲಿಸೇರಿ ಅದೇ ಸೆಪ್ಟೆಂಬರಾ ಮಾಹೆ ಸುಕ್ಕಾ (Nsukka) ಬಳಿ ಅಂತರ್ ಯುದ್ಧದಲ್ಲಿ ಮರಣಹೊಂದಿದ.

ಪ್ರಮುಖ ನೈಜೀರಿಯನ್ ಕವಿಯಾದ ಕ್ರಿಸ್ಟೋ ತಾನು 1960–62ರ ನಡುವೆ ಬರೆದ ಕವಿತಾ ವೃತ್ತಗಳನ್ನು 'Heavensgate' ಎಂಬ ಶೀರ್ಷಿಕೆಯಡಿ ಸಂಕಲಿಸಿ ಪ್ರಕಟಿಸಿದ. 1962 ರಲ್ಲಿ Limitis ಎಂಬ ಕಾವ್ಯ ಸಂಕಲನ ಪ್ರಕಟಿಸಿದ. Distances ಎಂಬ ಕವನ ಸಂಕಲನ 1964ರಲ್ಲಿ ಪ್ರಕಟಗೊಂಡಿತು. ಆತ ಮರಣಾನಂತರ Labyrinths, Heinemann, ಮತ್ತು Paths of Thunder ಎಂಬ ಮೂರು ಕವನ ಸಂಗ್ರಹಗಳು ಪ್ರಕಟಗೊಂಡು ಕವಿ ಕ್ರಿಸ್ಟೋ ಅಜರಾಮರಗೊಳಿಸಿದವು. ಭಾವಗೀತಾತ್ಮಕ ದಾಟಿಯ ಈತನ ಕಾವ್ಯ ತೃತೀಯಜಗತ್ತಿನ ಜನಪರ ಸಾಹಿತಿಗಳ ಅಂತಃಕರಣ ಕಲಕಿದೆ. ನಂತರದ ನೈಜೀರಿಯನ್ ಕವಿಗಳಾರಿಗೂ ಕ್ರಿಸ್ಟೋನ ಪ್ರಭಾವದಿಂದ ತಪ್ಪಿಸಿಕೊಳ್ಳಲಾಗಿಲ್ಲ.

ಕುಂ. ವೀರಭದ್ರಪ್ಪ, ಗೂಳ್ಯಂ-518 348, (ಕರ್ನೂಲ್, ಎ.ಪಿ.)

ಛಿದ್ರ ಬೆಳಕಿನ ಜ್ವಾಲಿ ಕೋಣೆ ಮೊಸಚಾದ ಶರಶಯ್ಯೆ ಸ್ಟ್ರೆಚರ್ ಮೇಲೆ ಮಲಗಿಸಿ ನನ್ನ
ನನ್ನ ಕಣ್ಣು ಅವುಗಳ ರಕ್ತನ ಕೊನೆಬಿಂದು ಇಣುಕುವವರೆಗೆ, ರಕ್ತ ತನ್ನ ವರ್ಣ ರುಚಿ
ಕಳೆದುಕೊಳ್ಳುವವರೆಗೆ
ಛಾರಿಭದ್ರ ಕಿಟಕಿಯೊಳಗಿನ ನಿರಂತರಾಗ್ನಿ ಗಾಳಿಯೊಳಗಿನ ರುಚಿಯು ಬದಲಿಸಿದೆ,
ಒಂಟಿತನ ಸೋಪಿನೊಳಗಿನ ಶಬ್ದ ಮಾತಿನ ರೂಪ್ರ ಕಾಣದೆ ಅಂತ್ಯ ಕಂಡಿದೆ ಒಳಗೆ
ಅವರವರ ನೃತ್ಯಬಂಗಿಯೊಳಗೆ ಬಂಧಿತರು ಪ್ರಸಿದ್ಧ ನರ್ತಕರು
ಮುಖ ಕೈಕಾಲುಗಳಿಗೆಲ್ಲ ಶೃಂಖಲೆಗಳು ಮಧ್ಯಭಾಗದ ಮೆಲೇ ರಕ್ತ ಸಾರಣೆ
ಇವುಗಳೆಲ್ಲವುಗಳ ಹಿಂದೆ, ಶ್ವೇತ ನಿಲುವಂಗಿದಾರಿತ ಸಾವು ಘಮ ಘಮ ಊದುಬತ್ತಿ
ಲೋಟಾನ ಹೊಗೆ ಮಬ್ಬೊಳಗೆ ಕತ್ತರಿಸುತ್ತಿದೆ ಕೊರಳುಗಳ
ಆಕೆಯು ಪಾದನ ಬಳಿ ಹಣ್ಣು ಚೂರುಗಳಂತೆ ಅವರ ತಲೆ ತುಂಡುಗಳು
ನೈವೇದ್ಯದ ತುಂಡುಗಳಂಥ ಅವರ ಶರೀರದ ತುಂಡುಗಳು ಮಿಡತೆ ದಂಡುಗಳಾಗಿ ಎದ್ದು
ಎರಗುವವು ಅವಳ ಮೇಲೆ
ಬಿಸಿಲಿಗೊಣಗಲಿಟ್ಟ ಸೇವಾಸು ಸೇವಕರ ತುಂಡು ತುಂಡಾದ ದೇಹಗಳು ತಾವಿರುವ
ಜಾಗದಲ್ಲೇ ಬೆಳೆಯುತ್ತಿವೆ,
ಸೇವಕರ ನೆತ್ತರೊಳಗೆ ಆಕೆ ತೊಳೆದುಕೊಳ್ಳುತ್ತಾಳೆ ತನ್ನ ಮೃದು ಪಾದಗಳ
ಸೇವಕರ ಗರ್ಭಾಂತರಂಗದಲ್ಲಿಲ್ಲೋ ಆಕೆಯು ನಿಲುವಂಗಿ.

ಅನುವಾದ : ಕುಂ. ವೀರಭದ್ರಪ್ಪ

ಆರು ಹೊಸ ಸಂಕಲನಗಳು

—ಸತೀಶ ಕುಲಕರ್ಣಿ

ಇಲ್ಲಿ ನಾನು ಆಯ್ದುಕೊಂಡ ಆರು ಸಂಕಲನಗಳು ಈ ಕಡೆಯ ಆರು ಕವಿಗಳವು. ಆಡುಮಾತು ಉತ್ತರ ಕರ್ನಾಟಕ ಕಾವ್ಯ ವಿಶಿಷ್ಟತೆ. ಬೇಂದ್ರೆ ಮೂಲಕ ಮಹತ್ವ ಪಡೆದ ಈ ಪರಂಪರೆ ಕಣವಿ ಹಿಂಗಮುರೆ, ಕಂಬಾರ–ಚಂಪಾ-ಪಟ್ಟಣಶೆಟ್ಟಿ–ಇಮ್ರಾಪೂರ–ಸಿದ್ದಲಿಂಗದೇಸಾಯಿ ತನಕ ಹಬ್ಬಿವೆ. ಚಂಪಾ–ಪಟ್ಟಣಶೆಟ್ಟಿ ತರುವಾಯು ಸಾವಕಾಶ ಹೊಸ ದನಿಗಳು ಹುಟ್ಟಿಕೊಳ್ಳುತ್ತಿವೆ. ದಲಿತ ಬಂಡಾಯ ಸಂದರ್ಭದ ಅಬ್ಬರದ ಒಂದು ಹಂತ ಮುಗಿದು, ಪ್ರಯೋಗಶೀಲ ಕಾವ್ಯ ಕೃಷಿಯು ಎರಡನೆಯ ಹಂತದ ಇಲ್ಲಿ ಆಯ್ದ ಆರು ಸಂಕಲನಗಳು ಬಹಳಷ್ಟು ಭರವಸೆ ಹುಟ್ಟಿಸುತ್ತವೆ. ಸರಜೂ ಕಾಟಕರ (ವ್ಯಾನಿ

ಸತೀಶ ಕುಲಕರ್ಣಿ, ವಿದ್ಯಾನಗರ, ಹಾವೇರಿ(ಧಾರವಾಡ)

ಫೆಸ್ಟೊ) ಮಾಲತಿ ಪಟ್ಟಣಶೆಟ್ಟಿ (ತಂದೆ ಬದುಕು ಗುಲಾಬಿ) ನಜೀರ ಚಂದಾವರ(ಕಾತರ) ಶಂಕರ ಕಟಗಿ (ಮುಸ್ಸಂಜೆ ನೆರಳಿನಲ್ಲಿ) ಸಿದ್ದನಗೌಡ ಪಾಟೀಲ (ಸಾಕ್ಷಿಗಳು ಮಾರಾಟಕ್ಕಿವೆ) ಮತ್ತು ಸಿ.ಎಂ. ಚನ್ನಬಸಪ್ಪ(ಮತ್ತೆ ಬಂದಿದೆ ಚೈತ್ರ).

ಇಲ್ಲಿ ಆರು ಸಂಕಲನಗಳ ವಿಮರ್ಶೆಗಿಂತ, ಕವಿ–ಕಾವ್ಯ ಸಂಬಂಧವಲ್ಲಿ ಒಟ್ಟಾರೆ ಅಭಿಪ್ರಾಯ ರೂಪಿಸುವದು ಲೇಖನದ ಉದ್ದೇಶ. ಕವಿಯ ಇತಿ ಮಿತಿಗಳು, ಕಾವ್ಯಶೈಲಿ, ಕಾವ್ಯಧೋರಣೆ, ಗುಣ ದೌರ್ಬಲ್ಯಗಳು ಒಟ್ಟಾಗಿ ಅನಿಸಿದಂತೆ ಬರೆದಿರುವೆ. ಬಾರು, ಪಾರ್ಕುಗಳಲ್ಲಿ ಚರ್ಚೆಯಾಗಿ ದಮನ ಮಾಡುವ ಹಾಳು ಹರಟೆಗಿಂತ, ಮುಕ್ತ ಅನಿಸಿಕೆಗಳ ಬರಹ ಆರೋಗ್ಯಪೂರ್ಣ ಚರ್ಚೆಗೆ ಅವಕಾಶ ಮಾಡಿಕೊಡುವುದೆಂಬ ನನ್ನ ಆಶಯ. ಸರಜೂ, ಸಿದ್ಧನಗೌಡ, ಕಟಗಿ. ಚೆನ್ನಬಸಪ್ಪನವರ ಕಾವ್ಯ ಧೋರಣೆಗಳು ದಲಿತ ಬಂಡಾಯದ ಹಿನ್ನೆಲೆಯಲ್ಲಿ ರೂಪಿತವಾಗಿವೆ. ಮಾಲತಿ, ನಜೀರ, ಸ್ವಲ್ಪ ಬೇರೆ ರೀತಿಯಲ್ಲಿ ಕಾವ್ಯಕ್ಕಿಳಿದವರು. ಜನರೊಳಗೆ ಮೊದಲಿನ ಕವಿಗಳು ನಿಂತರೆ, ಹೊರ ನಿಂತು ಜೀವನಾನುಭವಗಳ ನೋಡಿದವರು ಎರಡನೆಯ ಕವಿಗಳು. ಕಳೆದ ಒಂದು ವರ್ಷದ ಅವಧಿಯಲ್ಲಿ ಈ ಸಂಕಲನಗಳು ಪ್ರಕಟವಾಗಿವೆ–ಎಂಬುದು ಇಲ್ಲಿ ಗಮನಿಸಬೇಕಾದ ಅಂಶ.

1) **ಮ್ಯಾನಿಫೆಸ್ಟೊ** ಸರಜೂ ಕಾಟಕರ ಕಳೆದ ಒಂದೂವರೆ ದಶಕದಿಂದ ಬರೆಯುತ್ತಿದ್ದಾರೆ. ಎಲ್ಲ ಜನಪರ ಚಳುವಳಿಗಳಲ್ಲಿ ಪಾಲ್ಗೊಂಡವರು. ಹಸಿದ ನೆಲ, ಸೂರ್ಯ ಸಂಕಲನಗಳ ನಂತರ ಮ್ಯಾನಿಫೆಸ್ಟೊ ಸಂಕಲನ ಬಂದಿದೆ. ಈಗಾಗಲೇ ಹೇಮಾ ಪಟ್ಟಣಶೆಟ್ಟಿ, ಸುಮತೀಂದ್ರ ನಾಡಿಗ, ಶರತ ಕಲ್ಕೊಡ್ ಮ್ಯಾನಿಫೆಸ್ಟೊ ಬಗ್ಗೆ ಬರೆದಿದ್ದಾರೆ. ಸೂರ್ಯ, ಹಸಿದನೆಲ, ಸಂಕಲನದ ಹಿಂದೆ ಇದ್ದ ನವ್ಯದ ಪ್ರೇರಣೆ ಮ್ಯಾನಿಫೆಸ್ಟೊದಲ್ಲಿ ಬಂಡಾಯದ ಆಶಯಗಳಾಗಿ ಪರಿವರ್ತನಗೊಂಡಿದೆ. ಅಂಥ ಬಂಡಾಯ 'ಇಲ್ಲಿ ಪ್ರಣಾಳಿಕೆಯಾಗಿ' ಬಂದಿದೆ. ಸರಜೂ ಕಾವ್ಯ ಬರೆಯಬಲ್ಲರು. ಏಕಾಗ್ರತೆ ಇಲ್ಲದ, ಪ್ರಯೋಗಶೀಲತೆಯ ಮಹತ್ವಕಾಂಕ್ಷೆ ಇಲ್ಲದ, ಕಾವ್ಯ ಕರ್ಮ ಸರಜೂ ಕಾವ್ಯದ ದಾರಿ. ಮೇಲ್ನೋಟದ ಕಾವ್ಯ ಸರಜೂ ಈಗಲೂ ಬರೆಯುತ್ತಿದ್ದಾರೆ. ಸದಾ ಹೆಚ್ಚು ವಾಚ್ಯವೆನಿಸುವ ಸರಜೂ, ಶಬ್ದ ದುಂದುಗಾರ. ತಮ್ಮ ಶೈಲಿಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕಿದೆ. ಜನ ಸಮುದಾಯಿಕ ತಹತಹದ ಗುಹೆಗಳಲ್ಲಿ ಇಳಿಯಬೇಕಿದೆ. ಮ್ಯಾನಿಫೆಸ್ಟೊದ ಯುದ್ಧ, ನಿರ್ಣಯ ಕೆಲವು ಕವಿತೆಗಳು ಈ ದಿಕ್ಕಿನಲ್ಲಿವೆ.

2) **ತಂದೆ ಬದುಕು ಗುಲಾಬಿ** : ಮಾಲತಿ ಪಟ್ಟಣಶೆಟ್ಟಿ ಮೂಲತರ ಪೀಡಿತ ಕವಿಯತ್ರಿ. ಹೀಗಾಗಿ ಬಿಡುಗಡೆ, ಕನಸು, ಸ್ವಾತಂತ್ರ್ಯ, ಸಮೃದ್ಧಿ ಉದ್ದೇಶಗಳು, ಇಲ್ಲಿ ಮನೆ ಮಾಡಿವೆ. ಬಾ ಪರೀಕ್ಷೆಗೆ ಗರಿಗೆದರಿ ಸಂಕಲನಗಳ ನಂತರ 'ತಂದೆ ಬದುಕು ಗುಲಾಬಿ' ಸ್ವತಂತ್ರ ಪ್ರಯೋಗ. ಭಾವುಕತೆ ಉದ್ವೇಗಗಳು ಮುಳುಗಿ, ವಾಸ್ತವದ ನಿಚ್ಚಳ

ಶೂದ್ರ

ಕಾಳಜಿಗಳನ್ನು 'ತಂದೆ ಬದುಕು ಗುಲಾಬಿ'ಯಲ್ಲಿ ಕಾಣುತ್ತೇವೆ. ತೀರ ವೈಯಕ್ತಿಕ ಅನುಭವಗಳನ್ನು ಸಾಮಾಜಿಕ ರಚನೆಯ ಹಿನ್ನಲೆಯಲ್ಲಿಟ್ಟು ನೋಡುವ ಪ್ರಬುದ್ಧತೆ ಇಲ್ಲಿರುವುದಕ್ಕೆ ಬೇಕಾದಷ್ಟು ಪುರಾವೆಗಳಿವೆ. 'ಎಂದಿನಿಂದಲೊ ಸತಿ/ನಾ ಚಿತೆ ಏರಿದವಳು' ಎನ್ನುವ ಮಾತು 'ಶತ ಶತಮಾನದಿಂದಲೇ ಪತಿಯ ಸಹಗಮನ' ಎಂದು ವ್ಯಾಪ್ತಿಗೊಳ್ಳುವವು. ನಮ್ಮ ಹಾಡು 'ಅಭಿಯ' ಕವಿತೆಗಳು ಹೆಣ್ಣಿನ ಲೋಕದ ತಳಮಳಗಳಿಗೆ ಅರ್ಥಪೂರ್ಣ ಸ್ವರೂಪ ನೀಡಿದಂಥವು (ಬಸವರಾಜ ಸಬರದ ಅವರ ಹಿಸ್ನುಡಿ ಭಾರವಾದುದು)

3) **ಮುಸ್ಸಂಜೆ ನೆರಳಿನಲ್ಲಿ :** ಶಂಕರ ಕಟಗಿ ಬಹಳ ವಿಚಿತ್ರ ಕವಿ. ಜನಪ್ರಿಯ ಜಾಹಿರಾತಿನ ಸ್ವರೂಪದ ಮನಸ್ಸಿನ ಕಟಗಿ ವಿಸ್ಮಯಗೊಂಡು ಬರೆಯಬಲ್ಲರು. ಕಟಗಿ ಅವರ ದೊಡ್ಡ ದೌರ್ಬಲ್ಯ–ಪ್ರಭಾವ. ಇದು ಮುಸ್ಸಂಜೆ ನೆರಳಿನಲ್ಲಿ ಒಡೆದು ಕಾಣುತ್ತದೆ. ಸಿದ್ಧಲಿಂಗಯ್ಯನವರ 'ಸಾವಿರಾರು ನದಿಗಳು' ಕಟಗಿ ಅವರ 'ಒಡೆದ ಕಡಲ ತೆರೆಗಳು' ಹೆಚ್ಚು ಆಜುಬಾಜು ನಿಲ್ಲುವಂಥವು. "ಒಂದು ದಿನ ನೂರು ಮನ ಒಡೆದ ಕಡಲ ತೆರೆಗಳು" ಆರಂಭವಾಗುವ ಕವಿತೆ "ಹೋರಾಟದ ಅಬ್ಬರಕೆ ಕೊರಗಿದವು ಒರೆಗಳು ಒಡೆದ ಕಡಲ ತೆರೆಗಳು" ಎಂದು ಮುಕ್ತಾಯವಾಗುತ್ತದೆ. ಜೀರ್ಣವಾಗದ ಪ್ರಭಾವ–ಇದು. ಒಂದು ಹಂತದಲ್ಲಿ ಅನಿವಾರ್ಯ ಕೂಡ. ಸಿದ್ಧಲಿಂಗಯ್ಯನವರಿಗೂ ಇಂಥ ಪ್ರಭಾವ ಇತ್ತೆಂಬುದಕ್ಕೆ ಇತ್ತೀಚೆಗೆ ಕೆ.ಎಸ್. ನರಸಿಂಹಸ್ವಾಮಿಯವರ 'ಶಿಲಾಲತೆ' ಓದುವಾಗ ಈ ಸಾಲುಗಳು ಸಿಕ್ಕವು.

ಮೂಳಿ ಚಪ್ಪರ ಕಣ್ಣು ದೀವಿಗೆ
ರಕ್ತ ಮಾಂಸದ ತೋರಣ
ಉಸಿರು ಬೆಂಕಿಯ ಗಾಳಿ ಹಾದಿಗೆ
ಹೆಡೆಯ ಬಿಚ್ಚಲು ಕಾರಣ

1958ರಲ್ಲಿ ಬರೆದ ಈ ಸಾಲುಗಳು 'ದೊಡ್ಡ ಗೌಡರ ಬಾಗಿಲಿಗೆ' ಹೋಲಿಸಿ ನೋಡಬಹುದು. ಶಂಕರ ಕಟಗಿ ಉತ್ತರ ಕರ್ನಾಟಕದ ಆಡುಮಾತನ್ನು ಅಲ್ಲಲ್ಲಿ ಸಮರ್ಥವಾಗಿ ಬಳಸಿಕೊಳ್ಳುತ್ತಿದ್ದಾರೆ. 'ಇದಿ ಮಾಯಿ' ಕವಿತೆ ಮಹತ್ವದ ಕವಿತೆ (ಜಿ.ರಾಜಶೇಖರ 'ಜೊತೆಯಾದವರು' ಸಂಕಲನದಲ್ಲಿ ಗಂಭೀರವಾಗಿ ವಿಮರ್ಶಿಸಿದ್ದಾರೆ). ಸಂಕಲನದಲ್ಲಿ ಹದಿಮೂರು ಕವಿತೆಗಳು ಹೆಣ್ಣಿನ ಭಿನ್ನ ಭಿನ್ನ ಮುಖಗಳ ಮೇಲಿವೆ.

4) **ಕಾತರ :**—ಪತ್ರಿಕೆಗಳ ಮೂಲಕ ಬಿಡಿ ಬಿಡಿಯಾಗಿ ಕವಿತೆ ಪ್ರಕಟಿಸಿದ ನಜೀರ, ಹೊಸ ಪ್ರತಿಭೆಗಳಲ್ಲಿ ಬೇಗ ಗುರುತಿಸಲ್ಪಡುವಂಥವರು. ವಯಸ್ಸಿನ ಸಹಜ 'ಕಾತರ'ಗಳ ಬಿತ್ತಿದ ನಜೀರ ಕಾವ್ಯ. ಮೂಲಭೂತವಾಗಿ ವಿಷಾದದ ನೆಲೆಯಿಂದ ಬೆಳೆದು

ನಿಂತಂತವರು (ರಾಮಚಂದ್ರ ಶರ್ಮ ಈ ಅಂಶವನ್ನು ಪ್ರಜಾವಾಣಿ ವಿಮರ್ಶೆಯಲ್ಲಿ ಗುರು ತಿಸಿದ್ದಾರೆ) ಈ ಕಡೆಗೆ ಗಝಲ್ : ಪ್ರಯೋಗ ಸಾಸಕಾಶ ಕಾಸಿಣಿಕೊಳ್ಳುತ್ತಿರುವಾಗ ನಜೀರ ದೊಡ್ಡ ಪ್ರಮಾಣದಲ್ಲಿ ಗಝಲ್‌ಗಳನ್ನು 'ಕಾತರ' ಸಂಕಲನದಲ್ಲಿ ಪ್ರಯೋಗಿಸಿದ್ದಾರೆ. ಉರ್ದು ಕಾವ್ಯದ ಪ್ರಭಾವ ಇಲ್ಲಿ ಸ್ಪಷ್ಟವಾಗಿ ಕಾಣುವದು. ಗಝಲ್ ನಜೀರರನ್ನು ಹಾಳೂ ಮಾಡಬಹುದು. ಅರಾಪಿಯೊಬ್ಬನ ನಿರ್ಲಿಪ್ತತೆಯಂತೆ ಯಾಂತ್ರಿಕವಾಗುವ ಕಾವ್ಯಕ್ರಿಯೆಗೆ ನಜೀರ ಬಲಿಯಾಗದಿರಲೆಂದು ಆಶೆ. ಹೊಸ ಪ್ರತಿಭೆಯ ನಜೀರರಿಂದ ಬಹಳಷ್ಟು ನಿರೀಕ್ಷಿಸಬಹುದು.

5) **ಸಾಕ್ಷಿಗಳು ಮಾರಾಟಕ್ಕಿವೆ:**— ವೈಜ್ಞಾನಿಕ ಸಿದ್ಧಾಂತಗಳ ಸಂಘಟನೆಗಳಲ್ಲಿ ತೊಡಗಿಸಿಕೊಂಡಿರುವ ಸಿದ್ಧನಗೌಡ ಪಾಟೀಲರ 'ಸಾಕ್ಷಿಗಳು ಮಾರಾಟಕ್ಕಿವೆ' ಗಮನಿಸಬಹುದಾದ ಸಂಕಲನ ಹೋರಾಟವನ್ನು ಕಾವ್ಯ ಮುಖೇನ ಬಳಸಿಕೊಳ್ಳುವ ಪ್ರವೃತ್ತಿ ಇತ್ತೀಚಿನ ದಿನಗಳಲ್ಲಿ ವಿಪುಲವಾಗುತ್ತಿದ್ದರೂ, ವಿಫಲವಾದವರು ಹೆಚ್ಚು. ಕಾವ್ಯ ಸೃಜನಶೀಲ ಕ್ರಿಯೆ ಎಂಬುದು ಗೌಣವಾದಾಗ ಇಂಥ ಅಪಾಯ ಎದುರಾಗುವದು ಸಹಜ. ಜನಪರ ಆಶಯದ ಸಿದ್ಧನಗೌಡ ಪಾಟೀಲ ಬಹಳಷ್ಟು ಯಶಸ್ವಿಯಾಗಿದ್ದಾರೆ. ದಲಿತ ಕವಿಗಳ ಒಂದು ವ್ಯಾಪಕ ಪ್ರಯೋಗದ ನಂತರ ತಣ್ಣಗಾಗುತ್ತಿದ್ದ ಹೋರಾಟದ ಹಾಡುಗಳು 'ಸಾಕ್ಷಿಗಳು ಮಾರಾಟಕ್ಕಿವೆ' ಸಂಕಲನ ಮೂಲಕ ಹೊಸ ನೀರಾಗಿ ಹರಿದುಬಂದಿದೆ. ಅಲ್ಲಲ್ಲಿ ವಾಚ್ಯವೆನಿಸುವ ಸಿದ್ಧನಗೌಡ 'ದಾರಿ' 'ಕೈದಿ' 'ಕ್ರಾಂತಿಕಾರಿ' ಕವಿತೆಗಳು ಹೊಸದೆನಿಸುತ್ತವೆ. ಸಹಜ ಅನುಭವಗಳು ಹರಳುಗಟ್ಟುವದು ಇಲ್ಲಿ ಕಾಣುವ ಇನ್ನೊಂದು ವೈಶಿಷ್ಟ್ಯ. 'ನಾ ಬಸ್ಯಾ ಅಂತ' ಸಂಕಲನದ ನಂತರ ಎರಡನೆಯ ಸಂಕಲನವಿದು.

6) **ಮತ್ತೆ ಬಂದಿದೆ ಚೈತ್ರ:**— ಒಮ್ಮೊಮ್ಮೆ ಹೊಸಬರ ಬಗೆಗೆ ಹೇಳುವ ಮಾತುಗಳು ಬರದಿದ್ದಾಗ ಗೌಣವಾಗುವ ಪ್ರತಿಭೆಗಳು ಪ್ರತಿ ಸಾಹಿತ್ಯ ವಿಮರ್ಶೆಯ ಅಪಾಯಗಳಲ್ಲೊಂದು. ಸಿ.ಎಂ. ಚೆನ್ನಬಸಪ್ಪನವರ 'ಮತ್ತೆ ಬಂದಿದೆ ಚೈತ್ರ' ಇತ್ತೀಚೆಗೆ ಬಂದ ಸಂಕಲನ. ಬಂಡಾಯದ ಎರಡನೆಯ ಹಂತದಲ್ಲಿ 'ಯಾರಿಗೆ ಬಂತು ಎಲ್ಲಿಗೆ ಬಂತು' ತರ್ಕದ ಹುಡುಕಾಟ 'ಮತ್ತೆ ಬಂದಿದೆ ಚೈತ್ರ'ದಲ್ಲಿ ಕಾಣಬಹುದು. ಈ ಸಂಕಲನದಲ್ಲಿ ಬಹಳಷ್ಟು ಹೇಳುವದು ಉಳಿದಿದೆ. ಸೃಷ್ಟಿ ಕ್ರಿಯೆ, ಕ್ರಾಂತಿಕಾರತೆಯ ಕವಲುದಾರಿಯಲ್ಲಿ ಇಲ್ಲಿಯ ಕವಿತೆಗಳಿವೆ. ಹೆಣ್ಣು–ಕ್ರಾಂತಿ ಕಾಡುವ ಹಿಂದಿನ ಕವಿಗಳಲ್ಲಿ ಚೆನ್ನಬಸಪ್ಪ ಕೊನೆಪಕ್ಷ ಹೆಣ್ಣಿನಿಂದ ಇಲ್ಲಿ ಬಿಡುಗಡೆ ಪಡೆದಿದ್ದಾರೆ.(ಒಂದು ಕವಿತೆ ಬಿಟ್ಟು)

ಕೊನೆಯ ಮಾತು:— ಈ ಕಡೆಯ ಈ ಆರು ಕವಿಗಳ ಬಗೆಗೆ ಸ್ಥೂಲವಾದ ಅಭಿಪ್ರಾಯ ಮೂಡಿದರೆ ಸಾಕು ಎಂಬುದು ಒಂದು ಆಶಯವಾದರೆ, ಸದಾ ಚರ್ಚಿತ ಕವಿಗಳ ಬಿಟ್ಟು ಹೊಸ ಹೆಸರುಗಳ ಬಗೆಗೆ ವಿಚಾರ ಮಾಡುವುದು ಈ ಟಿಪ್ಪಣಿಗಳ ಮೂಲ ಉದ್ದೇಶ.

●

ಮತ್ತೆ ಸೂರ್ಯ ಬರುತ್ತಾನೆ

ಸಸ್ಯ ಶ್ಯಾಮಲೆಯು
ಮಲೆಯು ಮಾಲೆಯು
ಅನಾಥ ಕಡಿದುಳಿದ ಕಾಂಡಗಳೇ
ಯಜ್ಞದಗ್ನಿಯಲಿ
ಚಿತಭಸ್ಮವಾದ ಶ್ರೀಗಂಧ ತರುಗಳೇ,
ನಳಿಗೆ ನಗುವಿಗೆ
ಛೀಳಿಟ್ಟ ಕಣಿವೆ ಕಾಡುಗಳ ಹಾಡೇ
ಸಾಕಿನ್ನು ಚಿಂತೆ
ಮತ್ತೆ ಸೂರ್ಯ ಬರುತ್ತಾನೆ.

ವಿಶಾಲ ಸಾಗರದ ಕರಿ ನೀರೇ
ಅಮಾಯಕರನ್ನಾವರಿಸಿದ ಸರಳೇ
ದಿಕ್ಕು ತಪ್ಪಿದ ಹಡಗು ಹಾಯಿಯೇ
ಬೇಕು ಗಾಣದ ಸೊಗಕೆ ಹೆಗಲು ಕೊಟ್ಟ ಎತ್ತೇ
ಯಾಕಿನ್ನು ಚಿಂತೆ
ಮತ್ತೆ ಸೂರ್ಯ ಬರುತ್ತಾನೆ.

ಲಾಠಿ ಬೂಟುಗಳಿಗೆ ತತ್ತರಿಸಿದ ಜನವೇ
ಗಂಟೆ ಜಾಗಟೆಗಳ ಸದ್ದಿನಲಿ ಕರಗಿದ
ಸನ್ನಿಪಾತ ಸಮೂಹವೇ
ಅಣು ಬಾಂಬುಗಳಿಗೆ ಬಂಜೆಗೊಂಡ ನೆಲವೇ
ಬಿಡಿ ಇನ್ನು ಚಿಂತೆ
ಮತ್ತೆ ಸೂರ್ಯ ಬರುತ್ತಾನೆ.

ಸಸ್ಯ ಶ್ಯಾಮಲೆಯು ಕತ್ತು ಹಿಸುಕಿ ಬೆಳೆದು
ಪಾರ್ಥೇನಿಯಂ ಕುಲವೇ

ಲೋಕೇಶ ಅಗಸನಕಟ್ಟೆ, ಉಪನ್ಯಾಸಕ, ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ-577501

ಕಾರ್ನಿಯಂ ಕಬಳಿಸಬಂದ ನಖಗಳೇ
ಕರುಳ ಬಳ್ಳಿಗೆ ತೊಡರಿದ ಕ್ಯಾನ್ಸರ್ ಹುಳುವೇ
ಹೃದಯ ಗವ್ವರದಲಿ
ಮನೆಯ ಮಾಡಿದ ಕುತಂತ್ರವೇ
ಎಚ್ಚರೆಚ್ಚರ
ಮತ್ತೆ ಸೂರ್ಯ ಬರುತ್ತಾನೆ

ಪುಟ್ಟ ದಿಟ್ಟ ಹಕ್ಕಿಗಳೇ
ಕೋರಿ ಕಂಠದಲಿ ಹಾಡಿ
ಕಾಡು ಕಣಿವೆ ಬೆಟ್ಟಗಳು ಮಾರ್ದನಿಸಲಿ
ಮತ್ತೆ ಸೂರ್ಯ ಬರುತ್ತಾನೆ.
ಬದನಿಕೆಯೂ
ಇರಲಿ ತನ್ನಂತೆ.

ಲೋಕೇಶ ಅಗಸನಕಟ್ಟೆ

ನಾಲ್ಕು ಪದ್ಯಗಳು

1. ಮಳೆಯ ಬಗ್ಗೆ
ಎಚ್ಚರಿಕೆ ವಹಿಸಿದ್ದಕ್ಕೆ,
ತೇವದಿಂದ ತಪ್ಪಿಸಿಕೊಂಡೆ,
ಮರದ ಹನಿಗಳನ್ನು
ಸಡ್ಡೆಗೈಯಲಿಲ್ಲ,
ಒದ್ದೆಮುದ್ದೆಯಾಗಿದ್ದೇನೆ.

2. ಬೆಂಕಿಯೊಂದೇ
ಉಳಿದ ದಾರಿ ಎಂದಾದಲ್ಲಿ,
ನಾನು
ಇದ್ದಲ್ಲೇ ಬಾಣಲೆಯಲ್ಲೇ
ಹುರಿದುಕೊಳ್ಳುತ್ತೇನೆ,
ಉಳಿದುಕೊಳ್ಳುತ್ತೇನೆ.

ಡಾ. ಹೆಚ್.ಎಸ್. ಸುಜಾತ,53, 'ಸುಹಾಸ' 6ನೇ ಬ್ಲಾಕ್, ಕುವೆಂಪುನಗರ, ಮೈಸೂರು-23

3. ರೊಟ್ಟಿ ಸಿಗಬಹುದು ಎನ್ನಿಸಿದಾಗ
ಬೆಣ್ಣೆಗಾಗಿ ಆಸೆ ಪಟ್ಟೆ,
ರೊಟ್ಟಿ ದಕ್ಕಲಿಲ್ಲ.

ಹಿಟ್ಟು ಸಿಕ್ಕೀತು ಎಂದುಕೊಂಡಾಗ
ಉಪ್ಪಿಗಾಗಿ ಕಾತರಿಸಿದೆ,
ಹಿಟ್ಟು ಗಿಟ್ಟಲಿಲ್ಲ.

ಈಗ,
ತವುರು ಜಗಿದು
ಹೊಟ್ಟೆ ಹೊರೆದು
ಆಶಾವಾದಿಯಾಗಿದ್ದೇನೆ.

4. ಕತ್ತಲಲ್ಲಿ
ಹಾವಿನ ಬಾಯಿಯಿಂದ
ತಪ್ಪಿಸಿಕೊಳ್ಳಲು ಓಡಿದಾಗ,
ಏಣಿಯನ್ನು ಎಡವಿದೆ.
ತಡಕಾಡುತ್ತಾ ಮೇಲೇರಿದೆ.
ಹಾವು ದೂರದಲ್ಲೇ
ಬುಸುಗುಟ್ಟಿತು.
ನಾನಂತೂ
ಹತ್ತಿದ ನಂತರ
ಏಣಿಯನ್ನು ಒದೆಯಲಿಲ್ಲ,
ಮುಂದಕ್ಕೆ ಸಾಗಿಹೋದೆ.

— ಡಾ. ಎಚ್. ಎಸ್ ಸುಜಾತಾ

ಶಿವಪ್ರಕಾಶರ ನಾಟಕ 'ಸುಲ್ತಾನ್ ಟಿಪ್ಪೂ'

—ಜಿ. ರಾಜಶೇಖರ

ಎಚ್.ಎಸ್. ಶಿವಪ್ರಕಾಶ ಕನ್ನಡದ ಪ್ರತಿಭಾವಂತ ತರುಣ ಕವಿ. ಶರಣರು, ಸೂಫಿ ಸಂತರು, 19ನೆಯ ಶತಮಾನದ ಅನುಭಾವಿ ಉನ್ಮತ್ತರು–ಇಂತಹ ವಿಲಕ್ಷಣ ಬಂಡುಕೋರರಿಂದ ವಸ್ತು ಪ್ರೇರಣೆಗಳನ್ನು ಪಡೆದ ಇವರ ಕಾವ್ಯ, ಇತರರು ಸವೆಸಿದ ದಾರಿಬಿಟ್ಟು ನಡೆದಿದೆ. ಕನ್ನಡ ಪರಂಪರೆಯ ಅಜ್ಞಾತ ಮೂಲೆಗಳನ್ನು ಸದಾ ಅರಸುವ ಈ ಕವಿಗೆ ಚರಿತ್ರೆ, ಹೆಗ್ಗಳಿಕೆಯ ಪ್ರವರವಲ್ಲ ; ಹಂಸಕ್ಷೀರ ನ್ಯಾಯದೋಪಾದಿ ಯಲ್ಲಿ ಬೇಕಾದ್ದನ್ನು ಹೆಕ್ಕಿಕೊಂಡು, ಬೇಡದ್ದನ್ನು ಬಿಡುವಂತಹದ್ದೂ ಅಲ್ಲ. ಅದು ಎದುರಿಸಿ, ಆವಾಹಿಸಿಕೊಂಡು ತನ್ಮೂಲಕವೇ ಈಗ "ನಿಜ" ಗೊಳ್ಳಿಸಿಕೊಳ್ಳಬೇಕಾದ ಭೂತ. ತನ್ನ ಕಾವ್ಯದಲ್ಲಿ ಅವರು, ಇಹಪರಗಳ ನಡುವೆ ಒದ್ದಾಡಿದ ಮಿಲರೇಪ, ಬಸವ, ಮರುಳ ಶಂಕರ, ನಾಗಾರ್ಜುನ, ನಾಗಲಿಂಗ–ಇವರನ್ನು ಸಾಕ್ಷಾತ್ಕರಿಸುವುದು ಮತ್ತು ನಮಗೆ ಕಾಣಿಸುವುದು ಹಾಗೆಯೇ.

ಶಿವಪ್ರಕಾಶರ ಹೊಸ ನಾಟಕ 'ಸುಲ್ತಾನ ಟಿಪ್ಪೂ' ಕೂಡ, ಚರಿತ್ರೆಯ ಜೊತೆ ಇಂತಹ ಅರ್ಥಪೂರ್ಣ ಮುಖಾಮುಖಿಯ ಒಂದು ಪ್ರಯತ್ನ. ಟಿಪ್ಪುವಿನ ಜೀವನದ ವಿವರಗಳು ನಮಗೆ ಗೊತ್ತಿವೆ : ಏನಿಲ್ಲವೆಂದರೂ ನಾವೆಲ್ಲ ದಾಟಿ ಬಂದ ಶಾಲೆ ಕಾಲೇಜು ಗಳ ನಿರ್ಜೀವ ಪಾಠಗಳಿಂದ ಆತ ನಮಗೆ ಪರಿಚಿತ. ಜನಪ್ರಿಯ ಸಾಹಿತ್ಯದಲ್ಲಿಯೂ ಆತನ ಬಗ್ಗೆ ಅನೇಕ ಕೃತಿಗಳಿವೆ. ಈ ಪ್ರಕಾರದ ಲೇಖಕರಲ್ಲಿ ಕೆಲವರು (ಉದಾ : ವೀರ ಕೇಸರಿ ಸೀತಾರಾಮ ಶಾಸ್ತ್ರಿ) ಟಿಪ್ಪುವನ್ನು ಮತಾಂಧ ನೀಚನೆಂದು ಚಿತ್ರಿಸಿದರೆ, ಇನ್ನು ಕೆಲವರು (ಉದಾ : ಮ.ನ.ಮೂರ್ತಿ) ಆತನನ್ನು ಧೀರೋದಾತ್ತ ದೊರೆಯಂತೆ ಚಿತ್ರಿಸಿದ್ದಾರೆ. ಟಿಪ್ಪುವನ್ನು ದುರಂತ ನಾಯಕನನ್ನಾಗಿ ತೋರಿಸುವ ಆರ್.ಡಿ. ಕಾಮತರ ನಾಟಕವಂತೂ ಕನ್ನಡದಲ್ಲಿ ಅತಿ ಹೆಚ್ಚು ರಂಗ ಪ್ರಯೋಗಗಳನ್ನು ಕಂಡಿರುವ ನಾಟಕಗಳಲ್ಲಿ ಒಂದು. ಕನ್ನಡದ ಜನಪ್ರಿಯ ಸಂಸ್ಕೃತಿ ಟಿಪ್ಪುವಿನ ಕುರಿತು ಅಭಿಮಾನದ ನಿಲುವನ್ನು ತಳೆದಿದ್ದರೂ, ಅವನ ಚಾರಿತ್ರಿಕ ಮಹತ್ವವನ್ನು ಅಲ್ಲಗಳೆಯುವ ಹಿಂದೂ ಮತೀಯವಾದಿ ಅಸಹನೆಯ ಅಂಶಗಳೂ ಅದರಲ್ಲಿ ಸೇರಿಕೊಂಡಿವೆ. ವಿವರಗಳಿಗೆ ಹೋಗದೆ ಒಟ್ಟಾರೆಯಾಗಿ ಹೇಳುವುದಾದರೆ, ಕನ್ನಡದ ಜನಪ್ರಿಯ ಸಂಸ್ಕೃತಿ ಟಿಪ್ಪೂವನ್ನು ಚಿತ್ರಿಸಿರುವ ರೀತಿ ಅದು–ಪರವಿರಲಿ, ವಿರೋಧವಿರಲಿ–ಒಂದು ಭಾರಿ ಗಾತ್ರದ ರಟ್ಟಿನ ಚಿತ್ರಕ್ಕಿಂತ ಬೇರೆ

ಜಿ. ರಾಜಶೇಖರ್, ಎಲ್.ಐ.ಸಿ. ಆಫ್ ಇಂಡಿಯಾ, 'ಜೀವನಕೃಷ್ಣ' ಅಜ್ಜರ ಕಾಡು,
ಉಡುಪಿ–576101

ಲ್ಲ. ಚರಿತ್ರೆಯ ಜೊತೆ ಜೀವಂತವಾದ ಮುಖಾಮುಖಿಯ ಯಾವ ಪ್ರಯತ್ನವೂ ದರಲ್ಲಿ ಕಾಣಿಸದು.

ಶಿವಪ್ರಕಾಶರ ನಾಟಕವನ್ನು ನಾನು ಮೆಚ್ಚಿಕೊಳ್ಳುವುದು ಈ ಹಿನ್ನೆಲೆಯಲ್ಲಿ. ಶಿವ ್ರಕಾಶರ ಟಿಪ್ಪೂ ಬ್ರಿಟಿಷರ ಸೈನ್ಯವನ್ನು ರಣರಂಗದಲ್ಲಿ ಏಕಾಂಗಿಯಾಗಿ ಎದುರಿಸಿದ ವೀರ ೊತೆಗೆ ವಸಾಹತುಶಾಹಿಯ ಅನೈತಿಕತೆಯನ್ನು ಮನಗಂಡಿದ್ದ "ಬುದ್ಧಿಜೀವಿ" ಾಮ್‌ಷಿ ಈ ಶಬ್ದವನ್ನು ಬಳಸಿದ ಅರ್ಥದಲ್ಲಿ). ಬ್ರಿಟಿಷರ ವಿರುದ್ಧ ಆತನ ಹೋರಾಟ ನ್ನ ರಾಜ್ಯದ ರಕ್ಷಣೆಗಷ್ಟೇ ಅಲ್ಲ. ಅದು ನೈತಿಕ ಹೋರಾಟವೂ ಹೌದು. ಟಿಪ್ಪು ತನ್ನ ಾಜ್ಯವನ್ನು ನ್ಯಾಯ, ಸಮಾನತೆ, ಭಾತೃತ್ವ ಮತ್ತು ಉದ್ಯಮಶೀಲತೆಗಳ ತಳಹದಿಯ ಮೇಲೆ ಕಟ್ಟುವ ಕನಸು ಕಂಡಿದ್ದ ಆದರ್ಶವಾದಿ. ಇಂತಹ ಕನಸುಗಾರನೊಬ್ಬ, ಆಗಿನ ಾಲ ದೇಶ ಪರಿಸ್ಥಿತಿಯಲ್ಲಿ ದುರಂತ ನಾಯಕನಾಗುವುದು ಅನಿವಾರ್ಯವಾಗಿತ್ತು. ಹೇಗೆ ಯೋಚಿಸಿದರೂ ಟಿಪ್ಪುವಿನ ಗೆಲುವನ್ನು ನಾವು ಕಲ್ಪಿಸಿಕೊಳ್ಳಲಾರೆವು. ಮೀರ್‌ಸಾದಿಕ್ ಚ್ಚಾ ಮನುಷ್ಯನಾಗಿದ್ದರೆ, ಪೂರ್ಣಯ್ಯ ಸ್ವಲ್ಪ ಜಾಸ್ತಿ ಧೈರ್ಯದವರಾಗಿದ್ದರೆ, ೈದರಾಬಾದು ನಿಜಾಮು, ಮರಾಠರು ಮತ್ತು ಮೈಸೂರು ಅರಸರು ಹುಳಗಳಾಗಿರದೆ ಡೆಯ ಪಕ್ಷ ಮನುಷ್ಯರಾದರೂ ಆಗಿದ್ದರೆ....ಆಗ ಏನು ? ಆಗಲೂ ಟಿಪ್ಪು ಸೋಲು ್ತಿದ್ದ. ಭಾರತದ ಬಹುಭಾಗವನ್ನು ಆಗಲೇ ಕಬಳಿಸಿದ್ದ ಬ್ರಿಟಿಷ್ ಸಾಮ್ರಾಜ್ಯದ ಬಲ ಪಾರವಾಗಿತ್ತು. ಕೈಗಾರಿಕಾ ಕ್ರಾಂತಿ ಈ ಸಾಮ್ರಾಜ್ಯಶಾಹಿಗೆ ಬೆಂಬಲವಾಗಿತ್ತು. ಅಕಸ್ಮಾತ್ ಟಿಪ್ಪುವಿಗೆ ಫ್ರೆಂಚರ ಸಹಾಯ ದೊರಕಿದ್ದರೆ ? ಆಗಲೂ ಅಂತಹ ವ್ಯತ್ಯಾಸ ೇನೂ ಆಗುತ್ತಿರಲಿಲ್ಲ. ಅವನ ಸೋಲು ಸ್ವಲ್ಪ ತಡವಾಗುತ್ತಿತ್ತು, ಅಷ್ಟೆ. ಫ್ರೆಂಚ್ ಮಹಾಕ್ರಾಂತಿಯಿಂದ ಟಿಪ್ಪು ಸಂಭ್ರಮಿತನಾಗಿದ್ದ. ಆದರೆ ಆ ಕ್ರಾಂತಿ ಕೊನೆಗೊಂಡದ್ದು ೆಪೋಲಿಯನ್‌ನ ಸರ್ವಾಧಿಕಾರದಲ್ಲಿ. ('ಈ ಕ್ರಾಂತಿಯ ಉದ್ದೇಶ ಪ್ರತಿಯೊಬ್ಬ ಪ್ರಜೆಯೂ ಒಬ್ಬ ಬೂರ್ಜ್ವಾ ಆಗಬೇಕು ಎನ್ನುವುದು. ಅದು ಎಂದಿಗೂ ಸಾಧ್ಯವಿಲ್ಲ. ಸೋಲನ್ನು ಬೆನ್ನಲ್ಲಿ ಕಟ್ಟಿಕೊಂಡೇ ಹುಟ್ಟಿದ ರಾಜಕೀಯ ಕ್ರಾಂತಿ ಅದು' ಎಂದು ನಂತರ ಮಾರ್ಕ್ಸ್ ಫ್ರೆಂಚ್ ಕ್ರಾಂತಿಯನ್ನು ವರ್ಣಿಸಿದ).

ಸೋಲುವುದು ಮತ್ತು ಸಾಯುವುದು ಇದೇ ಟಿಪ್ಪುವಿನ ಅಸ್ತಿತ್ವದ ದೈವ ವಾಗಿತ್ತು. ಆದರೆ ಬ್ರಿಟಿಷರ ವಿರುದ್ಧ ವ್ಯೂಹ ರಚನೆಯಲ್ಲಿ ಅವನು ತೋರಿಸುವ ಅಸಾಧಾರಣ ಬುದ್ಧಿಮತ್ತೆ, ನಂಬಿಗಸ್ತರಿಂದಲೇ ಬೆನ್ನಲ್ಲಿ ಇರಿಸಿಕೊಳ್ಳುವ ಅವನ ಅಸಹಾ ಯಕತೆ, ತನ್ನ ಮಕ್ಕಳನ್ನೇ ಬ್ರಿಟಿಷರಿಗೆ ಒತ್ತೆಯಿಡಬೇಕಾಗಿ ಬಂದ ಪ್ರಸಂಗದ ತೀವ್ರ ಕರುಣ, ಯುದ್ಧ ಭೂಮಿಯಲ್ಲಿ ಆತ ಸತ್ತ ಬಗೆ ಇವುಗಳಿಂದ ಇವತ್ತಿಗೂ ಅವನ ಬದುಕು ಅದ್ಭುತ ರಮ್ಯವಾಗಿ ಕಾಣುತ್ತದೆ. ಕನ್ನಡದ ಜನಪ್ರಿಯ ಸಂಸ್ಕೃತಿ ಟಿಪ್ಪುವಿನ

ವ್ಯಕ್ತಿತ್ವದ ಈ ಅಂಶಗಳನ್ನು ಪೂರ್ಣವಾಗಿ ದುಡಿಸಿಕೊಂಡಿದೆ. ಆದರೆ ಶಿವಪ್ರಕಾಶರ ನಾಟಕದಲ್ಲಿ ಟಿಪ್ಪುವಿನ ಬಗ್ಗೆ ವಿಸ್ಮಯ ಅಭಿಮಾನಗಳ ಜೊತೆ, ಅವನ ಚಾರಿತ್ರಿಕ ಮಹತ್ವದ ಬಗ್ಗೆ ನಿಖರವಾದ ಕೆಲವು ತಾತ್ವಿಕ ಧೋರಣೆಗಳಿವೆ.

ಜನಪ್ರಿಯ ಸಂಸ್ಕೃತಿಯಿಂದ ಈ ನಾಟಕವನ್ನು ಬೇರೆ ಮಾಡುವ ತಾತ್ವಿಕ ಧೋರಣೆಗಳು ಯಾವುವು ? ನಾಟಕದ ಎರಡು ಮುಖ್ಯ ದೃಶ್ಯಗಳ ವಿಶ್ಲೇಷಣೆಯಿಂದ ಅವನ್ನು ಗುರುತಿಸಬಹುದು. ನಾಟಕ ಪ್ರಾರಂಭವಾಗುವುದು ನಮಾಜಿನ ದೃಶ್ಯದೊಂದಿಗೆ. ನಮಾಜಿನ ನಡುವೆಯೇ ಮೀರ್‌ಸಾದಿಕ್ ಟಿಪ್ಪುವಿನ ವಿರುದ್ಧ ಮಸಲತ್ತು ನಡೆಸಿದ್ದಾನೆ. ಅದರಲ್ಲಿ ಅವನ ಜೊತೆಗಾರರು ಸೈತಾನನ ಶಾಗಿರ್ದಗಳು, ಟಿಪ್ಪು, ಪೂರ್ಣಯ್ಯ, ವೆಲ್ಲೆಸ್ಲಿಗಳಷ್ಟೇ ಚಾರಿತ್ರಿಕ ಅಸ್ತಿತ್ವ ಪಡೆದ ಮೀರ್‌ಸಾದಿಕ್, ನಾಟಕದ ಮೊದಲ ದೃಶ್ಯದಲ್ಲೇ ಕಾಲ್ಪನಿಕ ಸೃಷ್ಟಿಯಾದ ಸೈತಾನನ ಶಿಷ್ಯರಿಂದ ಸುತ್ತುವರಿಯಲ್ಪಟ್ಟರೆ ಆಗುವ ಪರಿಣಾಮ ಏನು ? ಮೀರ್‌ಸಾದಿಕ್ ಚಾರಿತ್ರಿಕ ಪಾತ್ರವಾಗುವುದರ ಜೊತೆ ಒಂದು ಸಂಕೇತವೂ ಆಗುತ್ತಾನೆ. ಪಾವಿತ್ರ್ಯ ಸದಾ ಎದುರಿಸಬೇಕಾದ ಕೊಳಕಿನ ಸಂಕೇತ ಅವನು. ಟಿಪ್ಪುವಿನ ಬಲಿದಾನಕ್ಕೆ ಮತ್ತು ಚರಿತ್ರೆಯ ಅನಿವಾರ್ಯಗತಿಗೆ ಇರುವ ಅನೇಕ ನೆವಗಳಲ್ಲಿ ಮೀರ್‌ಸಾದಿಕ್‌ನ ವಿಶ್ವಾಸ ದ್ರೋಹವೂ ಒಂದಾಗುತ್ತದೆ. ಅವನು ಟಿಪ್ಪುವಿನ ದೈವದ ಒಂದು ಭಾಗವಾಗಿದ್ದಾನೆ. ಮ್ಯಾಕ್‌ಬೆತ್ ನಾಟಕದ ಮೊದಲ ದೃಶ್ಯವನ್ನು ನೆನಪಿಸುವ ಈ ದೃಶ್ಯ ನಮಗೆ ಅಭ್ಯಾಸವಾಗಿ ಹೋಗಿರುವ ವಾಸ್ತವವಾದೀ ದೃಷ್ಟಿಕೋನದಿಂದ ನಮ್ಮನ್ನು ಬಿಡುಗಡೆಗೊಳಿಸುತ್ತದೆ. ಈ ನಾಟಕವನ್ನು ನೋಡಲು ಅಗತ್ಯ ಬೇಕಾದ ಪೂರ್ವ ಸಿದ್ಧತೆ ಅದು.

ಶ್ರೀರಂಗಪಟ್ಟಣದ ಯುದ್ಧದಲ್ಲಿ ಟಿಪ್ಪು ಸಾಯುವ ನಾಟಕದ ಕೊನೆಯ ದೃಶ್ಯವನ್ನೇ ನೋಡಿ. ಇಲ್ಲಿ ಕೂಡ ಶಿವಪ್ರಕಾಶ ವಾಸ್ತವವಾದೀ ನಿರೂಪಣೆಯಿಂದ ದೂರ ಸರಿದು ಇಡೀ ದೃಶ್ಯವನ್ನು ಒಂದು ಉತ್ಕಟ ಆಚರಣೆಯನ್ನಾಗಿ ರೂಪಿಸುತ್ತಾರೆ. ಬ್ರಿಟಿಷರ ವಿರುದ್ಧ ಟಿಪ್ಪುವಿನ ಎಲ್ಲ ಪ್ರಯತ್ನಗಳೂ ವಿಫಲವಾಗಿವೆ. ಮೀರ್‌ಸಾದಿಕ್‌ನ ಕುತಂತ್ರಗಳೆಲ್ಲ ಯಶಸ್ವಿಯಾಗಿವೆ. ಸಜ್ಜನರಾದ ಪೂರ್ಣಯ್ಯನವರೂ ಅವನ ಕೈಬಿಟ್ಟಿದ್ದಾರೆ. ಏಕಾಂಗಿಯಾಗಿ ಟಿಪ್ಪು ತನ್ನ ಕೊನೆಯ ಹೋರಾಟಕ್ಕೆ ಸಿದ್ಧತೆ ನಡೆಸಿದ್ದಾನೆ. ಅದು ಕೊನೆಯ ಹೋರಾಟವೆಂದು ಆತನಿಗೂ ಗೊತ್ತು. ಅವನಿಗೆ ಈಗ ಕರ್ಬಲಾ ಯುದ್ಧ ನೆನಪಾಗುತ್ತಿದೆ. ಆ ಯುದ್ಧದಲ್ಲಿ ಪ್ರವಾದಿ ಮುಹಮ್ಮದರ ಮೊಮ್ಮಕ್ಕಳಾದ ಹಜರತ್ ಇಮಾಮ್ ಹುಸೇನರು ಮೋಸದಲ್ಲಿ ಕೊಲೆಯಾಗಿದ್ದರು. ಅದಕ್ಕೆ ಮುನ್ನ ಅವರು ಕೊನೆಯ ಸಲ ನಮಾಜಿಗೆ ಕೂತದ್ದನ್ನು ನೆನಪಿಸಿಕೊಂಡು ಟಿಪ್ಪು ಮಂಡಿಯೂರಿ ಪ್ರಾರ್ಥಿಸುತ್ತಾನೆ; ಇಮಾಮ್ ಹುಸೇನರ ಕೊನೆಯ ಮಾತು ಅವನಿಗೆ ನೆನಪಾಗುತ್ತಿದೆ–

ಶೂದ್ರ

"ಕೊಡಿ ನನಗೆ ಪೈಗಂಬರರ ಪವಿತ್ರವಾದ ಪಗಡಿಯನ್ನು ; ಅಲಿಯವರ ಪವಿತ್ರವಾದ ಕತ್ತಿಯನ್ನು ;" ಟಿಪ್ಪು ಈ ಮಾತನ್ನು ನೆನಪು ಮಾಡಿಕೊಂಡು ಹೇಳುತ್ತಿರುವಂತೆಯೇ ಅವನ ಬಳಿಯಿದ್ದ ರಜಾಖಾನ್ ಟಿಪ್ಪುವಿನ ತಲೆಯ ಮೇಲೆ ಪಗಡಿ ಇಡುತ್ತಾನೆ ; ಕತ್ತಿಯನ್ನು ಸೊಂಟಕ್ಕೆ ಕಟ್ಟುತ್ತಾನೆ.

ಬ್ರಿಟಿಷರ ವಿರುದ್ಧ ಟಿಪ್ಪುವಿನ ಅಂತಿಮ ಹೋರಾಟ ಫಲಾಫಲಗಳ ಪೂರ್ಣ ಅರಿವಿನಲ್ಲಿ, ಅಂದರೆ ಅಸ್ತಿತ್ವವಾದೀ ಅರಿವಿನಲ್ಲಿ, ಆತ ಮಾಡಿದ ಆಯ್ಕೆ. ಹಾಗೆಯೇ ಹುತಾತ್ಮರಾದ ಹಜರತ್ ಇಮಾಮ್ ಹುಸೇನರನ್ನು ತನ್ನ ಕೊನೆಯ ಕ್ಷಣಗಳಲ್ಲಿ ಸ್ಮರಿಸಿಕೊಳ್ಳುವ ಆತನ ಉತ್ಕಟ ಧಾರ್ಮಿಕತೆ ಕೂಡಾ ಆತನ ಪ್ರಜ್ಞಾಪೂರ್ವಕವಾದ ಆಯ್ಕೆ. ಟಿಪ್ಪು ಈ ದೃಶ್ಯದಲ್ಲಿ ಇಮಾಮ್ ಹುಸೇನರ ಬಲಿದಾನವನ್ನು ಅಭಿನಯಿಸುತ್ತಿದ್ದಾನೆ ; ತನ್ಮೂಲಕ ಅವಾಹಿಸಿಕೊಳ್ಳುತ್ತಿದ್ದಾನೆ. ದೇವರಿಗೆ ತಲೆ ಬಾಗಿದ ಮೇಲೆ ಉಳಿದವರಿಗೆ ತಲೆಬಾಗಲಾರೆ ಎಂದ ಬಸವನಂತೆ, ಬ್ರಿಟಿಷರ ವಿರುದ್ಧ ಹೋರಾಡಿ ಜೈಲು ಸೇರಿದ ದೇವಬಂದನ ಉಲೇಮಾಗಳಂತೆ, ಟಿಪ್ಪುವಿನ ರಾಜಕೀಯ ಹೋರಾಟ ಕೂಡಾ ಧಾರ್ಮಿಕ ಸ್ವರೂಪವನ್ನು ಪಡೆದುಕೊಳ್ಳುತ್ತದೆ.

ತನ್ನ ಅಸಾಧಾರಣವಾದ ಅರ್ಥವಂತಿಕೆಯಲ್ಲಿ ಮತ್ತು ಚೆಲುವಿನಲ್ಲಿ ಈ ದೃಶ್ಯ ನನಗೆ ಅವರದ್ದೆ "ಮಹಾಚೈತ್ರ" ನಾಟಕದ ಒಂದು ದೃಶ್ಯವನ್ನು ನೆನಪಿಸುತ್ತದೆ. ಬಹುರೂಪಿ ಚೌಡಯ್ಯ, ಕಲಕೇತಯ್ಯ ಮತ್ತು ನಗೆಯ ಮಾರಿ ತಂದೆ, ಸೋಮವ್ವ, ನೀಲಾಂಬಿಕೆಯರಿಗೆ ಬಸವನ ಮರಣದ ಸುದ್ದಿಯನ್ನು ಅಭಿನಯಿಸಿ ಹೇಳುವ ದೃಶ್ಯ ಅದು. ಸಾಧಾರಣ ದರ್ಜೆಯ ನಾಟಕಕಾರನಾಗಿದ್ದರೆ, ಬಸವನ ಮರಣವನ್ನೂ ರಂಗದ ಮೇಲೆ ಎಗ್ಗಿಲ್ಲದೆ ತೋರಿಸಿಯೇ ಬಿಡುತ್ತಿದ್ದ. (ಖಂಡಿತ ಕನ್ನಡದ ವಿಮರ್ಶಕರಿಗೆ ಅದು ಅಶ್ಲೀಲ ಎನ್ನಿಸುತ್ತಿರಲಿಲ್ಲ ;) ಆದರೆ ಶಿವಪ್ರಕಾಶ ತನ್ನ ರಂಗತಂತ್ರದಿಂದಲೇ ಅದನ್ನು ಒಂದು ಪುರಾಣವನ್ನಾಗಿ, ಪವಿತ್ರವಾದ ನೆನಪನ್ನಾಗಿ ಮಾರ್ಪಡಿಸುತ್ತಾರೆ.

'ಸುಲ್ತಾನ ಟಿಪ್ಪೂ' ನಾಟಕದ ಕೊನೆಯ ದೃಶ್ಯದ ಕುರಿತು ಯೋಚಿಸುವಾಗ ನನಗೆ ಬ್ರೆಕ್ಟ್‌ನ 'ಗೆಲಿಲಿಯೋ' ನಾಟಕದ ಒಂದು ದೃಶ್ಯ ಕೂಡಾ ನೆನಪಾಗುತ್ತದೆ. ಈ ದೃಶ್ಯದಲ್ಲಿ ಬರೇ ಒಳಚಡ್ಡಿಯಲ್ಲಿ ರಂಗದ ಮೇಲೆ ಕಾಣಿಸಿಕೊಳ್ಳುವ ಪಾತ್ರಧಾರಿ, ಒಂದೊಂದೇ ವಸ್ತ್ರ ತೊಟ್ಟು ಕೊನೆಗೆ ಕೈಯಲ್ಲಿ ದಂಡ ಹಿಡಿದು, ತಲೆಗೆ ಕಿರೀಟ ಧರಿಸಿ ಗೆಲಿಲಿಯೋನಿಗೆ ಶಿಕ್ಷೆ ವಿಧಿಸುವ ಪೋಪ್ ಆಗಿ ರೂಪಾಂತರಗೊಳ್ಳುತ್ತಾನೆ. ಅದನ್ನು ನೋಡುತ್ತಿರುವ ಪ್ರೇಕ್ಷಕ, ಈ ರೂಪಾಂತರ ಮುಗಿಯುವ ಹೊತ್ತಿಗೆ ಪೋಪ್‌ನ ಪಾವಿತ್ರ್ಯದಲ್ಲಿ ನಂಬಿಕೆಯನ್ನು ಪೂರ್ಣ ಕಳೆದುಕೊಂಡಿರುತ್ತಾನೆ. ಆದರೆ 'ಸುಲ್ತಾನ್ ಟಿಪ್ಪೂ' ನಾಟಕದ ದೃಶ್ಯ

ದಲ್ಲಿ ಟಿಪ್ಪು ಕರ್ಬಲಾ ಯುದ್ಧದ ಬಲಿದಾನವನ್ನು ನೆನಪಿಸಿಕೊಳ್ಳುತ್ತಿದ್ದಂತೆ, ಆ ನೆನಪು ಒಂದು ಪವಿತ್ರವಾದ ಆಚರಣೆಯಾಗುತ್ತದೆ.

ಇಂತಹ ದೃಶ್ಯ ಸಂಯೋಜನೆ ಜಾಣತನದ ರಂಗತಂತ್ರವಲ್ಲ, ಚರಿತ್ರೆಯ ಬಗ್ಗೆ ಸ್ಪಷ್ಟವಾದ ಕೆಲವು ತಾತ್ವಿಕ ನಿಲುವುಗಳ ಪ್ರತಿಫಲನ ಅದು. ಸ್ಥೂಲವಾಗಿ ಹೇಳುವುದಾದರೆ ಟಿಪ್ಪುವಿನ ವ್ಯಕ್ತಿತ್ವ ಈ ನಾಟಕದಲ್ಲಿ ಪಡೆದ ಪ್ರತಿರೂಪದಲ್ಲಿ ಅಸ್ತಿತ್ವವಾದ, ಮಾರ್ಕ್ಸ್‌ವಾದ ಹಾಗೂ ಅನುಭಾವದ ಉತ್ಕಟ ಧಾರ್ಮಿಕತೆಗಳ ಪ್ರಭಾವವನ್ನು ಗುರುತಿಸಬಹುದಾಗಿದೆ. ಸೃಜನಶೀಲ ಲೇಖಕನೊಬ್ಬ ವಿರೋಧಾಭಾಸವಾಗದ ಹಾಗೆ, ಈ ತತ್ವಗಳನ್ನು ತನ್ನ ಚಿಂತನ ಕ್ರಮದಲ್ಲಿ ಸೇರಿಸಿಕೊಳ್ಳಬಲ್ಲ ಎನ್ನುವುದಕ್ಕೆ 'ಸುಲ್ತಾನ ಟಿಪ್ಪೂ' ಒಂದು ಉದಾಹರಣೆ.

ಶಿವಪ್ರಕಾಶರ ಕಾವ್ಯಕ್ಕೆ ದೊರೆತ ಮನ್ನಣೆ ಅವರ ನಾಟಕಗಳಿಗೆ ಯಾಕೆ ಸಿಗಲಿಲ್ಲ ಎನ್ನುವುದು ನನಗೆ ಕುತೂಹಲದ ವಿಷಯವಾಗಿದೆ. ಅವರ ಕವಿತೆಗಳಿಗೆ ಹೋಲಿಸಿದರೆ, ಅವರ ನಾಟಕಗಳು ಪರಿಪೂರ್ಣ ರಚನೆಗಳಲ್ಲ ಎನ್ನುವುದು ನಿಜ. ಸಣ್ಣಪುಟ್ಟ ಪಾತ್ರ, ವಿವರ, ಸಂಭಾಷಣೆಗಳಿಗೆ ಗಮನ ಕೊಡದ ಅವಸರ ಅವರ ಎರಡು ನಾಟಕಗಳಲ್ಲಿಯೂ ಕಾಣಿಸುತ್ತದೆ. "ಸುಲ್ತಾನ್ ಟಿಪ್ಪೂ" ನಾಟಕದಲ್ಲಂತೂ, ಕವಿಯೊಬ್ಬ ಇದನ್ನು ಬರೆದನೆ ಎಂದು ಸಂದೇಹವಾಗುವಷ್ಟು ಯಾಂತ್ರಿಕ ಲಯದ ಮಾತುಗಳು ಸಾಕಷ್ಟಿವೆ. ಗದ್ಯದ ಬಗ್ಗೆ ಅವರ ಅಸಡ್ಡೆ ಎಷ್ಟೆಂದರೆ, "ಆ ಇಡೀ ದಿನ ರೂಮಿಯವರ 'ಮಸ್ನವಿ' ಯೆಂಬ ಪ್ರೇಮಕಾವ್ಯವನ್ನು ಓದತೊಡಗಿದೆವು" (ಪುಟ 46) ಎನ್ನುವ ತರಹದ ವಾಕ್ಯಗಳನ್ನೂ ಅವರು ಬರೆಯಬಲ್ಲರು. ಆದರೆ ಇದನ್ನೇ ದೊಡ್ಡದು ಮಾಡಿ ನಾಟಕದ ಉಜ್ವಲ ಭಾಗಗಳತ್ತ ನಾವು ಕುರುಡಾಗಬಾರದು. ಹಾಗೆ ನೋಡಿದರೆ ಶಿವಪ್ರಕಾಶ ತನ್ನ ನಾಟಕಗಳಲ್ಲಿ ಮಾಡುವ ತಪ್ಪುಗಳು ದೊಡ್ಡ ಪ್ರತಿಭೆಯ ಲೇಖಕ ಮಾತ್ರ ಮಾಡಬಹುದಾದ ತಪ್ಪುಗಳು. ಕನ್ನಡದಲ್ಲಿ ಇವತ್ತು ಮಹತ್ವಾಕಾಂಕ್ಷೆಯ ಬರವಣಿಗೆಯೇ ಅಪರೂಪವಾಗುತ್ತಿದೆ. ತಾವು ಯಾವುದೇ ತಾತ್ವಿಕ ಚಿಂತನೆಗಳ ಉಸಾಬರಿ ಹಚ್ಚಿಕೊಂಡವರಲ್ಲ ಎಂದು ಮೊದಲೇ ವಿನಯದಲ್ಲಿ ನಿವೇದಿಸಿಕೊಂಡು ತಮಗೆ ಗೊತ್ತಿರುವ ನಾಲ್ಕು ಶಬ್ದಗಳನ್ನೇ ದುಂಡಗೆ ಬರೆದು, ಕ್ರಮವಾಗಿ ಜೋಡಿಸಿ, ಓದುಗರ ಮುಂದೆ ಇಡುವ ದಸ್ತಾವೇಜು ಬರಹಗಾರರೇ ಈಗ ಎಲ್ಲೆಡೆ ಕಾಣಿಸುತ್ತಿದ್ದಾರೆ. ಗಾಜಿಗೆ ಸಾಣೆ ಹಿಡಿಯುವ ಈ ಸನ್ನಿವೇಶ ನನಗೆ ರೋಲೆಂಡ್ ಬಾರ್ಥೆಸ್‌ನ ಒಂದು ಮಾತನ್ನು ನೆನಪಿಗೆ ತರುತ್ತಿದೆ. ತಾತ್ವಿಕ ಕಾಳಜಿಗಳಿಲ್ಲದ ಬರವಣಿಗೆಯನ್ನು ಖಂಡಿಸುತ್ತ ಬಾರ್ಥೆಸ್ ಹೇಳುತ್ತಾನೆ "ಒಳ್ಳೆಯ ಬರವಣಿಗೆಯ ದೊಡ್ಡ ಶತ್ರು ಬರೇ ಬರವಣಿಗೆಯೇ ಹೊರತು ಕೆಟ್ಟ ಬರವಣಿಗೆ ಖಂಡಿತ ಅಲ್ಲ".

ಮಹತ್ವಾಕಾಂಕ್ಷೆ ಇದ್ದ ಮಾತ್ರಕ್ಕೆ ಯಾವ ಕೃತಿಯೂ ಶ್ರೇಷ್ಠವಾಗುವುದಿಲ್ಲ. ಶಿವ

ಪ್ರಕಾಶರ ನಾಟಕ ನನಗೆ ಮುಖ್ಯವೆನ್ನಿಸುವುದು ಚರಿತ್ರೆ ಈ ನಾಟಕದಲ್ಲಿ ಪಡೆದುಕೊಂಡಿರುವ ರೂಪದ 'ನೈತಿಕತೆ'ಗೋಸ್ಕರ. ಏನು ಈ ನೈತಿಕತೆ ಎಂದರೆ? ಇಪ್ಪತ್ತನೆಯ ಶತಮಾನದ ನಮ್ಮ ಸಾಹಿತ್ಯದಲ್ಲಿ ಗತಕಾಲದ ಚರಿತ್ರೆ ಮತ್ತು ಪುರಾಣಗಳು ಪಡೆದುಕೊಂಡಿರುವ ಅಸಹ್ಯ ರೂಪಗಳನ್ನು ಗಮನಿಸಿದರೆ ಅದು ಸ್ಪಷ್ಟವಾಗುತ್ತದೆ. ಕನ್ನಡದ 'ಚಾರಿತ್ರಿಕ' ಮತ್ತು 'ಪೌರಾಣಿಕ' ಕಥೆ ಕಾದಂಬರಿ ಎಲ್ಲದಕ್ಕೂ ಇರುವ ಒಂದು ಸಾಮಾನ್ಯ ಗುಣವೆಂದರೆ ಗತಕಾಲವನ್ನು ಅದು ಇದ್ದ ಹಾಗೆಯೇ 'ಯಥಾವತ್ತಾಗಿ' ಚಿತ್ರಿಸಿ ನಿಮಗೆ ಅದನ್ನು ಮರುಕಳಿಸಿಕೊಡಬಹುದು ಎಂಬ ಲೇಖಕರ ಆತ್ಮವಿಶ್ವಾಸ. ಆದರೆ ನಾವು ಕಳೆದುಕೊಂಡಿರುವ ಚರಿತ್ರೆ ಮತ್ತು ಪುರಾಣವನ್ನು ನಮಗೆ ಮರಳಿ ತಂದುಕೊಡಲು ಈ ಲೇಖಕರು ಬಳಸುವ ವಾಸ್ತವವಾದೀ ಬರವಣಿಗೆಯ ತಂತ್ರ ಹಾಸ್ಯಾಸ್ಪದವಾಗಿದೆ. ಈ ಕೃತಿಗಳ ಪಾತ್ರಗಳು ಗತಕಾಲದ ವಸ್ತ್ರ ಒಡವೆಗಳನ್ನು ತೊಟ್ಟು ನಮಗೋಸ್ಕರ ತಮ್ಮ ಪಾತ್ರಗಳನ್ನು ನಿರ್ವಹಿಸುತ್ತಿರುತ್ತವೆ! ಈ ಪ್ರಕಾರದ ಯಾವುದೇ ಕೃತಿಯ ಒಂದಷ್ಟು ವಾಕ್ಯಗಳನ್ನು ವಿಶ್ಲೇಷಿಸಿ ನೋಡಿ. ಕೈ ಕೈ ಹಿಸುಕುತ್ತಿರುವ ವಿಜಯನಗರದ ದೊರೆ, ಮಂಚದ ಮೇಲೆ ಒರಗಿಕೊಂಡು ಯೋಚಿಸುತ್ತಿರುವ ದೇವಯಾನಿ, ತನ್ನ ಹೆಣ್ತನದ ದುಃಖ ತೋಡಿಕೊಳ್ಳುತ್ತಿರುವ ದ್ರೌಪದಿ, ಆಶ್ರಮದ ಗಿಡಗಳಿಗೆ ನೀರೆರೆದು, ಹೂಮಾಲೆ ಕಟ್ಟಿ, ಜಿಂಕೆಗಳ ಜೊತೆ ಆಡುವ ಶಕುಂತಲೆ–ಇವರೆಲ್ಲ ಕೈ ಕೈ ಹಿಸುಕುವುದು, ಅಳುವುದು, ಗಿಡಗಳಿಗೆ ನೀರೆರೆಯುವುದು–ತಾವು 'ನಿಜ'ವೆಂದು ನಿಮ್ಮನ್ನು ನಂಬಿಸುವ ಏಕಮಾತ್ರ ಕಾರಣಕ್ಕೆ. ಹೀಗೆ ತಮ್ಮ ಪಾತ್ರಗಳನ್ನು 'ನಿಜ' ಗೊಳಿಸುವ ಈ ಲೇಖಕರ ಉಪಾಯಗಳು ಅದೇ ವಸ್ತುವಿನ ಕ್ಯಾಲೆಂಡರ್ ಚಿತ್ರಗಳ ಕಲೆಗಿಂತ ಯಾವ ರೀತಿಯಲ್ಲೂ ಬೇರೆಯಲ್ಲ. ನಮ್ಮ ದೂರದರ್ಶನದ ರಾಮಾಯಣ ಮಹಾಭಾರತಗಳ ಕಲೆ ಕೂಡ ಇದೇ ಮಟ್ಟದ್ದು. ಚರಿತ್ರೆ ಮತ್ತು ಪುರಾಣವನ್ನು ಹೀಗೆ ಗ್ರಹಿಸಬಹುದು ಮತ್ತು ನಿಮಗೆ ತಲುಪಿಸಬಹುದು ಎಂಬ ಧೋರಣೆಯೇ ಮೂಲಭೂತವಾಗಿ ಪ್ರತಿಗಾಮಿ. ಪುರಾಣ ಪುರುಷನಾದ ರಾಮನನ್ನು ದುಂಡಗಿನ ಮಾಂಸಖಂಡಗಳ ಹೆಣ್ಣುಮುಖದ ವ್ಯಕ್ತಿಯಾಗಿ ಒಮ್ಮೆ ಕಲ್ಪಿಸಿಕೊಂಡ ಮೇಲೆ, ಆತ ಹುಟ್ಟಿದ್ದು ಉತ್ತರ ಪ್ರದೇಶದ ಫೈಜಾಬಾದ್ ಜಿಲ್ಲೆಯ ಅಯೋಧ್ಯೆಯಲ್ಲಿಯೇ–ಅದೂ ಈಗ ಬಾಬರಿ ಮಸೀದಿ ಇರುವ ಜಾಗದಲ್ಲೇ–ಎಂದು ನಂಬುವುದು ಅದರ ಮುಂದಿನ ಹೆಜ್ಜೆ. ಅಯೋಧ್ಯೆಯಲ್ಲಿಯೇ ರಾಮ ಹುಟ್ಟಿದ್ದು ಎಂದು ಹೃತ್ಪೂರ್ವಕ ನಂಬುವ ಪೇಜಾವರ ಮಠಾಧೀಶರಿಗೂ, ರಾಮನನ್ನು ಕ್ಯಾಲೆಂಡರ್ ಚಿತ್ರವಾಗಿ ಟೀವಿಯಲ್ಲಿ ತೋರಿಸಿದ ರಮಾನಂದ ಸಾಗರನಿಗೂ ಗುಣದಲ್ಲಿ ವ್ಯತ್ಯಾಸವಿಲ್ಲ. ಪುರಾಣದ ಜೊತೆ ಇಬ್ಬರಿಗೂ ಇರುವ ಸಂಬಂಧ ಅಮಾನುಷ, ಅನೈತಿಕ ಮತ್ತು ಅಶ್ಲೀಲ! ನಮ್ಮ ಆಚಾರ್ಯತ್ರಯರು, ಭಕ್ತಿಪಂಥದ

ಸಂತರು, ರಾಮಕೃಷ್ಣ ಪರಮಹಂಸರು, ರಮಣ ಮಹರ್ಷಿಗಳು–ಗಾಢವಾದ ಧಾರ್ಮಿಕ ಅನುಭವ ಪಡೆದಿದ್ದ ಯಾರೂ ರಾಮನ ಬಗ್ಗೆ ಹೀಗೆ ಯೋಚಿಸುತ್ತಿರಲಿಲ್ಲ! ಇತರರನ್ನು ವಶಪಡಿಸಿಕೊಂಡು ಆಳಬೇಕು ಎನ್ನುವ ಆಶೆ ಚೂರೂ ಇಲ್ಲದೆ ತಾವೇ ಪರವಶರಾದವರು ಅವರು! ಪುರಾಣದ ಜೊತೆ ಅವರೆಲ್ಲರಿಗೆ ಇದ್ದ ಸಂಬಂಧ ನೈತಿಕವಾದದ್ದು. ಹಾಗೆಯೇ, ತಮ್ಮ "ಶ್ರೀ ರಾಮ ನವಮಿಯ ದಿವಸ" ಕವಿತೆಯಲ್ಲಿ ರಾಮನನ್ನು ಧ್ಯಾನಿಸಿಯೂ ಆತ ನನ್ನು ಕಂಡೆ ಅಥವಾ ನಿಮಗೆ ಕಾಣಿಸಬಲ್ಲೆ ಎಂಬ ಧೈರ್ಯ ತೋರಿಸದ ಅಡಿಗರ ನಿಲುವು ಕೂಡಾ. ಆ ಕವಿತೆಯ ಕೊನೆಯ ಸಾಲುಗಳ ಸಂದೇಹ ಮತ್ತು ನಕಾರಾತ್ಮಕತೆಗಳನ್ನು ಗಮನಿಸಿ:

"ಹುತ್ತಗಟ್ಟದೆ ಚಿತ್ತ ಮತ್ತೆ ಕೆತ್ತೀತೇನು
ಪುರುಷೋತ್ತಮನ ಆ ಅಂಥ ರೂಪ–ರೇಖೆ?"

ಕ್ಯಾಲೆಂಡರ್ ಚಿತ್ರ ತೋರಿಸಿ "ನೋಡಿ ದೇವರನ್ನು" ಎಂದು ಹೇಳುವ ಭಂಡರಿಗೆ ಯಾವತ್ತೂ ತಲೆದೋರದ ಸಂದೇಹ ಅದು. ಚರಿತ್ರೆಯ ಜೊತೆ ಲೇಖಕನ ಸಂಬಂಧದ ನೈತಿಕತೆ ಎನ್ನುವಾಗ ನನ್ನ ಮನಸ್ಸಿನಲ್ಲಿ ಇರುವುದು ಇಂತಹ ಒಂದು ಸಂಬಂಧ. 'ಸುಲ್ತಾನ್ ಟಿಪ್ಪೂ' ನಾಟಕ ನಮ್ಮ ಚರಿತ್ರೆಯ ಜೊತೆ ಹೊಂದಿರುವ ಸಂಬಂಧ ಕೂಡಾ ಈ ಬಗೆಯದ್ದು ಎಂದು ನನ್ನ ನಂಬಿಕೆ.

ನಮ್ಮ ಮಧ್ಯಮ ವರ್ಗಕ್ಕೆ ಈಗ ಯತಿಯೊಬ್ಬನ ಸಜೀವ ದೇಹತ್ಯಾಗ, ಶರಣನ ಸಾವು, ಭಿಕಾರಿಗಳಂತೆ ಬದುಕಿದ ಸಂತರ ಗೋರಿಗಳಿಗೆ ನೂರಾರು ವರ್ಷಗಳ ನಂತರವೂ ಜನ ಭಕ್ತಿಯಿಂದ ನಡೆದುಕೊಳ್ಳುವುದು, ತುಂಡು ರಾಜನೊಬ್ಬ ವಸಾಹತುಶಾಹಿಯ ವಿರುದ್ಧ ಹೋರಾಡಿ ದಂತಕಥೆಯಾಗುವುದು–ಇದು ಯಾವುದರಿಂದಲೂ ವಿಸ್ಮಯವಾಗು ವುದಿಲ್ಲ. ಅವರಿಗೆ ಅರ್ಥ ಎಂದರೆ ದುಡ್ಡು, ದೇಶಪ್ರೇಮ ಎಂದರೆ ಪಾಕಿಸ್ತಾನವನ್ನು ಬಡಿದು ಹಾಕುವುದು, ದೇವರು ಎಂದರೆ ಟೀವಿಯಲ್ಲಿ ಬರುವ ರಟ್ಟಿನ ಕಿರೀಟದ ಚಿತ್ರ. ಇಂತಹ ಪರಿಸ್ಥಿತಿಯಲ್ಲಿ ಶಿವಪ್ರಕಾಶರ ನಾಟಕಗಳು ಜನಪ್ರಿಯವಾಗದಿದ್ದರೆ ಆಶ್ಚರ್ಯ ವಿಲ್ಲ. ಆದರೆ ಮಧ್ಯಮ ವರ್ಗದ ರೋಗಗಳು ನಮ್ಮ ವಿಮರ್ಶಕರಿಗೂ ಹಿಡಿದದ್ದು ಎಂದಿನಿಂದ?

●

ಋತುವು

ಆ ಕಾಲದಿಂದ ನಾವು ಬಹುದೂರ ಪ್ರಯಾಣ ಮಾಡಿ ಬಂದಿದ್ದೇವೆ'

— ಪ್ರೊ॥ ಎ.ಎನ್. ಮೂರ್ತಿರಾವ್

ಮಹಿಳೆಯರೆ ಮತ್ತು ಮಹನೀಯರೆ,

ನಮ್ಮ ನಾಡಿನ ಪ್ರಸಿದ್ಧ ವಿದ್ವಾಂಸರಿಗೂ ಸೃಜನಶೀಲ ಲೇಖಕರಿಗೂ ಸನ್ಮಾನ ಮಾಡುವುದಕ್ಕಾಗಿ ಏರ್ಪಟ್ಟ ಈ ಸಮಾರಂಭದಲ್ಲಿ ಭಾಗವಹಿಸು ಎಂದು ನನ್ನನ್ನು ಆಹ್ವಾನಿಸಿದ್ದಕ್ಕಾಗಿ ನಾನು ಕರ್ನಾಟಕ ಸಾಹಿತ್ಯ ಅಕಾಡೆಮಿಯವರಿಗೆ ಕೃತಜ್ಞನಾಗಿದ್ದೇನೆ. ಈ ಸಂದರ್ಭದಲ್ಲಿ ನೆರೆರಾಷ್ಟ್ರದ ಪ್ರಸಿದ್ಧ ಸಾಹಿತಿ ಡಾ॥ ಗಂಗಾಧರ ಗಾಡ್ಗಿಲ್‌ರವರು ದಯಮಾಡಿ ನಮ್ಮೊಡನಿರುವುದು ಸಮಾರಂಭಕ್ಕೆ ವಿಶೇಷ ಮೆರುಗು ಕೊಟ್ಟಿದೆ. ಅವರ ಸಹವಾಸಲಾಭಕ್ಕಾಗಿಯೂ ನಾನು ಕೃತಜ್ಞ.

ಬಹುಶಃ ಇಂಥ ಸಮಾರಂಭಗಳು ಇಲ್ಲಿ ಸೇರಿರುವವರನೇಕರಿಗೆ ಕೊಡುವ ಆನಂದ ಕ್ಕಿಂತ ಹೆಚ್ಚಿನ ಆನಂದ ನನಗೆ ಲಭಿಸುತ್ತದೆ. ಏಕೆಂದರೆ ಕನ್ನಡ ಮತ್ತು ಕನ್ನಡ ಲೇಖಕರೂ ಯಾರಿಗೂ ಬೇಡದ ತಬ್ಬಲಿ ಮಗುವಾಗಿದ್ದ ಕಾಲವನ್ನು ಕಂಡವನು, ನಾನು ! ಈ ಶತ ಮಾನದ ಮೊದಲ ಎರಡು ದಶಕಗಳಲ್ಲಿ ಕನ್ನಡಕ್ಕಿದ್ದ ಸ್ಥಾನವನ್ನು ಬಣ್ಣಿಸಿದರೆ 'ಅಂಥ ಕಾಲ ಇತ್ತೆ?' ಎಂದು ತಾವು ಆಶ್ಚರ್ಯಪಡಬಹುದು. ಮೈಸೂರಿನ ಮಹಾರಾಜರ ಕಾಲೇಜಿನಲ್ಲಿ ಕನ್ನಡಕ್ಕೆ ಪ್ರಾಧ್ಯಾಪಕ ಉಪಪ್ರಾಧ್ಯಾಪಕರ ಮಾತು ಹಾಗಿರಲಿ, ಲೆಕ್ಚರರ್ ಮಟ್ಟದ ಅಧ್ಯಾಪಕನೂ ಇಲ್ಲದಿದ್ದ ಕಾಲವಿತ್ತು. ಈ ಬಡಭಾಷೆಯಲ್ಲಿ ಪಾಠ ಹೇಳು ವುದಕ್ಕೆ 40–60 ರೂಪಾಯಿನ ಪಂಡಿತರಿದ್ದರೆ ಸಾಕು ! ಸ್ವಲ್ಪ ಕಾಲ ಅವರಿಗೆ 'ಪಂಡಿ ತರು' ಎಂಬ ಹೆಸರೂ ಕೂಡ ಇರಲಿಲ್ಲ—ಅವರನ್ನು ಕನ್ನಡ 'ಮುನಷಿ'ಯವರು ಎಂದು ಕರೆಯುತ್ತಿದ್ದರು.

ನವಂಬರ್ 18ರಂದು ಕರ್ನಾಟಕ ಸಾಹಿತ್ಯ ಅಕಾಡಮಿಯ 1988ರ ಪ್ರಶಸ್ತಿ ಮತ್ತು ಬಹುಮಾನ ವಿತರಣೆ ಸಮಾರಂಭ ಧಾರವಾಡದಲ್ಲಿ ನಡೆ ಯಿತು. ಆ ಸಂದರ್ಭದಲ್ಲಿ ನಮ್ಮ ನಡುವಿನ ಹಿರಿಯ ಲೇಖಕರಾದ ಪ್ರೊ॥ ಎ.ಎನ್. ಮೂರ್ತಿರಾವ್‌ರವರು ಓದಿದ ಭಾಷಣದ ಲೇಖನವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ಇದನ್ನು ಪ್ರಕಟಿಸಲು ಕೊಟ್ಟ ಮೂರ್ತಿರಾವ್ ಅವ ರಿಗೂ ಹಾಗೂ ಸಾಹಿತ್ಯ ಅಕಾಡಮಿಯವರಿಗೂ ಶೂದ್ರ ಋಣಿಯಾಗಿದೆ.

— ಸಂ.

ಪ್ರೊ॥ ಎ.ಎನ್. ಮೂರ್ತಿರಾವ್, ನಂ. 185, ಎ.ಇ.ಸಿ.ಎಸ್. ಲೇಔಟ್, 1ನೇ ಸ್ಟೇಜ್,
ಸಂಜಯನಗರ, ಬೆಂಗಳೂರು-560024

ನಮ್ಮ ಕಾಲೇಜಿನಲ್ಲಿ ಕನ್ನಡಕ್ಕೆ ಬೇರೆ ಒಂದು ಇಲಾಖೆ ಸಹ ಇರಲಿಲ್ಲ. ಕನ್ನಡದ ಯೋಗಕ್ಷೇಮ ನೋಡಿಕೊಳ್ಳುವವರೆಂದರೆ--ಇಂಗ್ಲಿಷ್ ಇಲಾಖೆಯ ಮುಖ್ಯಸ್ಥರು. ನಾನು ವಿದ್ಯಾರ್ಥಿಯಾಗಿದ್ದ ಕಾಲದಲ್ಲಿ ಆ ಮುಖ್ಯಸ್ಥರು ಕನ್ನಡದ ಗಂಧವೇ ಇಲ್ಲದ ಆಂಗ್ಲರು--ಪ್ರೊ॥ಜೆ.ಸಿ. ರಾಲೊ. ವೈಯುಕ್ತಿಕವಾಗಿ ಅವರಿಗೆ ಕನ್ನಡ ಬೆಳೆಯಬೇಕೆಂಬ ಆಸೆ, ಬೆಳೆಯುತ್ತಿದ್ದದ್ದನ್ನು ಕಂಡು ಹೆಮ್ಮೆ-ಎರಡೂ ಇದ್ದವು. ಆದರೆ ಅದು ಅವರ ವೈಶಿಷ್ಟ್ಯವೇ ಹೊರತು ಅಂದಿನ ವ್ಯವಸ್ಥೆಯ ಲಕ್ಷಣವಲ್ಲ. ಆ ವ್ಯವಸ್ಥೆಯಲ್ಲಿ ಜಿ.ಪಿ. ರಾಜರತ್ನಂರವರಂಥ ವಿದ್ವಾಂಸರೂ ಕಲೆಗಳೂ ಇಂದಿನಂತೆ ಸನ್ಮಾನ ಪಡೆಯುವುದು ಅಂತಿರಲಿ--ನಲವತ್ತೋ ಅರುವತ್ತೋ ರೂಪಾಯಿನ ಸಂಬಳದ ಮೇಲೆ ತಮ್ಮ ಸೇವೆಯನ್ನು ಆರಂಭಿಸಬೇಕಾಗಿತ್ತು!

ಆ ಕಾಲದಿಂದ ನಾವು ಬಹುದೂರ ಪ್ರಯಾಣ ಮಾಡಿಬಂದಿದ್ದೇವೆ. ಹೊರಗಿನ ಯಾವ ಪ್ರೇರಣೆಯೂ ಇಲ್ಲದೆ ಶಕ್ತಿಸಾಹಿತ್ಯ, ಜ್ಞಾನಸಾಹಿತ್ಯ-ಇವೆರಡು ಕ್ಷೇತ್ರಗಳಲ್ಲೂ ಕೇವಲ ಆತ್ಮತೃಪ್ತಿಗಾಗಿ ದುಡಿಯುವ ಜನರಿಂದ ನಾವೆಲ್ಲ ಉಪಕೃತರು. ಈ ಭಾವನೆ ನಾಡಿನ ಜನರಲ್ಲಿ ಮಾತ್ರವಲ್ಲ, ಸರ್ಕಾರದಲ್ಲೂ ಬೇರೂರಿದೆ. ಅಂದಿಗೂ ಇಂದಿಗೂ ಅದೆಷ್ಟು ವ್ಯತ್ಯಾಸ! ಕನ್ನಡಕ್ಕೆ ಕಾಲೇಜಿನಂಥ ವಿದ್ಯಾಸಂಸ್ಥೆಗಳಲ್ಲೂ ಇಲಾಖೆಯಿಲ್ಲದ ಕಾಲವೆಲ್ಲಿ, ಪ್ರತಿಯೊಂದು ವಿಶ್ವವಿದ್ಯಾಲಯದಲ್ಲೂ ಕನ್ನಡ ಅಧ್ಯಯನ ಸಂಸ್ಥೆಗಳು ಚಟುವಟಿಕೆಯಿಂದ ಕೆಲಸ ಮಾಡುತ್ತಿರುವ ಕಾಲವೆಲ್ಲಿ; ಇದೇನೋ ಸ್ವಾಭಾವಿಕ ಎನ್ನೋಣ-ಜಾಗೃತಿ ಮೊದಲು ಬರಬೇಕಾದ್ದು ವಿಶ್ವವಿದ್ಯಾಲಯಗಳಲ್ಲಿ ತಾನೆ? ಆ ಜಾಗೃತಿಗೆ ಮುಖ್ಯಕಾರಣರಾದವರು ನನ್ನ ಪೂಜ್ಯಗುರುಗಳಾದ ಬಿ.ಎಂ. ಶ್ರೀಕಂಠಯ್ಯನವರು-ನಾವು ಭಕ್ತಿಯಿಂದ ನೆನೆಯಬೇಕಾದವರು.

ಅವರ ನೇತೃತ್ವದಲ್ಲಿ ಕನ್ನಡಭಾಷಾಭಿಮಾನ ಬೆಳೆದದ್ದು ಸ್ವಾಭಾವಿಕ ಎಂದೆನಷ್ಟೆ. ಅಷ್ಟು ಸ್ವಾಭಾವಿಕವಲ್ಲದ್ದು, ಆದ್ದರಿಂದ ಹೆಚ್ಚು ಅಭಿನಂದನೀಯವಾದದ್ದು-ಸರ್ಕಾರವೇ ಮುಂದುವರಿದು ಅಕಾಡೆಮಿಗಳನ್ನು ಸ್ಥಾಪಿಸಿದ್ದು. 1960ರ ಸುಮಾರಿನಲ್ಲೋ ಏನೊ, ಕೇಂದ್ರಸಾಹಿತ್ಯ ಅಕಾಡೆಮಿಯ ಆಗಿನ ಕಾರ್ಯದರ್ಶಿ ಶ್ರೀ ಕೃಷ್ಣಕೃಪಲಾನಿಯವರು "ನೀವು ಕರ್ನಾಟಕ ಸಾಹಿತ್ಯ ಅಕಾಡೆಮಿಯೊಂದನ್ನು ಸ್ಥಾಪಿಸಬಾರದೇಕೆ? ಅಂಥ ಸಂಸ್ಥೆಯ ಸಹಕಾರ ನಮಗೆ ಬೇಕು. ನಾವೂ ನಿಮಗೆ ಪೂರ್ಣಸಹಕಾರ ನೀಡುತ್ತೇವೆ" ಎಂದು ನನಗೆ ಹೇಳಿದರು. ನನಗೆ ಹೇಳಿದ್ದಕ್ಕೆ ಕಾರಣ: ಆಗ ನಾನು ಅಕಾಡೆಮಿಯ ಕನ್ನಡ ಸಲಹಾಸಮಿತಿಯ ಕನ್ವೀನರ್-ಚೇರ್ಮನ್, ಜೊತೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನೂ ಆಗಿದ್ದದ್ದನ್ನು ನೆನೆದುಕೊಂಡೋ ಏನೋ-ಅಂತೂ ನಾನು "ನಮ್ಮಲ್ಲಿ ಕನ್ನಡ ಸಾಹಿತ್ಯಪರಿಷತ್ತೇ ಇದೆಯಲ್ಲ? ನಿಮ್ಮ ಸಹಕಾರ ಅದಕ್ಕೇ ಸಲ್ಲಲಿ" ಎಂದು ಉತ್ತರ

ೂಟ್ಟೆ. ನನ್ನ ಆ ನಿಲುವು ಸರಿಯೋ ತಪ್ಪೋ ಕಾಣೆ. ಬಹುಶಃ ಆ ಕಾಲಕ್ಕೆ ಅದು ರಿಯಾಗಿತ್ತೋ ಏನೊ.

ಈಗ ಕನ್ನಡದ ಯೋಗಕ್ಷೇಮಕ್ಕೇ ಮೀಸಲಾದ ಮೂರು ಭಾರಿ ಸಂಸ್ಥೆಗಳಿವೆ-- ಶ್ವವಿದ್ಯಾಲಯದ ಸಂಸ್ಥೆಗಳಲ್ಲದೆ, ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಸಾಹಿತ್ಯ ಕಾಡೆಮಿ; ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಇವುಗಳಲ್ಲಿ ಮೊದಲನೆಯ ುತ್ತು ಮೂರನೆಯ ಸಂಸ್ಥೆಗಳೊಡನೆ ಕೆಲಕಾಲ ನನಗೆ ತೀರಾ ಹತ್ತಿರದ ಸಂಬಂಧವಿತ್ತು. ಈಗ ಈ ಮೂರು ಸಂಸ್ಥೆಗಳಿಗೂ ಕೈತುಂಬ ಕೆಲಸವಿರುವಂತೆ ತೋರುತ್ತದೆ. ಪಾರ್ಕಿ ನ್ಸನ್ಸ್ ಲಾ ಹೇಳುತ್ತದೆ : ಜನ ಹೆಚ್ಚಿದಷ್ಟೂ ಕೆಲಸವೂ ಹೆಚ್ಚುತ್ತದಂತೆ. ಆದರೆ ಈಗ ಾನು ಹೇಳುತ್ತಿರುವುದು ಹಾಸ್ಯದ ಮಾತಲ್ಲ. ಈ ಮೂರು ಸಂಸ್ಥೆಗಳೂ ಬೆಳೆಯುತ್ತ ಬೆಳೆಯುತ್ತ ಹಿಂದೆ ತೋರದಿದ್ದ ಎಷ್ಟೋ ಕೆಲಸ, ಕನ್ನಡದ ಹಿತದ ದೃಷ್ಟಿಯಿಂದ ಮಾಡಲೇ ಬೇಕಾದ ಕೆಲಸ, ನಮಗೆ ತೋರುತ್ತಿದೆ. ಈ ಮೂರು ಸಂಸ್ಥೆಗಳ ಅಧಿಕಾರಿ ಗಳೂ ಕಲೆತು ಒಟ್ಟು ಕೆಲಸವನ್ನು ತಂತಮ್ಮಲ್ಲಿ ಹಂಚಿಕೊಂಡಿರಬೇಕು.

ತಾತ್ಕಾಲಿಕ ಪ್ರಯೋಜನವುಳ್ಳ ಸಭೆಗಳೂ ವಿಚಾರಣ ಸಂಕಿರಣ ಇತ್ಯಾದಿಗಳು ಮಾತ್ರವಲ್ಲದೆ (ಅವೂ ಶಾಶ್ವತವಾದ್ದನ್ನು ಸಾಧಿಸಲಾರವೆಂದಲ್ಲ) ಶಾಶ್ವತವಾದ ಕೆಲಸ ಎಷ್ಟೊಂದು ನಡೆದಿದೆ ಎಂಬುದನ್ನು ನಾವು ಬಹುಶಃ ಮನಗಂಡಿಲ್ಲ. We have taken the progress for granted. ಈಚೆಗೆ ಹಲವಾರು ವರ್ಷಗಳಿಂದ ನನಗೆ ವಿಸ್ಮಯ ತರುವ ಅನುಭವವೊಂದು ಆಗುತ್ತಿದೆ. ಮೈಸೂರಿನಿಂದ ಹೊರಡುವ, ಬಹಳ ಉಪಯುಕ್ತವಾದ ಕೆಲಸ ಮಾಡುತ್ತಿರುವ, ಮತ್ತು ನಮ್ಮೆಲ್ಲರ ಆದರಕ್ಕೆ ಪಾತ್ರ ವಾಗಬೇಕಾದ 'ಗ್ರಂಥಲೋಕ' ಎಂಬ ಮಾಸಪತ್ರಿಕೆ ಪ್ರತಿ ತಿಂಗಳೂ ಹೊಸದಾಗಿ ಬೆಳಕಿಗೆ ಬಂದ, ಮತ್ತು ಮರುಮುದ್ರಣ ಕಂಡ ಪುಸ್ತಕಗಳ ಪಟ್ಟಿಯನ್ನು ಪ್ರಕಟಿಸುತ್ತಿದೆ. ಅದನ್ನು ನೋಡಿದಾಗ ನನಗೆ—ನಾನು ಓದದಿರುವ ಪುಸ್ತಕಗಳು ಎಷ್ಟೊಂದಿವೆ ಅನ್ನಿಸು ತ್ತದೆ. ಕೆಲವು ವರ್ಷಗಳಿಂದ ದೃಷ್ಟಿಪಾಟನ ಕಡಿಮೆಯಾಗಿ ನನ್ನ ಓದು 'ಇಲ್ಲವೇ ಇಲ್ಲ' ಎನ್ನುವಷ್ಟು ಕಡಿಮೆಯಾಗಿದೆ. ನಾನು ರಿಪ್‌ವ್ಯಾನ್ ವಿಂಕಲ್ ಪಟ್ಟಕ್ಕೆ ಉಮೇದು ವಾರನಾಗಬಹುದು. ನಾನು ಹೇಳುತ್ತಿರುವುದು ಅದರ ಮಾತಲ್ಲ. ಓದುವುದು ಸಾಧ್ಯ ವಾಗಿದ್ದಾಗಲೂ ನಾನು ಓದದಿದ್ದ ಪುಸ್ತಕಗಳು ಎಷ್ಟಿದ್ದವು ಎಂಬುದರ ಮಾತು. 'ಇಂಗ್ಲಿಷ್ ಗೀತೆಗಳು' ಪ್ರಕಟವಾದ 1921 ರಿಂದ ನವೋದಯ ಪ್ರಾರಂಭವಾಯಿತು ಎಂದಿಟ್ಟುಕೊಳ್ಳೋಣ—ನವೋದಯ ಯಾವುದೋಂದು ದಿನ ಪ್ರಾರಂಭವಾಗಲಾರದು ಎಂಬುದು ನಿಜವಾದರೂ. ಆಗಿನಿಂದ ಹಲವಾರು ವರ್ಷಗಳ ಕಾಲ ನನ್ನ ಮಿತ್ರರೂ ನಾನೂ ಹೊಸದಾಗಿ ಪ್ರಕಟವಾದ ಯಾವ ಪುಸ್ತಕವನ್ನೂ ಓದದೆ ಬಿಡಲಿಲ್ಲ. ಆಯ್ಕೆಯ

ಮಾತೇ ಇಲ್ಲ, ಎಲ್ಲವನ್ನೂ ಓದುತ್ತಿದ್ದೆವು. ಇವತ್ತು ಎದೆ ಮುಟ್ಟಿಕೊಂಡು "ನಾನು ಪ್ರಕಟವಾದ ಪುಸ್ತಕಗಳನ್ನೆಲ್ಲ ಓದಿದ್ದೇನೆ" ಎಂದು ಹೇಳುವ ಧೈರ್ಯ ಯಾರಿಗಾದರೂ ಇದ್ದರೆ ನಾನು ಅವರಿಗೆ ಭಕ್ತಿಯಿಂದ ನಮನ ಸಲ್ಲಿಸುತ್ತೇನೆ. ನಾನಂತೂ ಹಾಗೆ ಹೇಳುವ ಸಾಹಸ ಮಾಡಲಾರೆ. ಅಷ್ಟು ವಿಪುಲವಾಗಿ ಬೆಳೆದಿದೆ, ನಮ್ಮ ಸಾಹಿತ್ಯ ಎಲ್ಲ ಭಾಷೆಗಳ ಸಾಹಿತ್ಯದಲ್ಲೂ ಇರುವಂತೆ ಇದರಲ್ಲೂ ಅತ್ಯುತ್ತಮ, ಉತ್ತಮ, ಸಾಧಾರಣ, ಬೇಡ ವಾದದ್ದು–ಎಲ್ಲ ಬಗೆಯ ಪುಸ್ತಕಗಳೂ ಇವೆ. ಆದರೆ ಉನ್ನತ ಮಟ್ಟದ ಕೃತಿಗಳ ಸಂಖ್ಯೆ ಯನ್ನು ನೆನೆದರೆ ನನಗೇನೋ ನಾವು ಯಾರೆದುರಿಗೂ ಕೀಳರಿಮೆಯಿಂದ ತಲೆತಗ್ಗಿಸಬೇಕಾ ಗಿಲ್ಲ ಎನ್ನಿಸುತ್ತದೆ.

ಪುಸ್ತಕಗಳು ಬೆಳೆದಂತೆ ನಮ್ಮ ಪದಭಂಡಾರವೂ ಬೆಳೆದಿದೆ. ಭಾರತದ ಇತರ ಭಾಷೆ ಗಳಂತೆ ಕನ್ನಡವೂ ಧಾರ್ಮಿಕ ವಿಷಯಗಳ ಪ್ರತಿಪಾದನೆಗೆ ಮತ್ತು ಕಥನಕ್ಕೆ ಬೇಕಾದ ಪದ ಸಂಪತ್ತನ್ನು ಪಡೆದಿತ್ತು. ಆದರೆ ಭೌತವಿಜ್ಞಾನ ಮಾನಸಿಕ ವಿಜ್ಞಾನಗಳಿಗೆ ಬೇಕಾದ ಪದ ಗಳ ವಿಷಯದಲ್ಲಿ ನಾವು ಬಡವರೇ. ಆ ಶಾಸ್ತ್ರಗಳು ಬೆಳೆದದ್ದೇ ಈಚೆಗೆ ತಾನೆ. ಧಾರ್ಮಿಕ ಸಾಹಿತ್ಯದಲ್ಲೂ ಬಹುಶಃ ದೈವಶಾಸ್ತ್ರಕ್ಕೆ(Theologyಗೆ) ಮತ್ತು ಭಕ್ತಿಗೆ ಅನುಕೂಲ ವಾದ ಪದಗಳು ಹೆಚ್ಚು, ತತ್ವಶಾಸ್ತ್ರಕ್ಕೆ ಅನುಕೂಲವಾದವು ಸಾಲದು. ಇತ್ತೀಚೆಗೆ ಹೊಸಪದಗಳ ಸೃಷ್ಟಿ ನಡೆದಿದೆ. ಅವು ಶಾಸ್ತ್ರ ವ್ಯಾಸಂಗಿಗಳಿಗೂ ಸ್ವಲ್ಪ ತೊಂದರೆ ಕೊಟ್ಟವು. ಹೊಸದರಲ್ಲಿ ಇದು ಅನಿವಾರ್ಯ.

ಶಾಸ್ತ್ರಗ್ರಂಥಗಳಿಗೇ ಮೀಸಲಾದ ಪಾರಿಭಾಷಿಕ ಶಬ್ದಗಳಿರುತ್ತವೆ. ಆದರೆ ಅವು ಗಳಲ್ಲಿ ಸಾಧ್ಯವಾದಷ್ಟನ್ನು ಸಾಮಾನ್ಯವಾಗಿ ನಾವು ಆಡುವ ಮಾತಿನಲ್ಲೂ ಬಳಸುವ ಸಾಧ್ಯತೆಯೂ ಬೆಳೆಯಬೇಕು. ಅದರಿಂದ ಭಾಷೆಯ ಸಿರಿ ಹೆಚ್ಚುತ್ತದೆ. ಉದಾಹರಣೆಗೆ: ಇಂಗ್ಲಿಷಿನ ತರ್ಕಶಾಸ್ತ್ರದಲ್ಲಿ ಬಳಸುವ ಲ್ಯಾಟಿನ್ ಪದ petitio principii (ಅದರ ಇಂಗ್ಲೀಷ್ ರೂಪ-begging the question–ಎಲ್ಲರಿಗೂ ಪರಿಚಿತವಾದದ್ದು) ಅದು ಆಡುಭಾಷೆಯಲ್ಲಿ ಬಳಕೆಗೆ ಬಂದಿದೆ. "ಇಬ್ಬರೇ ಇದ್ದರೆ ಸಂಭಾಷಣೆ ಸರಳವಾಗಿ ಹರಿಯುವುದಿಲ್ಲ. ಮೂರನೆಯವನೊಬ್ಬ ಕೆಟಾಲಿಟಿಕ್ ಏಜೆಂಟಾಗಿ ಇರಬೇಕು" ಎನ್ನುವ ಕೆಮಿಸ್ಟ್ರಿಯ ಪಾರಿಭಾಷಿಕ ಮಾತು ಇಂಗ್ಲಿಷಿನ ಆಡುಮಾತಿಗೂ ಬಂದಿದೆ. "ಅವನು ಪಾರ್ಟಿಯ ಹೆಸರಿನಲ್ಲಿ ಹಣ ಶೇಖರಿಸಿ, he siphored off half of it to his own bankaccount"–ಇವೆಲ್ಲ ಪಾರಿಭಾಷಿಕವಾಗುವುದರ ಜೊತೆಗೆ ಆಡು ಮಾತಿನ ಸಿರಿಯನ್ನು ಹೆಚ್ಚಿಸಿವೆ. ಇಂಥ ಸಂದರ್ಭಗಳಲ್ಲಿ ಭಾರತೀಯ ಭಾಷೆಗಳು ಒಂದು ಪದ ಉಪಯೋಗಿಸಬಹುದಾದ ಕಡೆ ಎರಡು ವಾಕ್ಯಗಳನ್ನು ಬರೆಯಬೇಕಾಗುತ್ತದೆ.

ಇಂಥ ಪದಗಳೆಲ್ಲವನ್ನೂ ಮೂಲರೂಪದಲ್ಲೇ ತೆಗೆದುಕೊಳ್ಳಲಾಗುವುದಿಲ್ಲ.

ಶೂದ್ರ

ಆದರೆ ನಮ್ಮ ಭಾಷೆಯನ್ನು ಕೆಡಿಸದೆ, ಶೈಲಿಯನ್ನು ವಿಕೃತ ಮಾಡಿಕೊಳ್ಳದೆ ಎರವು ತೆಗೆದುಕೊಳ್ಳಬಹುದಾದ ಪದಗಳಿವೆ. ಅವನ್ನು ತೆಗೆದುಕೊಳ್ಳದಿದ್ದರೆ ನಮ್ಮ ಭಾಷೆಯ ಅಭಿವೃದ್ಧಿಗೆ ನಾವೇ ಅಡ್ಡಿ ಬಂದಂತಾಗುತ್ತದೆ. ಹೀಗೆ ಎರವು ತೆಗೆದುಕೊಳ್ಳುವುದನ್ನು ಬಿ.ಎಂ. ಶ್ರೀಯವರು 1911ರಲ್ಲೇ ಇದೇ ಧಾರವಾಡದಲ್ಲಿ ಮಾಡಿದ ಭಾಷಣದಲ್ಲಿ ಸಮರ್ಥಿಸಿದರೆಂಬುದನ್ನು ನೆನೆಯಬಹುದು. ಈಗಲಾದರೋ ಕೆಲವು ವಲಯಗಳಲ್ಲಿ ಜನರು ನಾಡಿನ ಮೂಲೆಮೂಲೆಗಳಲ್ಲೂ ಬಳಕೆಗೆ ಬಂದಿರುವ ಪೋಲೀಸ್, ಇಂಜನಿಯರ್ ಮುಂತಾದ ಪದಗಳನ್ನು ಹೊರದೂಡಿ ಹೆಣಭಾರವಾದ ಯಾರಿಗೂ ಅರ್ಥವಾಗದ ಆರಕ್ಷಕ, ಅಭಿಯಂತ ಮುಂತಾದ ಪದಗಳನ್ನು ಬಳಸುವುದು ಕಾಣಬರುತ್ತಿದೆ. ಬರಹಗಾರರು ಈ ಅಂಧಶ್ರದ್ಧೆಯಿಂದ ನಮ್ಮನ್ನು ಪಾರುಮಾಡಲೆಂದು ಬೇಡ ಬಹುದೇನೊ. ಈ ಕೆಲಸ ಈಗಾಗಲೇ ಆರಂಭವಾಗಿದೆ ಎಂಬುದನ್ನು ಸಂತೋಷದಿಂದ ನೆನೆಯುತ್ತೇನೆ.

ವಾಸ್ತವವಾಗಿ 'ಪದ' ಎನ್ನುವುದು ಒಂದು ಐಡಿಯ. ಆ ಐಡಿಯಾ ನಮ್ಮಲ್ಲಿ ಮೊದಲಿನಿಂದಲೂ ಇದ್ದು ಅದಕ್ಕೆ ತಕ್ಕ ಪದವೂ ಇದ್ದರೆ ಆನಂದಪಡೋಣ. ಇಲ್ಲದಿದ್ದಾಗ ಸಾಧ್ಯವಾದ ಮಟ್ಟಿಗೆ ಅದನ್ನು ಭಾಷಾಂತರಿಸಬಹುದು, ಸರಿಯೆ. ಆದರೆ ಒಂದು ಅಂಶ ನಮ್ಮ ಗಮನದಲ್ಲಿರಬೇಕು : ವೀಣೆಯ ತಂತಿಯನ್ನು ಮಿಡಿದಾಗ ಹೊರಡುವ ಸ್ವರದ ಹಿಂದೆ ಅನುರಣನ ಬರುತ್ತದೆ. ಹಾಗೇ ಒಂದು ಪದವನ್ನು ಬಳಸಿದಾಗ ಅದರ ಹಿಂದೆ mances ಬರುತ್ತವೆ–ಅವನ್ನು ಕನ್ನಡದಲ್ಲಿ ಅನುಸೂಕ್ಷ್ಮಗಳು ಎಂದು ಕರೆಯೋಣ. ನಮ್ಮ ಭಾಷಾಂತರ ಆ ಅನುಸೂಕ್ಷ್ಮಗಳನ್ನೂ ಉಳಿಸಿಕೊಳ್ಳುವಂಥಾದ್ದಾಗಬೇಕು. ಅದು ಸಾಧ್ಯವಾಗದಿದ್ದಾಗ, ಮತ್ತು ಇತರ ವಿಧಗಳಲ್ಲಿ ಪರಭಾಷೆಯ ಪದ ನಮ್ಮ ಭಾಷೆಗೆ ಒಗ್ಗುವಂಥಾದ್ದಾದರೆ, ಪರಭಾಷೆಯ ಪದವನ್ನು ಸ್ವೀಕರಿಸುವುದೇ ಉತ್ತಮ. ಈ ಅಭಿಪ್ರಾಯವನ್ನು ಪರಿಶೀಲನೆಗಾಗಿ ತಮ್ಮ ಮುಂದೆ ಇಡುತ್ತಿದ್ದೇನೆ. ಹೀಗೆ ಬಳಸಿದ ಪದಗಳೆಲ್ಲ ನಿಲ್ಲುತ್ತವೆ ಎಂಬ ಭ್ರಮೆಯೇನೂ ಇಲ್ಲ. ಕಾಲ ಜರಡಿ ಹಿಡಿದು ಅವುಗಳಲ್ಲಿ ಒಗ್ಗದ ಪದಗಳನ್ನು ತಿರಸ್ಕರಿಸಿ ಅಸ್ಮೃತಿಲೋಕಕ್ಕೆ ತಳ್ಳುತ್ತದೆ. ಅಂದಮೇಲೆ ನಾವು ಅಂಜಿಕಿನ್ಯಾತಕಯ್ಯ ಎಂದು ಹಾಡಬಹುದು. ಪದಗಳನ್ನು ಎರವು ತೆಗೆದುಕೊಳ್ಳುವ ವಿಷಯದಲ್ಲಿ ನಾವು ಈಗಿರುವುದಕ್ಕಿಂತ ಹೆಚ್ಚು ಉದಾರಭಾವ ತಳೆಯಬೇಕು ಎನ್ನಿಸುತ್ತದೆ. ಕೆಲವು ತಿಂಗಳ ಕೆಳಗೆ ಅಮೆರಿಕದಲ್ಲಿ ಇಂಗ್ಲಿಷ್ ಭಾಷೆಯ ಬೆಳವಣಿಗೆಯನ್ನು ಕುರಿತ ಟಿ.ವಿ. ಚಿತ್ರವನ್ನು ನೋಡಿದೆ. ಅದು ತಿಳಿಸಿದ ಅಂಶಗಳಲ್ಲಿ ಒಂದುನೆನಪಿದೆ:—ಶೇಕ್ಸ್‌ಪಿಯರ್‌ನ ಕಾಲದಲ್ಲೇ ಇಂಗ್ಲಿಷ್ ಭಾಷೆಯಲ್ಲಿ ಸುಮಾರು 12000 ಅನ್ಯದೇಶೀಯ ಪದಗಳಿದ್ದವಂತೆ! ಇಂದಿನ ಆಂಗ್ಲರಿಗೆ ಅವು

ಅನ್ಯದೇಶೀಯ ಎಂಬ ಭಾವನೆಯೇ ಇರುವುದಿಲ್ಲ. ಇದರಿಂದ ನಾವು ಪಾಠ ಕಲಿಯಬಹುದು.

ಕರ್ನಾಟಕ ಸಾಹಿತ್ಯ ಅಕಾಡೆಮಿ–ಅಕಾಡೆಮಿ ಎಂಬ ಹೆಸರನ್ನಿಟ್ಟುಕೊಳ್ಳುವುದರ ಮೂಲಕ–ನಮಗೆ ಮೇಲುಪಂಕ್ತಿ ಹಾಕಿಕೊಟ್ಟಿದೆ! ಆ ಪದವನ್ನು ಇಂಗ್ಲಿಷರು ಗ್ರೀಸಿನಿಂದ ಕದಿಯಬಹುದಾದರೆ ನಾವೇಕೆ ಅವರಿಂದ ಕದಿಯಬಾರದು?

ಇವತ್ತು ನಾವು ಗೌರವಿಸುತ್ತಿರುವ ಲೇಖಕರಲ್ಲಿ creative ಅಂದರೆ ಸೃಜನಶೀಲ ಲೇಖಕರೂ ಇದ್ದಾರೆ, ಅ–ಸೃಜನಶೀಲ non–creative ಲೇಖಕರೂ ಇದ್ದಾರೆ. ಅಥವಾ ನಾನು ಆ ಪದಗಳನ್ನು-creative, non-creative ಎಂಬ ಪದಗಳನ್ನು–ಬಳಸಿದ್ದು ತಪ್ಪು ಎನ್ನಬಹುದೇನೊ. ಬರ್ಟ್ರಂಡ್ ರಸಲ್‌ನ ಬರವಣಿಗೆಯನ್ನು non–creative ಎನ್ನಬಹುದೆ? ಅವನು ಕೊನೆಗಾಲದಲ್ಲಿ ಕಾದಂಬರಿಯೊಂದನ್ನು ಬರೆದನಂತೆ. ನಾನು ಅದನ್ನು ಓದಿಲ್ಲ; ಅದನ್ನು ಯಾರೂ ಹೊಗಳಿದಂತೆ ನೆನಪಿಲ್ಲ. ಬಹುಶಃ ಆ ಕಾದಂಬರಿಗಿಂತ ಅವನ ವೈಚಾರಿಕ ಬರವಣಿಗೆಯಲ್ಲೇ ಹೆಚ್ಚು ಸೃಜನಶೀಲತೆಯಿದೆ.

ಆ ಪದಗಳಿಗೆ ಬದಲಾಗಿ ಬೇರೆ ಪದಗಳನ್ನು ಹುಡುಕಬಹುದು. ಕಳೆದ ಶತಮಾನದಲ್ಲಿ ಡಿಕ್ವಿನ್ಸಿ(De quincey) ಸಾಹಿತ್ಯವನ್ನು 'The literature of power, and the literature of knowledge' ಎಂದು ವಿಂಗಡಿಸಿದ. ನಾವೂ ಆ ವಿಂಗಡಣೆಯನ್ನು ಒಪ್ಪಬಹುದು. ಶಕ್ತಿಪ್ರಧಾನ ಸಾಹಿತ್ಯ, ಜ್ಞಾನ ಪ್ರಧಾನ ಸಾಹಿತ್ಯ ಎಂಬ ಪದಗಳನ್ನು ಬಳಸಬಹುದು. ಸೃಜನಶೀಲ, ವೈಚಾರಿಕ–ಇವೆರಡರ ನಡುವೆ ಯಾರಿಗೂ ಮೀಸಲಾಗದ no man's land ಒಂದಿದೆ. ಭಾರತೀಯ ಸಾಹಿತ್ಯ ಆ ಕ್ಷೇತ್ರದಲ್ಲಿ ಇನ್ನೂ ಹೆಚ್ಚು ದುಡಿಯಬೇಕು. ನಮ್ಮಲ್ಲಿ ಆ ದುಡಿಮೆ ನಡೆಯುತ್ತಿದೆ ಎನ್ನುವುದಕ್ಕೆ ಇಂದು ಬಹುಮಾನ ಪಡೆಯುತ್ತಿರುವ ಪುಸ್ತಕಗಳ ಪಟ್ಟಿಯೇ ಸಾಕ್ಷಿ. ಆದರೂ ಆಲಿವರ್ ಟ್ವಿಸ್ಟ್‌ನಂತೆ I ask for more!

ನಾವು ಇವತ್ತು ಗೌರವಿಸುತ್ತಿರುವ ಪ್ರಸಿದ್ಧ ಸಾಹಿತಿಗಳೆಲ್ಲರಿಗೂ ನಮ್ರನಾಗಿ ಮಂದನೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರು ನಮ್ಮ ನಾಡಿಗೂ ನುಡಿಗೂ ನೀಡಿರುವ ಕೊಡುಗೆಗಾಗಿ ತಮ್ಮೆಲ್ಲರ ಪರವಾಗಿ ಅವರಿಗೆ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ.

ನಮಸ್ಕಾರ.

ಧಾರವಾಡ

18–11–89

"ದಿ ಪ್ಲೇಗ್"

—ಪಿ.ವಿ.ಎಸ್. ರಾವ್

'There is no such thing as the State
and no one Exists alone;
Hunger allows no choice
To the Citizen or the police,
we must love one another or die'

—W.H. AUDEN

ಇಡೀ ಯುರೋಪಿಯನ್ ಸಾಹಿತ್ಯದ ಮೇಲೆ ಅಗಾಧವಾದ ಪ್ರಭಾವ ಬೀರಿದ 'ದಿ ಪ್ಲೇಗ್' ಕಮುವಿನ ಪ್ರಾತಿನಿಧಿಕ ಕೃತಿಯೂ ಆಗಿರುವುದರಿಂದ, ಕಾದಂಬರಿಯ ವಿಶ್ಲೇಷಣೆ ಕಮುವಿನ ತಾತ್ವಿಕ ವಿಚಾರಗಳ ವಿವೇಚನೆ ಕೂಡ ಆಗುತ್ತದೆ. ಸಾಂಪ್ರದಾಯಿಕ ಕಾದಂಬರಿಗಳಲ್ಲಿ ಕಂಡುಬರುವ ಒಂದು ಜನಜೀವನದ ದಟ್ಟ ವಿವರಗಳು ಕಮುವಿಗೆ ತಂತ್ರದ ದೃಷ್ಟಿಯಿಂದ ಅಮುಖ್ಯವಾಗಿ ಬಿಸುತ್ತವೆ. ವಾಸ್ತವವಾದದ ಕಾದಂಬರಿಗಳಿಗೆ ಒಂದು ಪರಂಪರೆಯ ಹಿನ್ನೆಲೆ ಇದೆ. ಒಂದು ಸಮಾಜದ ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಸ್ಥಿತ್ಯಂತರಗಳನ್ನು ಅವುಗಳ ಎಲ್ಲಾ ಪರಿಪೂರ್ಣತೆಯಲ್ಲಿ ಹಾಗೂ ಸಂಕೀರ್ಣತೆಯಲ್ಲಿ ಇಂತಹ ಕಾದಂಬರಿಗಳು ಸಮರ್ಥವಾಗಿ ದಾಖಲಿಸುತ್ತವೆ. ವೈಯುಕ್ತಿಕ ಬದುಕಿನ ಹಿನ್ನೆಲೆಯಲ್ಲಿ ಚಲನಶೀಲ ಜಗತ್ತನ್ನು ಅರ್ಥಮಾಡಿಕೊಳ್ಳುವ ಪ್ರಕ್ರಿಯೆ ವಾಸ್ತವತಾವಾದದ ಕಾದಂಬರಿಕಾರರ ಪ್ರಮುಖ ಆಶಯವಾಗಿರುತ್ತದೆ.

ಆದರೆ ಕಣ್ಣಿಗೆ ಕಂಡದ್ದೆ ಜಗತ್ತೆ ? ಕಣ್ಣಿಗೆ ಕಾಣದ ಅನೇಕ ಸಂಗತಿಗಳು ಮನುಷ್ಯನ ಅಸ್ತಿತ್ವವನ್ನು ನಿಯಂತ್ರಿಸುತ್ತಿಲ್ಲವೆ ? ಮೇಲ್ನೋಟಕ್ಕೆ ವೈಯುಕ್ತಿಕವಲ್ಲದ ವಿಷಯಗಳು ಮನುಷ್ಯನ ಆಂತರಿಕ ಜಗತ್ತನ್ನು ನಿರ್ದೇಶಿಸುತ್ತಿಲ್ಲವೆ ?

ಕಮುವಿನ ದೃಷ್ಟಿಯಲ್ಲಿ ದೇವರು ಮಾತ್ರ ರಿಯಲಿಸ್ಟಿಕ್ ಕಲಾವಿದ. ಮೇಲೆ ಕುಳಿತು ಇಡೀ ಪ್ರಪಂಚವನ್ನು ಇಡಿಯಾಗಿ ಅವಲೋಕಿಸಲು ಅವನಿಗೆ ಮಾತ್ರ ಸಾಧ್ಯ. ಆದ್ದರಿಂದ ವಾಸ್ತವತಾವಾದಿ ಲೇಖಕರ ಜೀವನದೃಷ್ಟಿ ದೃಗ್ಗೋಚರ ವಿಚಾರಗಳಿಗೆ ಮಾತ್ರ ಸೀಮಿತವಾಗಿರುತ್ತದೆ, ಎಂದು ಕಮು ನಂಬುತ್ತಾನೆ. ಇಂತಹ ಲೇಖಕರ ಕೃತಿಗಳಲ್ಲಿ ಪ್ರಕಟಗೊಳ್ಳುವ ಜೀವನಾನುಭವ ಮನುಷ್ಯನ ಬಾಹ್ಯ ಪ್ರಪಂಚದ ಮೂರ್ತ ವಿವರಗಳ ಅನಧಿಕೃತ ದಾಖಲೆ ಅಷ್ಟೆ. ಆದರೆ ಮನುಷ್ಯನ ಸ್ವಗತಗಳನ್ನು, ಆಧುನಿಕ ನಾಗರೀಕರಣದ ತೆಕ್ಕೆಯಲ್ಲಿಯೇ ಸುಪ್ತವಾಗಿರುವ, ಮನುಷ್ಯನ ಬಾಹ್ಯವನ್ನು ವಿಕೃತ

ಪಿ.ವಿ.ಎಸ್. ರಾವ್, ಇಂಗ್ಲೀಷ್ ಅಧ್ಯಾಪಕ, ಲಾಲ್‌ಬಹದ್ದೂರ್ ಕಾಲೇಜು, ಸಾಗರ-577401

ಗೊಳಿಸುವ ಶಕ್ತಿಗಳನ್ನು ವಿಶ್ಲೇಷಣೆಗೆ ಒಡ್ಡುವ ತಾತ್ವಿಕ ದೃಷ್ಟಿಕೋನವನ್ನು ಕಮು ಹೊಂದಿರುವುದು 'ಪ್ಲೇಗ್' ಕಾದಂಬರಿಯ ಪ್ರಾರಂಭಿಕ ಕ್ಷಣಗಳಲ್ಲೆ ಗೊತ್ತಾಗಿಬಿಡುತ್ತದೆ. ಒರನ್ ನಗರಕ್ಕೆ ಬಡಿದಿರುವ ಪ್ಲೇಗ್ ಕೇವಲ ವ್ಯಾವರ್ತವಾಗಿ ಅಲ್ಲಿನ ಜನಜೀವನದ ದೈನಂದಿನ ವ್ಯವಹಾರಗಳನ್ನಷ್ಟೆ ಸ್ಥಗಿತಗೊಳಿಸುವುದಿಲ್ಲ. ಪ್ಲೇಗು ಒಂದು ಅವಸ್ಥೆ ; ನಿಶ್ಚಲ ಸ್ಥಿತಿ; ಹಾಗಾಗಿ ಅದಕ್ಕೆ ಅನೇಕ ಆಯಾಮಗಳಿವೆ. ಅವೆಲ್ಲ ಸಾಂಕೇತಿಕ ಮಟ್ಟದಲ್ಲಿ ಕೆಲಸ ಮಾಡುತ್ತವೆ. ಹತ್ತಿಕ್ಕಲಾಗದ ಯಾವುದೇ ಸ್ಥಿತಿಯನ್ನು ಪ್ಲೇಗ್ ಸಾಂಕೇತಿಸುತ್ತದೆ.

ಇಲ್ಲಿ ಸಾಯುವ ಸಣ್ಣ ಘಟನೆಯೊಂದಿಗೆ 'ಪ್ಲೇಗ್' ಪ್ರಾರಂಭವಾಗುತ್ತದೆ. ಇದರ ಕ್ರಿಯೆ ನಡೆಯುವುದು ಆಲ್ಜೀರಿಯಾದ ಬಂದರು ನಗರವಾದ ಒರನ್‌ನಲ್ಲಿ. ಇಲ್ಲಿನ ಕೇಂದ್ರ ವ್ಯಕ್ತಿ ರಿಯೂ ಎಂಬ ವೈದ್ಯ. ಆತ ಒಂದು ದಿನ ಬೆಳಿಗ್ಗೆ ತನ್ನ ಸಲಹೆ ಕೋಣೆಯ ಹೊರಗೆ ಒಂದು ಸತ್ತ ಇಲಿಯನ್ನು ನೋಡುತ್ತಾನೆ. ಅವನಿಗೆ ಅದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡುವ ವ್ಯವಧಾನ ಇಲ್ಲ. ಏಕೆಂದರೆ ಆತ ಕ್ಷಯದಿಂದ ನರಳುತ್ತಿರುವ ತನ್ನ ಮಡದಿಯನ್ನು ಒಂದು ವಿಶ್ರಾಂತಿಧಾಮಕ್ಕೆ ಕಳಿಸಬೇಕಾಗಿದೆ, ಅವಳಿಂದ ಸಂಪೂರ್ಣವಾಗಿ ಬೇರೆಯಾದರೂ ಕೂಡ ಆತ ವಿಚಲಿತನಾಗುವುದಿಲ್ಲ. ಮನುಷ್ಯನ ಅಗಲಿಕೆ ಕೂಡ ಈ ಕಾದಂಬರಿಯ ವಸ್ತು.

ಈ ಮಧ್ಯೆ ರ್‍ಯಾಂಬರ್ಟ್ ಅನ್ನುವ ಪತ್ರಿಕೋದ್ಯಮಿ, ಪ್ಯಾರಿಸ್ಸಿಂದ ಒರನ್‌ಗೆ ಬಂದಿದ್ದಾನೆ. ಆತ ಒರನ್ ನಗರದ ಅರಬರ ಪರಿಸ್ಥಿತಿ ಬಗ್ಗೆ ಪ್ಯಾರಿಸ್ಸಿನ ಪತ್ರಿಕೆಗೆ ಬರೆಯಬೇಕಾಗಿದೆ. ಅದಕ್ಕಾಗಿ ವಿವರಗಳನ್ನು ಸಂಗ್ರಹಿಸಲು ರ್‍ಯಾಂಬರ್ಟ್ ರಿಯೂ ಹತ್ತಿರ ಬರುತ್ತಾನೆ. ಆದರೆ ವೈದ್ಯನ ಅಪೇಕ್ಷೆಯಂತೆ ಅರಬರ ದಾರುಣ ಸ್ಥಿತಿಯನ್ನು ಖಂಡಿಸಿ ವರದಿ ಮಾಡಲು ಆತ ನಿರಾಕರಿಸುತ್ತಾನೆ.

ಸಾಯುವ ಇಲಿಗಳ ಸಂಖ್ಯೆ ಜಾಸ್ತಿಯಾಗುತ್ತದೆ. ಇದರಿಂದ ಒಬ್ಬ ಮಂದಿ ಅಸ್ತಮಾ ರೋಗಿ ಗೊಂದಲಕ್ಕೊಳಗಾಗುತ್ತಾನೆ. ಗ್ರಾಂಡ್ ಅನ್ನುವ ಕ್ಲಾರ್ಕ್ ತನ್ನನೆರೆಯವನಾದ ಕಾಟರ್ಡ್ ಆತ್ಮಹತ್ಯೆಗೆ ಪ್ರಯತ್ನಿಸಿದ ವಾರ್ತೆ ತರುತ್ತಾನೆ. ಜೀನ್ ಟ್ಯಾರೋ ಅನ್ನುವ ಕುತೂಹಲಕಾರಿ ವ್ಯಕ್ತಿ ಪ್ಲೇಗ್ ಬಗ್ಗೆ ಡೈರಿ ಬರೆಯುತ್ತಾನೆ. ಅದರಲ್ಲಿ ಆತ ಒಬ್ಬ ಮುದುಕ ಬೆಕ್ಕು ಇಲಿಗಳ ಬಗ್ಗೆ ವಿಚಿತ್ರವಾಗಿ ವರ್ತಿಸುವುದನ್ನು ದಾಖಲಿಸಿದ್ದಾನೆ. ಆದರೆ ವೈದ್ಯ ರಿಯೂಗೆ ಪ್ಲೇಗಿನ ಅಸ್ತಿತ್ವದ ಬಗ್ಗೆ ಇನ್ನೂ ಖಾತ್ರಿಯಾಗಿಲ್ಲ. ಅವನಿಗೆ ತನ್ನ ಕೆಲಸವನ್ನು ಅಚ್ಚುಕಟ್ಟಾಗಿ ನೆರವೇರಿಸುವುದು ಮಾತ್ರ ಮುಖ್ಯವಾಗುತ್ತದೆ.

ಇಲ್ಲಿ ಇನ್ನೂ ಒಂದು ವಿಷಯವನ್ನು ಗಮನಿಸಬೇಕು. ಕಾದಂಬರಿಯಲ್ಲಿ ಕಮು ಪ್ಲೇಗನ್ನು ಒಂದು ಆಕಸ್ಮಿಕವೆಂಬಂತೆ ಚಿತ್ರಿಸುತ್ತಿಲ್ಲ ; ಬದಲಿಗೆ ಅದೊಂದು ನಿಶ್ಚಲ ಸ್ಥಿತಿ

ಂಬಂತೆ ಚಿತ್ರಿಸುತ್ತಾನೆ. ಅಂತಹ ಸ್ಥಿತಿಯನ್ನು ವಿರೋಧಿಸುವ ಪ್ರಯತ್ನಗಳ ತಾತ್ವಿಕ ಸ್ವರೂಪದ ಬಗ್ಗೆ ಕಮುವಿನ ಆಶಯಗಳು ಕೇಂದ್ರಿಕೃತವಾಗಿರುವುದು ವೈದ್ಯ ರಿಯೂ ಮತ್ತು ಪಾದ್ರಿ ಪೆನೋ ಬಗ್ಗೆ. ಓದುವಾಗ ಅವರ ಕಾರ್ಯಕ್ಷೇತ್ರಗಳ ಮೂರ್ತ, ಅಮೂರ್ತ ಜಗತ್ತುಗಳ ಪರಿಚಯ ಮಾಡಿಕೊಳ್ಳುವಾಗ ಹೆಚ್ಚು ಹೆಚ್ಚು ನಿರ್ದಿಷ್ಟ ವಾಗುತ್ತಾ ಹೋಗುತ್ತದೆ. ಪ್ಲೇಗಿನ ಅವಸ್ಥೆಯನ್ನು ವಿರೋಧಿಸಲು ಇಲ್ಲಿನ ಎಲ್ಲ ಪಾತ್ರ ಗಳು ಬೇರೆ ಬೇರೆ ರೀತಿಯಲ್ಲಿ ಪ್ರಯತ್ನಿಸುತ್ತವೆ. ರಿಯು ಒಬ್ಬ "ಪ್ರೊಫೆಷನಲ್" ಅವನದು ಮೂರ್ತವಾದ ನಿರಂತರ ಹೋರಾಟ. ಪೆನೆಲೋ ಒಬ್ಬ ಪಾದ್ರಿ; ಅವನು ತನ್ನ ಧರ್ಮ ಜಿಜ್ಞಾಸೆಯಲ್ಲಿ ಪ್ಲೇಗಿಗೆ ಕಾರಣಗಳನ್ನು ಕಂಡುಕೊಳ್ಳಲು ಪ್ರಯತ್ನಿಸು ತ್ತಾನೆ.

ಪ್ಲೇಗನ್ನು ಒಕ್ಕುವ ಯಂತ್ರಕ್ಕೆ ಹೋಲಿಸುವ ಪಾದ್ರಿ ತನ್ನ ಎರಡು ಪ್ರವಚನಗಳಲ್ಲಿ ಪ್ಲೇಗಿನ ಆದಿ ಭೌತಿಕ ಆಯಾಮಗಳನ್ನು ಗುರುತಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಒಕ್ಕುವ ಯಂತ್ರ ಹೇಗೆ ಕಾಳನ್ನು ಕಸದಿಂದ ಬೇರ್ಪಡಿಸುತ್ತದೂ ಹಾಗೆ ಪ್ಲೇಗು ಒಳಿತು ಕೆಡುಕುಗಳನ್ನು ಪ್ರತ್ಯೇಕಿಸುತ್ತದೆ. ಕೆಟ್ಟವರು ಈ ಪ್ಲೇಗು ಯಂತ್ರಕ್ಕೆ ಸಿಕ್ಕಿ ಜಜ್ಜಿ ಒಳ್ಳೆ ಯವರು ಮಾತ್ರ ಈ ಪ್ರಪಂಚದಲ್ಲಿ ಉಳಿಯುತ್ತಾರೆ. ಪ್ಲೇಗು ಆಗಿಂದಾಗ್ಗೆ ಮನುಷ್ಯ ಕುಲದ ಮೇಲೆ ದಾಳಿ ಮಾಡಿ 'ಕಾಳನ್ನು' 'ಕಸ'ದಿಂದ ಬೇರ್ಪಡಿಸುತ್ತದೆ. ಹಾಗೆ ಮಾಡು ವುದರ ಮುಖಾಂತರ ಈ ಯಂತ್ರ ನಿಕೃಷ್ಟವಾಗಿ ಮೇಲೆದ್ದು 'ಸತ್ಯದ ಸುಗ್ಗಿ'ಗಾಗಿ ಬಿತ್ತನೆ ಮಾಡುತ್ತದೆ. ಹಾಗಾಗಿ ಪ್ಲೇಗು ಮನುಷ್ಯನ ಪುಣ್ಯಪಾಪಗಳ ಫಲವಾಗಿ ಭೂಮಿಗೆ ರವಾನೆಯಾದದ್ದು; ಮನುಷ್ಯ ಕುಲದಲ್ಲಿನ ಕೆಡಕಿನ ವಿನಾಶಕ್ಕಾಗಿ.

ಪಾದ್ರಿ ಪ್ಲೇಗನ್ನು ಈರೀತಿ ಬಹಳ ಇತ್ಯಾತ್ಮಕವಾಗಿ ಪರಿಗಣಿಸುವುದು, ಅದು ದೇವರ 'ಪ್ರಸಾದ'ವೆಂಬಂತೆ ಸ್ವೀಕರಿಸುವುದು ಯಾವುದೇ ತಾತ್ವಿಕ ಅಥವಾ ವೈಚಾರಿಕ ತಳಹದಿ ಇಲ್ಲದ ವಿವೇಚನೆಯಿಲ್ಲದ ಪ್ಲೇಗಿನ ವಿರುದ್ಧದ ಹೋರಾಟಕ್ಕೆ ವ್ಯತಿರಿಕ್ತವಾದ ನಿಲುವು ಎಂದೆನಿಸಿದರೂ ಕಮುವಿಗೆ ಪ್ಲೇಗಿನ ನಿಗೂಢತೆ ಮತ್ತು ವಿಸ್ಮಯವನ್ನು ಅರ್ಥ ಮಾಡಿಕೊಳ್ಳಲು ಈ ಪಾತ್ರ ಅತ್ಯಂತ ಪ್ರಾಸಂಗಿಕವಾಗಿ ಕಾದಂಬರಿಯಲ್ಲಿ ನಿರೂಪಣೆ ಗೊಂಡಿದೆ. ಆದರೆ ಪಾದ್ರಿಯ ಧಾರ್ಮಿಕ ವಿವರಣೆ ಪ್ಲೇಗಿನ ನಿಗೂಢತೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ. ಒಂದು ನಾಗರೀಕತೆಯ ಸಮಸ್ಯೆಯನ್ನು ಧರ್ಮದ ಮುಖಾಂತರ ಬೇಧಿ ಸುವ ನಡವಳಿಕೆಯನ್ನು ಕಮು ಪ್ರಶ್ನಿಸುತ್ತಿದ್ದಾನೆ. ಎಂದೆನಿಸುತ್ತದೆ.

ಆದರೆ ಪಾದ್ರಿಯಲ್ಲಿ ಈಗ ಕೆಲವು ಅನಿವಾರ್ಯ ಬದಲಾವಣೆಗಳು ಉಂಟಾಗುವುದು ಅವನ ಎರಡನೇ ಪ್ರವಚನದಲ್ಲಿ ಸ್ಪಷ್ಟವಾಗುತ್ತದೆ. ಆತನ ಮೊದಲನೆ ಪ್ರವಚನದಲ್ಲಿ ಪಾದ್ರಿ ಪ್ಲೇಗಿಂದ ತನ್ನನ್ನು ಹೊರತುಪಡಿಸಿಕೊಂಡರೆ ಎರಡನೆಯದರಲ್ಲಿ ಪ್ಲೇಗಿಗೆ ತನ್ನನ್ನೆ

ಒಡ್ಡಿಕೊಳ್ಳುತ್ತಾನೆ. (ಈ ಬದಲಾವಣೆ ಕಮೂವಿನ ತಾತ್ವಿಕ ಸಿದ್ಧಾಂತದ ಪರಿಶೀಲನೆಗೆ
ಹೆಚ್ಚು ಸಹಕಾರಿಯಾಗಬಲ್ಲದು) ಒಂದು ಚಾರಿತ್ರಿಕ ಹಿನ್ನೆಲೆಯಲ್ಲಿ ಪ್ಲೇಗಿನ ದುರಂತವನ್ನು
ಅರ್ಥಮಾಡಿಕೊಳ್ಳಲು ಆತ ಪ್ರಯತ್ನಿಸುತ್ತಾನೆ. ಮರ್ಸಿಟೆಯಲ್ಲಿ ಸಂಭವಿಸಿದ ಪ್ಲೇಗಿನ
ಉದಾಹರಣೆಯನ್ನು ಪಾದ್ರಿ ನೀಡುತ್ತಾ, ಹೇಗೆ ಅಲ್ಲಿನ ಬಿಷಪ್ ಆಹಾರ ಸಾಮಗ್ರಿಗ
ಳೊಂದಿಗೆ ತನ್ನ ಅರಮನೆಯಲ್ಲಿ ತನ್ನನ್ನೇ ಬಂಧಿಸಿಕೊಂಡು ಪ್ಲೇಗಿಂದ ದೂರ ಹೋದಾಗ
ಅಲ್ಲಿಯವರೆಗೆ ಅವನನ್ನು ಪೂಜಿಸುತ್ತಿದ್ದ ಜನ ಸಿಟ್ಟಾಗಿ ಪ್ಲೇಗಿಂದ ಸತ್ತ ಹೆಣಗಳನ್ನು ಆ
ಅರಮನೆಯ ಸುತ್ತ ರಾಶಿ ಹಾಕಿ ಆತನನ್ನು ಪ್ಲೇಗಿನ ಜಾಡ್ಯದಿಂದ ಸಾಯಿಸಲು ಪ್ರಯ
ತ್ನಿಸಿದರು ಎಂದು ಹೇಳುತ್ತಾನೆ. ನಾವು ನಮ್ಮ ದ್ವಂದ್ವವನ್ನು ಒಪ್ಪಿಕೊಂಡು ದೇವರನ್ನು
ಪ್ರೀತಿಸುವ ಅಥವಾ ದ್ವೇಷಿಸುವ ಆಯ್ಕೆಯನ್ನು ಮಾಡಿಕೊಳ್ಳಬೇಕಾಗಿದೆ. ಮನುಷ್ಯ
ತನ್ನ ವ್ಯಕ್ತಿತ್ವವನ್ನು ತೊರೆದು ಸಾರ್ವತ್ರಿಕ ಒಳಿತಿಗೆ ತನ್ನದೆಲ್ಲವನ್ನು ದೇವರಿಗೆ ಒಪ್ಪಿಸಿ
ಪ್ಲೇಗಿನ ವಿರುದ್ಧದ ಹೋರಾಟದಲ್ಲಿ ಪಾಲ್ಗೊಳ್ಳಬೇಕು. ಆ ಮೂಲಕವೇ ದೇವರ ನಿಜ
ವಾದ ಪ್ರೀತಿಯನ್ನು ಸಂಪಾದಿಸಿಕೊಳ್ಳಬಹುದು.

ಪಾದ್ರಿಯಲ್ಲಿ ಉಂಟಾಗುವ ಈ ಬದಲಾವಣೆ ಒಂದು ನಿಶ್ಚಲ ಸ್ಥಿತಿಯ ವಿರುದ್ಧ
ಬರೀ ತಾತ್ವಿಕ rhetoric ಗಳ ಮುಖಾಂತರ ಹೋರಾಡದೆ, ಇಡೀ ಸಮಸ್ಯೆಯ
ನಿರಂತರತೆಯ ವಿರುದ್ಧ ಸ್ಥಳೀಕನಾಗುವ ಪ್ರಕ್ರಿಯೆಯನ್ನು ದಾಖಲಿಸುತ್ತದೆ. ವೈದ್ಯ
ರಿಯೂ ಹಾಗೆ ಸ್ಥಳೀಕನಾಗುವುದರಿಂದ ಪ್ಲೇಗನ್ನು ಯಾವುದೇ ಮಟ್ಟದಲ್ಲೂ ಕೂಡ
ಎದುರಿಸುವ ಆತ್ಮ ವಿಶ್ವಾಸಗಳಿಸಿಕೊಳ್ಳುತ್ತಾನೆ. ಆದರೆ ಪಾದ್ರಿಗೆ ತನ್ನ ದೈವತ್ವದ ಬಗೆ
ಗಿನ ನಂಬಿಕೆಯಿಂದಾಗಿ, ಆ ಮಟ್ಟದ ಹೋರಾಟ ಕೊನೆಗೂ ಅಸಾಧ್ಯವಾಗಿ ಪ್ಲೇಗಿಗೆ
ತಾನೂ ತುತ್ತಾಗಿ ಸಾಯುತ್ತಾನೆ.

ಆದರೆ ವೈದ್ಯ ರಿಯೂ ಹೆಚ್ಚು ಹೆಚ್ಚು ಸಂಘಟನಾ ಶಕ್ತಿಯನ್ನು ರೂಪಿಸಿಕೊಂಡು
ತನ್ನ ಹೋರಾಟವನ್ನು ಅಧಿಕೃತಗೊಳಿಸುತ್ತಾನೆ. ಪಾದ್ರಿಯ ಎರಡೂ ಪ್ರವಚನಗಳನ್ನು
ಕೇಳಿದ ಅವನಿಗೆ ಅವರ ಹಿಂದಿನ self-deception ಬಹಳ ಸ್ಪಷ್ಟವಾಗಿ ಅರ್ಥವಾಗು
ತ್ತದೆ. ಸಾಯುವ ಒಂದು ಮಗುವನ್ನು ಪಾದ್ರಿಗೆ ತೋರಿಸಿ ಉದ್ಗರಿಸುವ ಮಾತುಗಳಂತೂ
ಪಾದ್ರಿಯನ್ನು ಮೂಕನನ್ನಾಗಿಸುತ್ತವೆ. ತನಗೆ ಮುಕ್ತಿಗಿಂತ ಮನುಷ್ಯನ ಆರೋಗ್ಯ
ಪ್ರಮುಖವಾದ ಆಸಕ್ತಿ ಎಂತ ರಿಯೂ ತಿಳಿಯುತ್ತಾನೆ. ಮುಗ್ಧರನ್ನು ಹಿಂಸಿಸುವ
ಯಾವುದೇ ವ್ಯವಸ್ಥೆಯನ್ನೂ ತಾನು ಸಹಿಸಲಾರೆ ಎಂದು ಪಾದ್ರಿಗೆ ಮನವರಿಕೆಮಾಡಿ
ಕೊಡುತ್ತಾನೆ.

ವೈದ್ಯ ರಿಯೂನ ಸಂಘಟನೆಗೆ ಒಂದು ರೀತಿಯಲ್ಲಿ ಪ್ರೇರಕ ಶಕ್ತಿಯಾಗಿ ರೂಪು
ಗೊಳ್ಳುವ ಜೀನ್‌ಟ್ಯಾರೋ ತನ್ನ ಹಿನ್ನೆಲೆಗಳಿಂದ ಸಂಪೂರ್ಣವಾಗಿ ಕಳಚಿಕೊಂಡು

ಯೂನ ಹೋರಾಟವಲ್ಲಿ ತಾನೂ ಭಾಗಿಯಾಗುತ್ತಾನೆ. ಒರನ್‌ಗೆ ಬರುವ ಮುಂಚೆಯೇ ತಾನು ಪ್ಲೇಗ್‌ಗೆ ಒಳಗಾಗಿದ್ದೆ ಎನ್ನುವ ಟ್ಯಾರೋ, ಈಗ ಒರನ್‌ನಲ್ಲಿ ಉಂಟಾಗಿರುವ ಪ್ಲೇಗಿನ ವಿರುದ್ಧ ಬಹಿರಂಗವಾಗಿ ಹೋರಾಡಬೇಕಾಗಿದೆ ಎಂದು ಹೇಳುತ್ತಾನೆ. ತನ್ನ ತಂದೆ ಸಾರ್ವಜನಿಕ ವಿಚಾರಣೆಯ ನಿರ್ದೇಶಕನಾಗಿದ್ದ ಬಗ್ಗೆ ಹೇಳುವ ಟ್ಯಾರೋ, ಹೇಗೆ ತನ್ನ ತಂದೆ ಆತನನ್ನು ಒಂದು ದಿನಸ ನ್ಯಾಯಾಲಯಕ್ಕೆ ಬರಹೇಳಿದ್ದು ತಾನುಕೂಡ ಮುಂದೆ ಅದೇ ಉದ್ಯೋಗ ನಡೆಸಲಿ ಎಂಬುದಕ್ಕಾಗಿ ಎಂದು ತಿಳಿಯುತ್ತಾನೆ. ಆದರೆ ತಾನು ನ್ಯಾಯಾಲಯದಿಂದ ವಾಪಸ್ಸು ಬರುವಾಗ ತನ್ನ ತಲೆಯಲ್ಲಿದ್ದಿದ್ದು ಒಬ್ಬ ಅಪರಾಧಿಯ ಚಿತ್ರವೇ ಹೊರತು ತಾನು ತನ್ನ ತಂದೆಯ ವಾಕ್‌ಶೈಲಿಯಿಂದ ಆಕರ್ಷಿತನಾಗಲಿಲ್ಲ ಅಂತ ರಿಯೂಗೆ ತಿಳಿಸುತ್ತಾನೆ. ಆ ಅಪರಾಧಿಯ ಕುರಿತು ನಡೆಯುವ ವಿಚಾರಣೆ ಹಾಗೂ ಇಡೀ ನ್ಯಾಯಾಲಯ ವ್ಯವಸ್ಥೆಯ ಅಸಂಗತ ಮತ್ತು ಅಸಂಬದ್ಧ ಘೋಷಣೆಗಳಿಂದಾಗಿ ಆತನಿಗೆ ಜಿಗುಪ್ಸೆ ಉಂಟಾಗಿ ಕ್ರಮೇಣ ತನ್ನ ತಂದೆಯಿಂದ ದೂರವಾಗುತ್ತಾನೆ. ಹೀಗಾಗಿ ಇಲ್ಲಿಯವರೆಗೆ ತನ್ನ ಅಂತರಂಗದಲ್ಲೇ ಸುಪ್ತವಾಗಿದ್ದ ಪ್ಲೇಗ್ ವಿರುದ್ಧ ಹೋರಾಡಿ ಈಗ ಒರನ್‌ನಲ್ಲಿ ಬಹಿರಂಗವಾಗಿ ಪ್ಲೇಗನ್ನು ನಿಭಾಯಿಸಬೇಕಾಗಿದೆ. ಡಾ॥ ರಿಯೂ ಹಾಗೆ ನಿರಂತರ ಹೋರಾಟದ ಫಲಶೃತಿಯೇ ಪ್ಲೇಗಿಲ್ಲದ ಒಂದು ವ್ಯವಸ್ಥೆಯ ನಿರ್ಮಾಣ ಎಂದು ಗಾಢವಾಗಿ ನಂಬಿ ವೈದ್ಯ ರಿಯೂನ ಸಂಘಟಿತ ಹೋರಾಟಕ್ಕೆ ಬೆಂಬಲವಾಗಿ ನಿಲ್ಲುತ್ತಾನೆ. ದೇವರನ್ನು ನಂಬದೆಯೇ ಸಂತನಾಗಬೇಕೆಂಬ ವಿರೋಧಾತ್ಮಕ ಬಯಕೆ ವ್ಯಕ್ತಪಡಿಸುತ್ತಾನೆ. ಅದೊಂದೇ ತನಗಿರುವ ಸಮಸ್ಯೆ ಎಂದು ರಿಯೂಗೆ ತಿಳಿಸುತ್ತಾನೆ. ಕೊನೆಗೂ ಪ್ಲೇಗ್ ವಿರುದ್ಧ ಹೋರಾಡಿ ಸಂತನಾಗದೆ ಹುತಾತ್ಮನಾಗುತ್ತಾನೆ.

ಟ್ಯಾರೋ ಬಗ್ಗೆ ಇಷ್ಟು ಹೇಳಬೇಕಾದ ಕಾರಣ ; ಅವನ ಅರಿವು ಈ ಕಾದಂಬರಿಗಿರುವ ಸಾಂಕೇತಿಕತೆಯನ್ನು ಹೆಚ್ಚಿಸುತ್ತದೆ. ಏಕೆಂದರೆ ಪ್ಲೇಗ್ ಮನುಷ್ಯನ ಭೌತಿಕ ಜಗತ್ತನ್ನು ನಾಶಗೊಳಿಸುವ ಹಾಗೆ, ಸುಪ್ತವಾಗಿದ್ದುಕೊಂಡು ಆತನ ಎಲ್ಲಾ ತರಹದ ಅಸ್ತಿತ್ವವನ್ನೇ ನಿರ್ನಾಮಮಾಡುತ್ತದೆ ಎಂದು ಟ್ಯಾರೋ ತಿಳಿಯುತ್ತಾನೆ. ಆತನ ಆತ್ಮಾವಲೋಕನ ಪ್ಲೇಗಿನ ನಿಶ್ಚಲ ಸ್ಥಿತಿಯನ್ನು ಮತ್ತೊಮ್ಮೆ ಪ್ರಕಟಪಡಿಸುತ್ತದೆ. ಮೂಲಭೂತವಾಗಿ ಪ್ಲೇಗು ಮನುಷ್ಯನ ಅಸ್ತಿತ್ವದ ಪ್ರಶ್ನೆಯಾದ್ದರಿಂದ ಅದಕ್ಕೆ ವೈಚಾರಿಕ ಉತ್ತರಗಳಿಲ್ಲ ಎನ್ನುವುದು ಪಾದ್ರಿಯ ಧಾರ್ಮಿಕ ವಿಶ್ಲೇಷಣೆಯ ನಿರುಪಯುಕ್ತತೆ ಹಾಗೂ ವೈದ್ಯ ರಿಯೂ ಮತ್ತು ಟ್ಯಾರೋ ಅವರ(ನಿರಪೇಕ್ಷ) ನಿರ್ಲಿಪ್ತ ಹೋರಾಟಗಳಿಂದ ಸ್ಪಷ್ಟವಾಗುತ್ತದೆ.

ವೈದ್ಯ ರಿಯೂ ಈ ತರಹದ ಹೋರಾಟದಲ್ಲಿ ಎಷ್ಟು ಒಗ್ಗಿ ಹೋಗಿದ್ದಾನೆಂದರೆ ಆತನ ಪತ್ನಿ ಸತ್ತ ವಾರ್ತೆ ತರುವ ತಂತಿ ಸಂದೇಶ ಕೂಡಾ ಆತನನ್ನು ವಿಚಲಿತನನ್ನಾಗಿ

ಮಾಡುವುದಿಲ್ಲ. ಅದನ್ನು ಆತ ನಿರೀಕ್ಷಿಸಿಯೇ ಇದ್ದ. ಆತ ತನ್ನ ವ್ಯಕ್ತಿತ್ವವನ್ನೇ ನಿರಾಕರಿಸಿ ಹೋರಾಡುತ್ತಾನೆ. ಆದರೆ ದೈವ ರಕ್ಷೆಯನ್ನು ಪಡೆಯಲಿಕ್ಕಾಗಿ ಅಲ್ಲ ; ತನ್ನ ಆತ್ಮ ಸಂತೃಪ್ತಿಗೂ ಅಲ್ಲ. ಆದರೆ ಇಡೀ ಮನುಕುಲದ ಬಿಡುಗಡೆಗಾಗಿ; ಒಂದು ನಾಗರಿಕತೆಯನ್ನು ಪತನದ ಹಾದಿಯಿಂದ ಸಂರಕ್ಷಿಸುವುದಕ್ಕಾಗಿ. ಡಾ|| ರಿಯೂ ಕಮೂವಿನ Ideal ಆಗುವುದು ಇದೇ ಕಾರಣಕ್ಕಾಗಿ. ಆದರೂ ಆತ hero ಆಗುವುದಿಲ್ಲ. ನಿಜವಾದ ಅರ್ಥವಲ್ಲಿ ಪ್ಲೇಗೇ ಈ ಕಾದಂಬರಿಯ ಹೀರೋ !

ಕ್ರಮೇಣ ಒರನ್ ನಗರ ಮರಳಿ ತನ್ನ ಮೊದಲನೆ ಸ್ಥಿತಿಗೆ ಹೊರಳಿಕೊಳ್ಳುತ್ತದೆ. ಎಲ್ಲರ ಮುಖದಲ್ಲಿ ಮಾಯವಾದ ಮುಗುಳ್ನಗೆ ಮತ್ತೆ ಕಾಣಸಿಕೊಳ್ಳುವುದನ್ನು ಕಾದಂಬರಿಯ ನಿರೂಪಕನಾದ ರಿಯೂ ಗುರುತಿಸುತ್ತಾನೆ. ಇಡೀ ಪ್ರಕೃತಿ ಹೊಸದಾಗಿ ನಿಚ್ಚಳಿಸಲು ಪ್ರಾರಂಭಿಸುತ್ತದೆ. ಒರನ್ ನಗರದ ಜನತೆ ಯಾವುದೋ ಅನಿರ್ವಚನೀಯ ಸಂತೋಷದಲ್ಲಿ ಮುಳುಗುತ್ತದೆ. ಮಕ್ಕಳು ಬೀದಿಗೆ ಬಂದು ಕುಣದಾಡಿದರೆ, ಮುದುಕರು ಪ್ಲೇಗ್ ತಮ್ಮನ್ನು ಉಳಿಸಿದ್ದಕ್ಕಾಗಿ ಭಗವಂತನನ್ನು ಮನಸ್ಸಿನಲ್ಲೇ ವಂದಿಸುತ್ತಾರೆ; ಪ್ರೇಮಿಗಳು ಮತ್ತೆ ಒಟ್ಟಾಗಿ ಒರನ್ ನಗರಕ್ಕೆ ಮರಳಿದ ವಸಂತನಿಗೆ ಸರಿಯಾದ ರೀತಿಯಲ್ಲಿ ಸ್ಪಂದಿಸುತ್ತಾರೆ. ಪತ್ರಿಕೋದ್ಯಮಿ ರ್‍ಯಾಂಬರ್ಟ್ ಕೂಡ ಇವರಲ್ಲಿ ಒಬ್ಬ. ಪ್ಲೇಗ್ ಘೋಷಿತವಾದ ನಂತರ ಒರನ್ ನಗರದ ಬಾಗಿಲುಗಳನ್ನು ಮುಚ್ಚಿದಾಗ ಪ್ಯಾರಿಸ್ಸಿನಲ್ಲಿರುವ ತನ್ನ ಪ್ರಿಯತಮೆಯನ್ನು ಸೇರಲು ಸಾಧ್ಯವಾಗದ ಸ್ಥಿತಿಯಲ್ಲಿ ಈತ ರಿಯೂ ಹತ್ತಿರ ಬಂದು ತನ್ನನ್ನು ಬಿಡುಗಡೆಗೊಳಿಸಲು ಪರಿಪರಿಯಾಗಿ ಬೇಡಿಕೊಳ್ಳುತ್ತಾನೆ. ಅದು ಸಾಧ್ಯವಾಗದೆ ಇದ್ದಾಗ, ತಾನೂ ಪರಿವರ್ತನೆಗೊಂಡು ಪ್ಲೇಗ್ ವಿರುದ್ಧ ಹೋರಾಡಲು ನಿಶ್ಚಯಿಸುತ್ತಾನೆ. ಪ್ಲೇಗ್ ತದನಂತರದ ಆತನ ಪ್ರಿಯತಮೆ ಒರನ್‌ಗೆ ಬಂದು ಆತನನ್ನು ಕೂಡಿಕೊಳ್ಳುತ್ತಾಳೆ.

ಆದರೆ ವೈದ್ಯ ರಿಯೂಗೆ ಪ್ಲೇಗ್ ತೊಲಗಿದ ಕ್ಷಣಗಳ ಸಂತೋಷ ಸಮಾರಂಭಗಳು ಅರ್ಥಹೀನವಾಗಿ ಕಾಣುತ್ತವೆ. ಪ್ಲೇಗು ಎಂದೂ ಸಂಪೂರ್ಣವಾಗಿ ತೊಲಗಲು ಸಾಧ್ಯವಿಲ್ಲ. ಅದು ಮನುಷ್ಯನ ವೈಯಕ್ತಿಕ ಹಾಗೂ ಸಾರ್ವತ್ರಿಕ ಲೋಕಗಳಲ್ಲಿ ಸದಾ ಹಂದುಗಿಕೊಂಡಿರುತ್ತದೆ. ಮ್ಯಾಕಬೆತ್ ತಲೆಯ ಮೇಲಿನ ಕತ್ತಿಯಂತರ ಪ್ಲೇಗೂ ಮನುಷ್ಯನ ನಾಗರೀಕತೆಯ ಮೇಲೆ ನೇತಾಡುತ್ತಿರುತ್ತದೆ. ಹೀಗಾಗಿ ಪ್ಲೇಗ್ ವಿರುದ್ಧದ ಹೋರಾಟಕ್ಕೆ ಕೊನೆ ಮೊದಲೆಂಬುದಿಲ್ಲ. ಪ್ಲೇಗಿನ ನಿರಂತರತೆಯ ಹಾಗೆ ಅದರ ವಿರುದ್ಧ ಹೋರಾಟ ಕೂಡ ನಿರಂತರವಾಗಿ ಪರಿಣಮಿಸುತ್ತಿರಬೇಕು. ಡಾ|| ರಿಯೂನ ಈ ದರ್ಶನದೊಂದಿಗೆ ಕಾದಂಬರಿ ಮುಕ್ತಾಯಗೊಳ್ಳುತ್ತದೆ.

ಪ್ಲೇಗ್ ಅವಸ್ಥೆಯು ಭೌತಿಕ ಹಾಗೂ ಪಾರಭೌತಿಕ ಆಯಾಮಗಳೆರಡನ್ನೂ ಬೆರಸಿ,

ಪತ್ರಿಕೋದ್ಯಮದ ಸೊಗಡಿನಲ್ಲಿ ಚರಿತ್ರೆಯ ತರ ಘಟನೆಗಳನ್ನು ದಾಖಲು ಮಾಡುವ ಶೈಲಿಯಲ್ಲಿ ಒರನ್ ನಾಗರೀಕತೆಯ ಅಧಃಪತನವನ್ನು ಅದರ ಎಲ್ಲ ಮೂರ್ತ ಹಾಗೂ ಅಮೂರ್ತ ಸ್ವರೂಪಗಳಲ್ಲಿ ಸಾಂಕೇತಿಸಿ ಪ್ಲೇಗಿನ ನಿರಂತರತೆಯನ್ನು ಹೇಳುವ ತಾತ್ವಿಕ ದೃಷ್ಟಿಕೋನವನ್ನು ಕಮು ಹೊಂದಿರುವುದು ಈ ಕಾದಂಬರಿಯ ಮಹತ್ವದ ಅಂಶ ವಾಗಿದೆ. ಧಾರ್ಮಿಕ ವಿಶ್ಲೇಷಣೆ ಮತ್ತು ವೈಚಾರಿಕ ವಿವರಣೆಯ ಡಯಲಿಕ್ಟಿಕ್ ಮುಖಾಂತರ ಪ್ಲೇಗ್‌ನಂತಹ ನಿಶ್ಚಲಸ್ಥಿತಿಯನ್ನು ವ್ಯಾಮೋಹಕವಾಗಿ ಗುರುತಿಸದೆ ಅದರ ನೈಜತೆ ಹಾಗೂ ವಸ್ತುಸ್ಥಿತಿಗಳನ್ನು ಮೀರುವ, ಹಾಗೆ ಮೀರುವುದರಿಂದ ಅದರ ಸಾಂಕೇತಿಕತೆಯನ್ನು ಹೆಚ್ಚಿಸುವ ತಾಂತ್ರಿಕ ದೃಷ್ಟಿಯನ್ನು ಕೂಡ ಕಮು ಹೊಂದಿರುವುದು ಒಟ್ಟಾರೆ ಈ ಕಾದಂಬರಿಯನ್ನು ಒಂದು ಶ್ರೇಷ್ಠ ಕಲಾಕೃತಿಯನ್ನಾಗಿಸುವುದರಲ್ಲಿ ಯಶಸ್ವಿಯಾಗಿದೆ. ಕಮು ಈ ಕಾದಂಬರಿಯನ್ನು 'A Chronicle' ಅಂತ ಕರೆಯು ವುದು ಕೂಡ ಪ್ಲೇಗಿನ ದ್ವಂದ್ವಾತ್ಮಕ ಅವಸ್ಥೆಯನ್ನು ಹೆಚ್ಚು ಹೆಚ್ಚು ನಿಖರಗೊಳಿಸಲು, ಕಮು ಇಲ್ಲಿ ಒಬ್ಬ ಕತೆಗಾರನಾಗಿ ಕಾಣುವುದಿಲ್ಲ; ಆದರೆ ಒಬ್ಬ ತತ್ವಜ್ಞಾನಿಯಾಗಿ, ಚರಿತ್ರಕಾರಕನಾಗಿ, ಇನ್ನೂ ಕೆಲವೊಮ್ಮೆ ವೇದಾಂತಿಯಾಗಿ ಕಾಣುತ್ತಾನೆ. ಡೇನಿಯಲ್ ಡಿಫೋ ಬರೆದ "A Journal of the Plague year"ನ್ನು ಓದಿದರೆ ಚರಿತ್ರೆ ಹಾಗೂ ಕಾದಂಬರಿಗಳ ನಡುವಿನ ಅಂತರ ಗೊತ್ತಾಗುತ್ತದೆ. ಕಮುವಿನ ಒರನ್ ನಗರ ರಿಯಲಿಸ್ಟಿಕ್ ಆಗಿದ್ದರೆ, ಪ್ಲೇಗ್ ಕೇವಲ ಪರಿಭಾವಿಸಿದ್ದು. ಒರನ್ ನಗರ ಯಾವುದೇ ನಗರವಾಗಿರಬಹುದು; ಆದರೆ ಪ್ಲೇಗ್ ಮಾತ್ರ ಕೇವಲ ಪರಿಭಾವನೆ ಅಷ್ಟೆ. ●

ಕಾಣೆಯಾದ ಮೇಷ್ಟ್ರಿಗೆ

1

ನೆನಪಿದೆಯ ಮೇಷ್ಟ್ರೆ :

ಅತ್ತ ಕವಿತೆಗಳು ಮೈದುಂಬಿ
ನಿಮ್ಮ ಬೆರಳಾಡುತ್ತಿದ್ದವು ಗಾಳಿಯಲ್ಲಿ
ಕಣ್ಣ ನೋಟವು ಕರಗಿ ಶೂನ್ಯದಲ್ಲಿ.
ಜೋಡಿಕಣ್ಣುಗಳಲ್ಲಿ ಮಡುಗಟ್ಟಿದವಮಾನ
ಜೊತೆಜೊತೆಗೆ ಪ್ರೀತಿ ಕೂಡ ತುಳುಕಿದ್ದವು.

ಕಮ್ಮನೆಯ ಮಣ್ಣಿಂದ ಮಾತು ಮೈದಳೆದದ್ದು
ಮಾತಲ್ಲಿ ಕಿಡಿಯೂ
ಕಿಡಿಯಲ್ಲಿ ಬೆಳಕೂ
ಬೆಳಕಲ್ಲಿ ಬಣ್ಣಗಳೂ

ನಟರಾಜ್ ಹುಳಿಯಾರ್, ಇಂಗ್ಲಿಷ್ ಅಧ್ಯಾಪಕ, ಎನ್.ಎಂ.ಕೆ.ಆರ್.ವಿ. ಮಹಿಳಾ ಜೂನಿಯರ್ ಕಾಲೇಜು, 3ನೇ ಬ್ಲಾಕ್, ಜಯನಗರ, ಬೆಂಗಳೂರು-560011

ಹಾರುತ್ತ ತೂರುತ್ತ ನಮ್ಮೆದೆಗೆ ಜಾರುತ್ತಿದ್ದವು
ಆಗ ಸಿಟ್ಟು ನಿಮಗೂ ನೆತ್ತಿಗೇರುತ್ತಿತ್ತು
ಕೊರಳು ಬಿಗಿದರೆ ಕಣ್ಣು ಹನಿಗೂಡುತ್ತಿತ್ತು.
ನಿಮ್ಮ ಮಾಂತ್ರಿಕ ದನಿಗೆ
ತಲೆದೂಗಿ ನಿಂದೋರು ನೆಲವೀರಿ ಜಿಗಿದೋರು
ನಿಮ್ಮ ಕಣ್ಣೆದುರೆ ಬೆಳೆದೋರು :
ಈ ಬೇಡರಟ್ಟಿಯು ಹೈದು ಅತ್ತ ತಾಂಡ್ಯದ ಬಾಲೆ
ಕುರುಬರಟ್ಟಿಯು ಧೀರ ಸೆಟ್ಟರಂಗಡಿ ಹುಡುಗಿ
— ತುಟಿ ಹೊಲೆದು ಕುಂತೋರು ಬಾಯ್‌ಬಿಚ್ಚಿ ನಿಂತರು
ನಾಲಗೆಯ ತುದಿಯಲಿ ನೀವು ಬಿತ್ತಿದ ಹಾಡು
ಒಂದೊಂದು ಹಿಡಿಯಲ್ಲು ಎಷ್ಟೊಂದು ಕವಿತೆಗಳು !

2

ಮೊನ್ನೆ ನೋಡಿದೆ ಸಾರ್, ಸ್ಟೇಜಿನ ಮೇಲೆ :
ಕಣ್ಣಲ್ಲಿ ಅಪಮಾನ ಎಂದೋ ಕಣ್‌ಮರೆಯಾಗಿ
ಅಲ್ಲಿ ಸಂತೃಪ್ತಿ ಖಳೆ ತುಂಬಿ ತುಳುಕಿದಂತೆ
ನೀವು ಸಣ್ಣಗೆ ತೆಗೆದ ದನಿ ಕಿರುಚಿದಂತೆ
ಲೆಕ್ಕ ಹಾಕಿದ ಮಾತೋ ಪ್ರವಾದಿಯಂತೆ
ಹೊಂಗಷ್ಟೆ ಕಣ್‌ಚಾಚಿ ಒಳಗಿಳಿಯದಾದಂತೆ
ಎವೆಬಿಗಿದ ಬಕಧ್ಯಾನ ಇನ್ನೆಂದೂ ದಕ್ಕದಂತೆ....
ಯಾಕೆ, ಯಾಕೆ ಹೀಗಾಯಿತು ಸಾರ್.

3

ಇಂತು ಈ ಪರಿಯನ್ನೆಲ್ಲ
ಕುಂತ ನಿಮ್ಮೆದುರಾಗಿ ಬಿಚ್ಚಬೇಕು
ಬಿಚ್ಚಿ ಚುಚ್ಚಬೇಕು ಚುಚ್ಚಿ ರೇಗಿಸಬೇಕು
ಮೋಡಗಳನಾಡಿಂದ ಸೆಳೆಯಬೇಕು ಮಣ್ಣಿಗೆಳೆಯಬೇಕು
— ಎಂಬಂಥ ಬಯಕೆಯಲಿ
ಓಡೋಡಿ ಬಂದೋನು
ಬಾಗಿಲಲಿ ನಿಂದೋನು
ಕದವ ನೂಕಿದೆ ಮೇಷ್ಟ್ರೆ :
ಒಳಗೆ ನೀವಿರಲಿಲ್ಲ.

— ನಟರಾಜ್ ಹುಳಿಯಾರ್

ಬೆಂಗಳೂರಿನಲ್ಲಿ ಪೀಟರ್ ಬ್ರೂಕ್ 'ಮಹಾಭಾರತ'

—ಕೆ. ಮರುಳ ಸಿದ್ದಪ್ಪ

ಮಹಾಭಾರತವನ್ನು ಆಧರಿಸಿದ ರಂಗ ನಾಟಕವೊಂದನ್ನು ಪೀಟರ್ ಬ್ರೂಕ್ ಪಾಶ್ಚಾತ್ಯ ಜಗತ್ತಿನಲ್ಲಿ ಜನಪ್ರಿಯಗೊಳಿಸಿ ಮೆಚ್ಚುಗೆ ಮತ್ತು ಪ್ರಶಂಸೆಗೆ ಪಾತ್ರನಾಗಿರುವುದನ್ನು ಕೆಲವು ವರ್ಷಗಳಿಂದ ಕೇಳಿದ್ದವರಿಗೆ ಬೆಂಗಳೂರಿಗೆ ಬರುತ್ತಿರುವ ಅವನ ಚಲನ ಚಿತ್ರದ ಬಗೆಗೆ ಕುತೂಹಲವಿತ್ತು. ಆದರೆ ಅದ್ಭುತವಾದುದನ್ನು ಯಾರೂ ನಿರೀಕ್ಷಿಸಿರಲಿಲ್ಲ. ಫ್ರಾನ್ಸ್-ಇಂಡಿಯಾ ಸಾಂಸ್ಕೃತಿಕ ಉತ್ಸವದ ಅಂಗವಾಗಿ ಇಲ್ಲಿಗೆ 'ಮಹಾಭಾರತ' ವನ್ನೇ ಕಳಿಸಿ ಕೊಡುತ್ತಿರುವುದರ ಬಗೆಗೆ ಕೆಲವರಿಗೆ ಅಸಮಾಧಾನವೂ ಇತ್ತು. ಷೇಕ್ಸ್‌ಪಿಯರನ ನಾಟಕಗಳನ್ನು, ಗ್ರೀಕ್, ಫ್ರೆಂಚ್, ರಷ್ಯನ್ ನಾಟಕಗಳನ್ನು ಭಾರತದಲ್ಲಿ ಅತ್ಯಂತ ಯಶಸ್ವಿಯಾಗಿ ಪ್ರಯೋಗಿಸಿದ್ದರೂ ಅವುಗಳನ್ನು ಯಾರೂ ಯುರೋಪಿಯನ್ ಜಗತ್ತಿಗೆ ಆಹ್ವಾನಿಸಿರಲಿಲ್ಲವಾದರೂ ಪೀಟರ್ ಬ್ರೂಕ್‌ನ 'ಮಹಾಭಾರತ'ವನ್ನು ಇಲ್ಲಿಗೆ ಕರೆಸಿಕೊಂಡಿದ್ದರ ಔಚಿತ್ಯವನ್ನು ಕೆಲವರು ಪ್ರಶ್ನಿಸಿದರು. ಅತಿಥಿ ರಾಷ್ಟ್ರವೊಂದರ ಉಡುಗೊರೆಯನ್ನು ಹೀಗೆ ಚರ್ಚಾಸ್ಪದಗೊಳಿಸುವುದು ನ್ಯಾಯವಲ್ಲವೆಂದು ಕೆಲವರು ವಾದಿಸಿದರು. ಆದರೆ ಪೀಟರ್ ಬ್ರೂಕ್‌ನ 'ಮಹಾಭಾರತ' ಎಲ್ಲರ ಸಂದೇಹ ಮತ್ತು ಆತಂಕಗಳಿಗೆ ಸಮರ್ಥವಾಗಿ ಉತ್ತರ ನೀಡಿದೆ.

ಮಹಾಭಾರತದಂತೆ ಈ ದೇಶದ ಸಂಸ್ಕೃತಿಯನ್ನು ಗಾಢವಾಗಿ ಪ್ರಭಾವಿಸಿದ ಮತ್ತೊಂದು ಕೃತಿಯಿಲ್ಲವೆಂದರೆ ಕ್ಲೀಷೆಯಾಗುತ್ತದೆ. ಸಾವಿರಾರು ವರ್ಷಗಳ ನಮ್ಮ ಸಾಹಿತ್ಯ, ರಂಗಭೂಮಿ ಮತ್ತು ಇತ್ತೀಚಿನ ಸಿನೆಮಾಗಳಲ್ಲಿ ಮಹಾಭಾರತದ ವಸ್ತು ಸಾವಿರಾರು ರೂಪ ಧರಿಸಿ ಪುನರ್ ಸೃಷ್ಟಿಗೊಂಡಿದೆ. ಪಂಪ, ರನ್ನ, ಕುಮಾರವ್ಯಾಸ ಭಾಸ, ಭೈರಪ್ಪ ಮತ್ತು ಇರಾವತಿಕರ್ವೆಯವರಂತಹ ನೂರಾರು ಶ್ರೇಷ್ಠ ಸಾಹಿತ್ಯ ಕೃತಿಗಳೇ ಅಲ್ಲದೆ ನಮ್ಮ ಕಂಪನಿ ನಾಟಕಗಳು ಬಯಲಾಟಗಳು, ಚಲನ ಚಿತ್ರಗಳು ಇತ್ತೀಚೆಗೆ ದೂರದರ್ಶನದಲ್ಲಿ ಪ್ರಸಾರವಾಗುತ್ತಿರುವ 'ಮಹಾಭಾರತ'ವನ್ನು ನೋಡಿದ ನಮಗೆ ಪೀಟರ್ ಬ್ರೂಕ್ ಇವೆಲ್ಲವುಗಳಿಂದ ಪ್ರತ್ಯೇಕವಾಗಿ ನೆನಪಿನಲ್ಲಿ ಉಳಿಯುತ್ತಾನೆ.

ಮಹಾಭಾರತದ ಲಕ್ಷ ಶ್ಲೋಕದ ವಿಸ್ತಾರವುಳ್ಳ ವಸ್ತುವನ್ನು ಐದೂವರೆ ತಾಸಿಗೆ ಸಂಗ್ರಹಿಸುವಲ್ಲಿ ಪೀಟರ್ ಬ್ರೂಕ್ ಮತ್ತು ಅವನ ಗೆಳೆಯ ಜೀನ್ ಕ್ಲಾಡೆ ಪಡೆದಿರುವ ಯಶಸ್ಸು ಮೊತ್ತ ಮೊದಲು ಗೋಚರಿಸುವ ಅಂಶ. ಹೀಗೆ ಸಂಗ್ರಹಿಸುವಲ್ಲಿ ಅನೇಕ

ಡಾ॥ ಕೆ. ಮರುಳಸಿದ್ದಪ್ಪ, ಕನ್ನಡ ವಿಭಾಗ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು-56

ಪಾತ್ರಗಳನ್ನು ಆಖ್ಯಾನಗಳನ್ನು ಉಪಕಥೆಗಳನ್ನು ಅವರು ಬಿಟ್ಟುಬಿಟ್ಟಿದ್ದಾರೆ. ಪರಿಣಾಮದಲ್ಲಿ ಪಾಶ್ಚಾತ್ಯ ಜಗತ್ತಿನ ಪ್ರತಿಭಾವಂತ ಮನಸ್ಸುಗಳೆರಡು 'ಮಹಾಭಾರತ'ಕ್ಕೆ ಪ್ರತಿಕ್ರಿಯಿಸಿದಾಗ ದೊರೆಯಬಹುದಾದ ಅತ್ಯುತ್ತಮ ಫಲವಾಗಿ ಅವರ ಚಲನಚಿತ್ರ ರೂಪು ಹೊಂದಿದೆಯೆನ್ನಬಹುದು.

'ಮಹಾಭಾರತ'ವನ್ನು ಇಂಡಿಯಾದವರಿಗಾಗಿ ತಾನು ತಯಾರಿಸಲಿಲ್ಲವೆಂಬುದನ್ನು ಪೀಟರ್ ಬ್ರೂಕ್ ತನ್ನ ಚರ್ಚೆಯಲ್ಲಿ ವಿಶೇಷವಾಗಿ ಪ್ರಸ್ತಾಪಿಸಿದ. ಯುದ್ಧದ ಭೀಕರತೆಯನ್ನು, ದುಷ್ಟತನದ ನಿಸ್ಸೀಮತೆಯನ್ನು, ವಿನಾಶದ ಅನಿವಾರ್ಯತೆಯನ್ನು ಮನಗಾಣಿಸುವುದೇ 'ಪೀಟರ್ ಬ್ರೂಕ್ ಮಹಾಭಾರತ'ದ ಮುಖ್ಯ ಗುರಿ. ಮಾನವ ಜನಾಂಗದ ದುರಂತವನ್ನು ಈ ಕಥೆಯ ಮೂಲಕ ಆತ ನಿರೂಪಿಸುವುದಕ್ಕೆ ಪ್ರೇರಣೆ ನೀಡಿದ್ದು ಸಮಕಾಲೀನ ಜಗತ್ತಿನ ಯುದ್ಧ ದಾಹವೆಂದು ಆತ ಹೇಳಿಕೊಂಡಿದ್ದಾನೆ. ವಿಯೆಟ್ನಾಂ ಸಮರದ ಭಯಾನಕ ಸಂಗತಿಗಳ ಹಿನ್ನೆಲೆಯಲ್ಲಿ ಕೃತಿಯೊಂದನ್ನು ರಚಿಸಲು ಪೀಟರ್ ಬ್ರೂಕ್ ಕೆಲಸ ಮಾಡುತ್ತಿದ್ದ. ಯುದ್ಧದ ಅರ್ಥಹೀನತೆಯನ್ನು ಮನಗಂಡು ಅದರಲ್ಲಿ ಭಾಗವಹಿಸಲು ನಿರಾಕರಿಸಿದ ಯೋಧನೊಬ್ಬನ ಕಥೆ ಅವನನ್ನು ಕಾಡತೊಡಗಿತು. ಈ ವಸ್ತುವನ್ನು ವಿಯೆಟ್ನಾಂ ಹಿನ್ನೆಲೆಯಲ್ಲಿ ನಾಟಕವಾಗಿಸಲು ಆತನಿಗೆ ಸಾಧ್ಯವಾಗಲಿಲ್ಲವಾದರೂ ಯುದ್ಧದ ಮುಂಚೂಣಿಯಲ್ಲಿ ನಿಂತ ಯೋಧನೊಬ್ಬ, ಅದರಲ್ಲಿ ಭಾಗವಹಿಸಲು ನಿರಾಕರಿಸಿ, ಅದರ ಹಿಂದಿರುವ ವಿವೇಕವನ್ನು, ತರ್ಕವನ್ನು ಶೋಧಿಸತೊಡಗುವ ನಾಟಕೀಯ ಚಿತ್ರವೊಂದು ಮಾತ್ರ ಅವನ ಮನಸ್ಸಿನಲ್ಲಿ ಆಚ್ಛೊತ್ತಿದಂತೆ ಉಳಿದು ಬಿಟ್ಟಿತು. ಮುಂದೆ ಇಂಗ್ಲೆಂಡಿಗೆ ಬಂದಿದ್ದ ಕಥಕ್ಕಳಿ ತಂಡವೊಂದು ಅಭಿನಯಿಸಿದ 'ದುಶ್ಯಾಸನ ವಧೆ'ಯನ್ನು ನೋಡಿದ ಪೀಟರ್ ಬ್ರೂಕ್, ಪ್ರಭಾವಗೊಂಡಿದ್ದು ಕಥಕ್ಕಳಿಯ ಪರಿಣಾಮಕಾರಿ ನೃತ್ಯಾಭಿನಯಗಳಿಂದ. ಕೆಲವು ದಿನಗಳ ಬಳಿಕ ಅವನನ್ನು ಸಂಧಿಸಿದ ಫ್ರೆಂಚ್ ನಾಟಕಕಾರ ಜೀನ್ ಕ್ಲಾಡೆಯನ್ನು ಮಹಾಭಾರತದ ಬಗೆಗೆ ಪ್ರಾಸಂಗಿಕವಾಗಿ ಕೇಳಿದ. ಯುದ್ಧ ಮುಖದಲ್ಲಿ ನಿಂತು ಅದರಲ್ಲಿ ಭಾಗವಹಿಸಲು ನಿರಾಕರಿಸಿದ ಅರ್ಜುನನ ಬಗೆಗೆ ಅವನ ಆಸಕ್ತಿ ಬೆಳೆಯಿತು. ಅವರಿಬ್ಬರೂ ಸೇರಿ ಫಿಲಿಪ್ ಲವಾಸ್ಟೀನ್ ಎಂಬ ಯುರೋಪಿಯನ್ ಸಂಸ್ಕೃತ ವಿದ್ವಾಂಸನೊಬ್ಬನಿಂದ ಸಂಪೂರ್ಣ ಮಹಾಭಾರತದ ಕಥೆಯನ್ನು ಕೇಳಿದರು. ಸುಮಾರು ಮೂರು ತಿಂಗಳ ಕಾಲ ಸತತವಾಗಿ ಪೀಟರ್ ಬ್ರೂಕ್ ಮತ್ತು ಜೀನ್ ಕ್ಲಾಡೆ ಯುರೋಪಿಯನ್ ಸಂಸ್ಕೃತ ವಿದ್ವಾಂಸನ ಸಮ್ಮುಖದಲ್ಲಿ ಕುಳಿತು 'ವಾಕ್ ಪರಂಪರೆ'ಯ ಮೂಲಕವೆಂಬಂತೆ ಮಹಾಭಾರತದ ಕಥೆಯನ್ನು ಆಲಿಸಿದರು. ಬಳಿಕ ಇಬ್ಬರೂ ಸೇರಿ ಮಹಾಭಾರತದ ಬಗೆಗೆ ಸಂಶೋಧನೆಯನ್ನು ಆರಂಭಿಸಿದರು. ಮಹಾಭಾರತದ ಸಮಗ್ರ ಇಂಗ್ಲಿಷ್ ಅನುವಾದವನ್ನು ಓದಿದರು. ಮಹಾಭಾರತದ ಮೂಲವನ್ನು ಹುಡುಕುತ್ತ ಭಾರತಕ್ಕೆ

ಂದು ದೇಶವನ್ನೆಲ್ಲಾ ಸುತ್ತಿದರು. ಈ ದೇಶವಲ್ಲಿ ಪ್ರಚಾರದಲ್ಲಿದ್ದ ಮಹಾಭಾರತದ ಅನೇಕಾನೇಕ ರೂಪ ಪ್ರಭೇದಗಳನ್ನು ಪರಿಚಯ ಮಾಡಿಕೊಂಡರು. ಪ್ರೌಢ, ಜನಪ್ರಿಯ ಮತ್ತು ಜಾನಪದ ಪರಂಪರೆ-ಹೀಗೆ ಮಹಾಭಾರತದ ಎಲ್ಲ ನೆಲೆಗಳಲ್ಲಿಯೂ ತಡಕಾಡಿದರು. ಸಮಕಾಲೀನ ಇಂಡಿಯಾ ದೇಶವು 'ಮಹಾಭಾರತ'ಕ್ಕೆ ಹೇಗೆ ಪ್ರತಿಸ್ಪಂದಿಸುತ್ತಿದೆ ಎಂಬುದನ್ನು ಪರೀಕ್ಷಿಸಿದರು.

ಮಹಾಭಾರತದ ಸಂಶೋಧನೆಗಾಗಿ ಭಾರತಕ್ಕೆ ನೀಡಿದ್ದ ಅನೇಕ ಭೇಟಿಗಳ ಬಳಿಕ ಒಮ್ಮೆ ಹಿಂತಿರುಗುವಾಗ ಒಬ್ಬ ಕಥಕ್ಕಳಿಯ ನಟನನ್ನು ತಮ್ಮೊಂದಿಗೆ ಕರೆದೊಯ್ದರು. ಮೂರು ತಿಂಗಳ ಕಾಲ ಈ ಕಲಾವಿದನು ಪೀಟರ್ ಬ್ರೂಕ್ ಸ್ಥಾಪಿಸಿರುವ 'ಅಂತರ ರಾಷ್ಟ್ರೀಯ ರಂಗಭೂಮಿ ಸಂಶೋಧನಾ ಕೇಂದ್ರ'ದಲ್ಲಿ-ನೆಲೆಸಿ ಅಲ್ಲಿನ ಕಲಾವಿದರೊಂದಿಗೆ ಕೆಲಸ ಮಾಡಿದ. ಇದೆಲ್ಲದರ ಪರಿಣಾಮವಾಗಿ ಜೀನ್ ಕ್ಲಾಡೆ ಮಹಾಭಾರತದ ಕಥೆಯನ್ನಾಧರಿಸಿ ನಾಟಕವೊಂದನ್ನು ಬರೆದ. ಪೀಟರ್ ಬ್ರೂಕ್ ಜೊತೆಗೂಡಿ ಒಂಬತ್ತೂವರೆ ಗಂಟೆಗಳ ಒಂದು ರಂಗನಾಟಕವನ್ನು ಅವರು ಸಿದ್ಧಪಡಿಸಿ ಪ್ರಯೋಗಿಸಿದರು. ಇವರ ಯೋಜನೆಯ ಹಿಂದೆ ಫ್ರೆಂಚ್ ಸರ್ಕಾರವೂ ಆರ್ಥಿಕ ಒತ್ತಾಸೆಯನ್ನು ನೀಡಿ ಪ್ರೋತ್ಸಾಹಿಸಿತು. ಮುಂದೆ ಒಂದು ದಿನ ಭಾರತದಲ್ಲಿ ಫ್ರೆಂಚ್ ಉತ್ಸವವೊಂದು ನಡೆಯಲಿದೆ ಎನ್ನುವುದರ ಕಲ್ಪನೆಯೇ ಇಲ್ಲದಿದ್ದಾಗ ಸುಮಾರು ಎಂಟು ವರ್ಷಗಳ ಕಾಲ ಸತತವಾಗಿ ಪರಿಶ್ರಮ ವಹಿಸಿದ್ದರ ಫಲವಾಗಿ ಈ ಬಗೆಯ ಅದ್ಭುತ ಸಾಧನೆ ಅವರಿಗೆ ಸಾಧ್ಯವಾಯಿತು. ಸುಮಾರು ಅರವತ್ತು ಲಕ್ಷ ಡಾಲರ್‌ಗಳ ವೆಚ್ಚಮಾಡಿ ಈ ನಾಟಕದ ಚಲನಚಿತ್ರ ರೂಪವನ್ನು ಸಿದ್ಧಪಡಿಸಲಾಯಿತು. ಅದರೊಂದಿಗೆ ಆರು ಗಂಟೆಗಳ ಅವಧಿಯ ಒಂದು ಕಿರು ಟಿ.ವಿ. ಧಾರವಾಹಿಯನ್ನು ಸಿದ್ಧಪಡಿಸಿದರು.

'ಮಹಾಭಾರತ'ದ ಪರಿಚಯವನ್ನು ಪೀಟರ್ ಬ್ರೂಕ್ ಕರತಲಾಮಲಕಗೊಳಿಸಿಕೊಂಡಿದ್ದರೂ ಅದರ ಪಾಶ್ಚಾತ್ಯ ಪ್ರತಿರೂಪವನ್ನು ಆತ ಸಿದ್ಧಪಡಿಸಲಿಲ್ಲ. ಪ್ರಜ್ಞಾಪೂರ್ವಕವಾಗಿಯೇ ಅದನ್ನು ಅವನು ಅಂತರ ರಾಷ್ಟ್ರೀಯಗೊಳಿಸಿದ್ದಾನೆ. ಭಾರತೀಯ ಪ್ರೇಕ್ಷಕರಿಗೆ, ಅದರಲ್ಲೂ ಸಂಪ್ರದಾಯವಾದಿಗಳಿಗೆ ಇವರಿಂದ ಇರಿಸು ಮುರಿಸಾಯಿತು. ಮುಂಬೈನ ಮತಾಂಧ ಹಿಂದುಗಳು ಪ್ರತಿಭಟಿಸಿದರು. ನೀಗ್ರೋ ನಟರು ಭೀಷ್ಮ ಮತ್ತು ಭೀಮನ ಪಾತ್ರ ವಹಿಸಿದ್ದನ್ನು ಪ್ರತಿಭಟಿಸಿ ಪ್ರದರ್ಶನ ನಡೆಸಿದರು. ಇದೊಂದು ವಿಪರ್ಯಾಸ. ಬೆಂಗಳೂರಿನ ಕೆಲವು ಪ್ರಗತಿಪರ ಬುದ್ಧಿಜೀವಿಗಳಿಗೆ ಪೀಟರ್ ಬ್ರೂಕ್ ಮಹಾಭಾರತವು ಇಲ್ಲಿಗೆ ಬಂದಿದ್ದು ವಸಾಹತುಶಾಹಿಯ ಮುಂದುವರಿಕೆಯಾಗಿ ಕಂಡರೆ, ಮುಂಬೈನ ಮತಾಂಧರಿಗೆ ನೀಗ್ರೋ ನಟರೂ ಅಪಮಾನವಾಗಿ ತೋರಿದ್ದಾರೆ.

ದಕ್ಷಿಣ ಆಫ್ರಿಕಾ, ಜಪಾನ್, ಯುರೋಪ್, ಬಾಲಿ, ಭಾರತ ಮುಂತಾಗಿ ವಿಭಿನ್ನ ದೇಶ ಜನಾಂಗಗಳಿಗೆ ಸೇರಿದ ನಟರು, ಸಂಗೀತಗಾರರು, ಕಲಾವಿದರು 'ಮಹಾಭಾರತ'

ಶೂದ್ರ

ವಲ್ಲಿ ಪಾಲುಗೊಂಡಿದ್ದಾರೆ. ಈ ಪ್ರಕ್ರಿಯೆ ಕೇವಲ ಪಾತ್ರ ವಿತರಣೆಗೆ ಮಾತ್ರ ನೇಮಿಗೊಂಡಿಲ್ಲ. ಉಡುಪುಗಳ ವಿನ್ಯಾಸ, ಸಂಗೀತ, ಅಭಿನಯ ಮತ್ತು ಸ್ವಲ್ಪಮಟ್ಟಿಗೆ ಕಥಾ ನಿರೂಪಣೆಗೂ ಅದು ವ್ಯಾಪಿಸಿದೆ. ಘಟೋತ್ಕಜನ ಸಾವಿನಿಂದಾಗಿ ಪುತ್ರ ಶೋಕಕ್ಕೆ ಗುರಿಯಾದ ಭೀಮನು ದುಃಖಾತಿರೇಕದಿಂದ ಪ್ರಲಾಪಿಸುವಾಗ ದಕ್ಷಿಣ ಆಫ್ರಿಕಾ ಭಾಷೆಯೊಂದರಲ್ಲಿ ಶೋಕ ಗೀತಾಲಾಪನೆಗೆ ತೊಡಗುತ್ತಾನೆ. ಅಶ್ವತ್ಥಾಮನ ಮರಣ ವಾರ್ತೆ ಕೇಳಿದ ದ್ರೋಣನು ಯೋಗಮಾರ್ಗದಲ್ಲಿ ಮೃತ್ಯುವನ್ನಪ್ಪುವ ಮುನ್ನ, ಒಂದು ಮಡಕೆಯ ತುಂಬಾ ಸಂಗ್ರಹಿಸಿದ್ದ ಮನುಷ್ಯ ರಕ್ತವನ್ನು ತಲೆಯ ಮೇಲೆ ಸುರಿದುಕೊಂಡು ಅಭಿಷೇಕ ಮಾಡಿ ಕೊಳ್ಳುತ್ತಾನೆ. ಈ ಬಗೆಯ ಹಲವು ಆದಿಮ ಆಚರಣೆಗಳನ್ನು ಕಥಾ ನಿರೂಪಣೆಯಲ್ಲಿ ಅಳವಡಿಸಿದ್ದಾರೆ.

ಮಹಾಭಾರತದ ಕಥೆಯಲ್ಲಿ ಪೀಟರ್ ಬ್ರೂಕ್‌ಗೆ ಕೇಂದ್ರ ಭಾಗವಾಗಿರುವುದು ಮಹಾಭಾರತದ ಯುದ್ಧ. ಕೌರವ–ಪಾಂಡವರ ಹೋರಾಟವೇ ಅವನಿಗೆ ಪ್ರಧಾನ. ಆದರೆ ನಮಗೆ ಮಹಾಭಾರತವೆಂಬುದು ಒಂದು ವಂಶಪರಂಪರೆಯ ಕಥೆ. ಯುದ್ಧವು ಈ ಕಥೆಯ ಶಿಖರದಂತಿದ್ದರೂ, ಅದೇ ಅಲ್ಲಿ ಕೇಂದ್ರವಾಗುವುದಿಲ್ಲ. ಪೀಟರ್ ಬ್ರೂಕ್, ಮಹಾಭಾರತದ ಕಥೆಯನ್ನು ಸ್ಥೂಲವಾಗಿ ಮೂರು ಭಾಗ ಮಾಡಿಕೊಂಡು ನಿರ್ವಹಿಸಿದ್ದಾನೆ. ಆದಿ ಪರ್ವದಿಂದ ಸಭಾ ಪರ್ವದವರೆಗೆ ಮೊದಲ ಭಾಗ, ಅರಣ್ಯದಿಂದ ವಿರಾಟ ಪರ್ವದವರೆಗೆ ಎರಡನೆಯ ಭಾಗ, ಯುದ್ಧದಿಂದ ಸ್ವರ್ಗಾರೋಹಣದ ವರೆಗೆ ಕೊನೆಯ ಭಾಗ. ಪೀಟರ್ ಬ್ರೂಕ್ ಮಹಾಭಾರತದ ಉಜ್ವಲ ಸನ್ನಿವೇಶಗಳೆಲ್ಲಾ ಕಾಣಿಸಿಕೊಳ್ಳುವುದು ಅರಣ್ಯದಿಂದ ಯುದ್ಧದವರೆಗಿನ ಭಾಗಗಳಲ್ಲಿ.

ಕಥಾ ನಿರೂಪಣೆಗೆ ಮತ್ತು ಕಥಾ ಸಂದೇಶಕ್ಕೆ ಪೀಟರ್‌ಬ್ರೂಕ್ ನೀಡಿರುವ ಮಹತ್ವವನ್ನು ಪಾತ್ರ ರಚನೆಗೆ ನೀಡಿಲ್ಲವೆನಿಸುತ್ತದೆ. ಮಹಾಭಾರತದ ನಾಡಿನವರಾದ ನಮಗೆ ಭೀಷ್ಮ ದ್ರೋಣರ ಪಾತ್ರಗಳು ದುರ್ಬಲ ಅಸಹಾಯಕ ಪಾತ್ರಗಳಂತೆ ಕಂಡು ಬರುತ್ತವೆ. ದುರ್ಯೋಧನನ ತೀವ್ರ ಛಲವಾಗಲೀ ಭೀಮನ ವೀರವಾಗಲೀ ಕೃಷ್ಣನ ಚಾಣಾಕ್ಷತೆಯಾಗಲೀ ನಾಟಕೀಯವಾಗಿ ಮಿಂಚಿಲ್ಲ. ದುಶ್ಶಾಸನನ ರಕ್ತದಿಂದ ತೊಯ್ದ ಮುಂಡಿಯನ್ನು ಅವನ ದಂತದ ಬಾಚಣಿಗೆಯಿಂದ ಬಾಚಿ, ಭೀಮನಿಂದ ಮುಡಿ ಕಟ್ಟಿಸಿಕೊಳ್ಳುವ ದ್ರೌಪದಿಯ ಚಿತ್ರಣವನ್ನು ಓದಿದ್ದ ನಮಗೆ ಪೀಟರ್ ಬ್ರೂಕ್ ದ್ರೌಪದಿ, ವ್ರತಾಚರಣೆಯಂತೆ ಸಾಂಕೇತಿಕವಾಗಿ ಮುಡಿ ಕಟ್ಟಿಸಿಕೊಳ್ಳುವುದು ಸಪ್ಪೆಯೆನಿಸಿ ಬಿಡುತ್ತದೆ. ಆದರೆ ಪೀಟರ್‌ಬ್ರೂಕ್ ಗುರಿ ಭಾರತೀಯರಲ್ಲವೆಂಬುದನ್ನು ನಾವು ಮರೆಯಬಾರದು. ಆದರೂ ಶ್ರೀ ಕೃಷ್ಣನ ವಿಶ್ವರೂಪ ದರ್ಶನವನ್ನು ಎರಡು ಬಾರಿಯೂ ಉಳಿಸಿಕೊಂಡಿರುವುದು, ದ್ರೌಪದಿಯ ಅಕ್ಷಯವಸ್ತ್ರ ಪ್ರಸಂಗದ ಅತಿಮಾನುಷ ನಿರೂ

ಪಣೆ, ಮತ್ತು ಧರ್ಮರಾಯನಿಗೆ ಸ್ವರ್ಗ ದರ್ಶನ ಮಾಡಿಸುವಲ್ಲಿ ಕಂಡು ಬರುವ ನೀತಿ ಪರವಶತೆ ಅತಿಯಾಯಿತೆಂದು ತೋರುತ್ತವೆ. ಹನುಮ-ಭೀಮರ ಸಮಾಗಮ, ಅರ್ಜುನನು ಇಂದ್ರಲೋಕಕ್ಕೆ ಹೋಗುವುದು ಇಂತಹ ವಿಚಾರಗಳನ್ನು ಸಂಗ್ರಹಿಸಿ ಮಾನುಷ ವಿವರಗಳನ್ನು ಇನ್ನೂ ಹೆಚ್ಚಾಗಿ ಬೆಳೆಸಬಹುದಿತ್ತು. ವಿದುರನಂತಹ ಮುಖ್ಯ ಪಾತ್ರವನ್ನು ಬಿಟ್ಟರೆ ತಪ್ಪೇನಿಲ್ಲವಾದರೂ ಅಂಬೆಯ ಪ್ರತೀಕಾರಕ್ಕೆ ಸಿಕ್ಕಿರುವ ಮಹತ್ವ ಅರ್ಥವಾಗುವುದಿಲ್ಲ. ಕಥಾನುಕ್ರಮಣಿಕೆಯಲ್ಲಿ ಮಾಡಿಕೊಂಡಿರುವ ಕೆಲವು ವ್ಯತ್ಯಾಸಗಳೂ ಅರ್ಥಪೂರ್ಣವೆನ್ನಿಸುವುದಿಲ್ಲ. ಹಿಡಿಂಬೆಯನ್ನು ಭೀಮ ಲಗ್ನವಾಗುವುದು, ಕರ್ಣನು ಪರಶುರಾಮನ ಶಿಷ್ಯನಾಗಿ ಅಸ್ತ್ರ ವಿದ್ಯೆ ಕಲಿಯುವ ಪ್ರಸಂಗಗಳು ಮೂಲ ಭಾರತಕ್ಕಿಂತ ಭಿನ್ನ ಕಥಾನುಕ್ರಮದಲ್ಲಿವೆ. ಇದೆಲ್ಲದರಿಂದ ಗೋಚರಿಸುವಂತೆ ಮೂಲ ಭಾರತವನ್ನು ಅವರು ಯಥಾನುಕ್ರಮವಾಗಿ ಅನುಸರಿಸಿಲ್ಲವೆಂಬುದು ಸ್ಪಷ್ಟವಾಗಿದೆ.

ಒಟ್ಟಾರೆಯಾಗಿ ಮಹಾಭಾರತವನ್ನು ಯೋಜಿಸುವಲ್ಲಿ ಅಥವಾ ನಾಟಕಕಾರ ನಿರ್ದೇಶಕರಲ್ಲಿ ಗೋಚರಿಸುವ ಸಂಪೂರ್ಣ ಹೊಂದಾಣಿಕೆಯನ್ನು ಪ್ರತ್ಯೇಕವಾಗಿಯೇ ಉಲ್ಲೇಖಿಸಬೇಕಾಗುತ್ತದೆ. ಇದು, ತಾವೆಲ್ಲ ಒಟ್ಟಾಗಿ ಸೇರಿ ನಿರ್ವಹಿಸಿದ ಒಂದು ದೊಡ್ಡ ಜವಾಬ್ದಾರಿ ಎಂಬುದಾಗಿ ಪೀಟರ್ ಬ್ರೂಕ್ ಹೇಳುತ್ತಾನೆ. ಲೇಖಕ-ನಿರ್ದೇಶಕರ ಆದರ್ಶ ಜೋಡಿಯಾಗಿ ಪೀಟರ್‌ಬ್ರೂಕ್-ಜೀನ್‌ಕ್ಲಾಡೆ ಕಂಡು ಬರುತ್ತಾರೆ.

ಅದ್ಭುತವಾದ ದೃಶ್ಯ ನಿರ್ಮಾಣಕ್ಕೆ ಪೀಟರ್‌ಬ್ರೂಕ್ ಪಾಶ್ಚಾತ್ಯ ರಂಗಭೂಮಿಯಲ್ಲಿ ಹೆಸರಾಗಿದ್ದಾನೆ. ಮಹಾಭಾರತದ ದೃಶ್ಯ ನಿರ್ಮಿತಿಯಲ್ಲಿ ಅದು ಸ್ಪಷ್ಟವಾಗಿ ಎದ್ದು ಕಾಣುತ್ತಿತ್ತು. ವಾಸ್ತವ ಶೈಲಿಗೆ ಹತ್ತಿರವಾಗಿ ಸರಳವಾದ ಸಾಧನೋಪಾಯಗಳ ಮೂಲಕವೇ ಅದನ್ನು ಸಾಧಿಸಿರುವುದು ಅಲ್ಲಿನ ವಿಶೇಷವಾಗಿದೆ. ಈ ದಿಸೆಯಲ್ಲಿ ಆರ್ಥಿಕ ಮುಗ್ಗಟ್ಟು ಅವನಿಗೆ ಒಡ್ಡಿದ ಪ್ರತಿಬಂಧಕಗಳೂ ಇದ್ದವು. ಅರ್ಜುನನಿಗೆ ಎರಡು ಕುದುರೆ ಕಟ್ಟಿದ ರಥ ಒದಗಿಸಿ, ಭೀಷ್ಮನನ್ನು ನಾಲ್ವರು ಸೈನಿಕರು ಅಟ್ಟಣಿಗೆಯ ಮೇಲೆ ಹೊತ್ತು ತರುವ ದೃಶ್ಯದ ಆಭಾಸದ ಬಗೆಗೆ ಪ್ರಶ್ನಿಸಿದಾಗ ಅವನಿಗಿದ್ದ ಆರ್ಥಿಕ ಪರಿಮಿತಿಯನ್ನು ಉಲ್ಲೇಖಿಸಿದ. ಬೆಂಕಿಯನ್ನು, ಬೆಳಕನ್ನು ಅವನು ದೃಶ್ಯ ನಿರ್ಮಿತಿಗಾಗಿ ಬಳಸಿಕೊಂಡಿರುವ ವಿವಿಧ ರೀತಿಗಳು ಗಮನಾರ್ಹವಾಗಿವೆ. ಧಗಧಗಿಸುವ ಜ್ವಾಲೆಯ ದೃಶ್ಯದೊಂದಿಗೇ ಕಥೆ ಪ್ರಾರಂಭವಾಗುತ್ತದೆ. ಸೌದೆ ಉರಿಸಿ ಎಬ್ಬಿಸುವ ಬೆಂಕಿ, ದೊಡ್ಡ ದೊಡ್ಡ ಕಂಚಿನ ದೀಪಗಳು, ಕಾಲುವೆಗಳಲ್ಲಿ ತೇಲಿಬಿಡುವಂತಹ ಚಿಕ್ಕ ಹಣತೆಗಳು, ಕಾಡಿನಲ್ಲಿ ಏಳುವ ಬೆಂಕಿಯ ವರ್ತುಲಗಳು-ಇವೆಲ್ಲಾ ಮೂಡಿಸುವ ಸಾಂಕೇತಿಕತೆ ಅರ್ಥವತ್ತಾಗಿದೆ. ಹಸ್ತಿನಾಪುರದ ಪ್ರಾಚೀನ ಅರಮನೆಯನ್ನು ಪುನರ್‌ರೂಪಿಸಿರುವ ರೀತಿ, ಬಿದಿರುಬೊಂಬುಗಳ ಸರಳ ವಿಭಾಗಗಳಿಂದ ನಿರ್ಮಿಸಿದ ವಿರಾಟನ ಅರಮನೆ,

ಯುದ್ಧ ಶಿಬಿರಗಳು ಮತ್ತು ಯುದ್ಧ ಭೂಮಿಯ ಕಲ್ಪನೆಗಳು ಗಮನಾರ್ಹವಾಗಿದ್ದವು. ಅಭಿಮನ್ಯುವಿನ ವಧೆಗಾಗಿ ನಿರ್ಮಿಸಿದ ಚಕ್ರವ್ಯೂಹದ ಕಲ್ಪನೆಯಂತೂ ಅದ್ಭುತವಾಗಿತ್ತು. ದೊಡ್ಡ ಗುರಾಣಿಗಳ ವ್ಯವಸ್ಥಿತ ಜೋಡಣೆಗಳ ಮೂಲಕ ಚಕ್ರಾಕಾರದಲ್ಲಿ ಕೋಟೆಯಂತೆ ನಿರ್ಮಿಸಿ, ಅದರ ಹಿಂದೆ ಸೈನಿಕರು ಅವಿತಿರುವುದು ಮತ್ತು ಕ್ಷಣ ಕ್ಷಣಕ್ಕೆ ಅದರ ಆಕಾರ ಮತ್ತು ಗತಿ ವ್ಯತ್ಯಾಸ ಹೊಂದುವುದು ಬೆರಗು ಕವಿಸುವಂತಿದ್ದವು. ಕಲ್ಲು ಬಂಡೆಗಳು, ಮರಗಳು, ನೀರು, ಮಣ್ಣಿನ ದಿಬ್ಬಗಳು ಇವೆಲ್ಲ ಅರ್ಥಪೂರ್ಣವಾಗಿ ಬಳಕೆಯಾಗಿದ್ದವು. ಬೇರೆ ಬೇರೆ ಪರಂಪರೆಗಳಿಗೆ ಸೇರಿದ ಸಂಗೀತಗಾರರು ಒಟ್ಟಾಗಿ ಒಂದು ಸಾಮಾನ್ಯ ಸಂಗೀತ ಯೋಜನೆಯನ್ನು ರೂಪಿಸಿ ಪ್ರಯೋಗದ ಜೀವಂತಿಕೆಯನ್ನು ಹೆಚ್ಚಿಸಿದರು. ವಿವಿಧ ದೇಶ ಮತ್ತು ಜನಾಂಗದ ನಟರ ಆಯ್ಕೆಯ ಬಗೆಗೆ ಈಗಾಗಲೇ ಪ್ರಸ್ತಾಪಿಸಲಾಗಿದೆಯಾದರೂ ನಿರ್ದಿಷ್ಟವಾಗಿ ನೀಗ್ರೋ ನಟರ ಬಗೆಗೆ ಇಲ್ಲಿ ಹೇಳಲೇಬೇಕಾಗಿದೆ. ಭೀಷ್ಮ, ಪರಶುರಾಮ, ಭೀಮ, ಘಟೋತ್ಕಜ, ಶಕುನಿಯಂತಹ ದಕ್ಷಿಣ ಆಫ್ರಿಕಾದ ನಟರು ಯಾವುದೇ ಕಸಿವಿಸಿಗೆ ಕಾರಣವಾಗುವಂತಿರಲಿಲ್ಲ. ಪಾತ್ರ ಗಾಂಭೀರ್ಯಕ್ಕೆ ಚ್ಯುತಿಯುಂಟಾಗಲಿಲ್ಲ. ಈ ಸಂಬಂಧದಲ್ಲಿ ಮುಂಬೈನಲ್ಲಿ ಎದ್ದ ಪ್ರತಿಭಟನೆ ಮೂರ್ಖತನದ ಪರಮಾವಧಿ ಎನ್ನಬಹುದು. ಇಡೀ ತಂಡದಲ್ಲಿದ್ದ ಏಕೈಕ ಭಾರತೀಯ ನಟಿ ಮಲ್ಲಿಕಾ ಸಾರಾಭಾಯಿ ದ್ರೌಪದಿಯ ಪಾತ್ರಕ್ಕೆ ಅತ್ಯಂತ ಸಮರ್ಥವಾಗಿ ಜೀವ ತುಂಬಿದರು. ವಸ್ತ್ರಾಪಹರಣ ಮತ್ತು ದುಶ್ಶಾಸನ ವಧೆಯ ಪ್ರಸಂಗಗಳು ಅಭಿನಯದ ದೃಷ್ಟಿಯಿಂದ ಇನ್ನೂ ತೀವ್ರವಾಗಿ ಮೂಡಿಬರಲು ಸಾಧ್ಯವಿತ್ತು. ಪಾತ್ರಗಳು ಪರಸ್ಪರ ಮಾತನಾಡುವಾಗ ಹೆಸರು ಹಿಡಿದು ಕರೆಯುವ ರೀತಿ ಸ್ವಲ್ಪ ವಿಚಿತ್ರವೆನಿಸಿತು. ಮೊಮ್ಮಕ್ಕಳು ಭೀಷ್ಮನನ್ನು ಹೆಸರು ಹಿಡಿದು ಕೂಗುವುದು; ತಾಯಿ, ಗುರು, ಅಣ್ಣಂದಿರ ಹೆಸರನ್ನು ಹಿಡಿದು ಕರೆಯುವುದರ ಬಗೆಗೆ ನಮ್ಮಲ್ಲಿ ನಿಷೇಧವೇ ಇದೆ. ಪಾಶ್ಚಾತ್ಯರೂ, ಈ ನೀತಿಗೆ ಹೊರತೇನಲ್ಲ. ಆದರೆ, ಜಗತ್ತಿನಾದ್ಯಂತ ತನ್ನ 'ಮಹಾಭಾರತ'ವನ್ನು ಕೊಂಡೊಯ್ಯುವ ಉದ್ದೇಶವಿರಿಸಿಕೊಂಡಿದ್ದ ಪೀಟರ್ ಬ್ರೂಕ್‌ಗೆ ಪಾತ್ರಗಳನ್ನು ಪ್ರೇಕ್ಷಕರ ಮನಸ್ಸಿನಲ್ಲಿ ಮೂಡಿಸುವುದಕ್ಕೆ ಇದಕ್ಕಿಂತ ಬೇರೆ ಮಾರ್ಗವಿರಲಿಲ್ಲ.

ಪೀಟರ್ ಬ್ರೂಕ್ 'ಮಹಾಭಾರತ'ದ ಸಾವಿನ ಸರಣಿ ಮರೆಯಲಾಗದ ಮನಂತಾನುಭವವಾಗಿದೆ. ಪಾಂಡುವಿನ ಮರಣದಿಂದಲೇ ಆರಂಭವಾಗಿ ಕರ್ಣ, ಅಭಿಮನ್ಯು, ದ್ರೋಣ, ಭೀಷ್ಮ, ದುರ್ಯೋಧನ, ಕೃಷ್ಣರ ಸಾವಿನಲ್ಲಿ ಅದು ಮುಂದುವರಿಯುತ್ತದೆ. ಪ್ರೇಕ್ಷಕರ ಮನಸ್ಸನ್ನು ಇಲ್ಲಿ ಆವರಿಸುವುದು ಗಂಭೀರವಾದ ಶೂನ್ಯದ ಅನುಭವ. ಸಾಮಾನ್ಯವಾಗಿ ಭಾವೋದ್ರೇಕಕ್ಕೆ ಆಸ್ಪದವಾಗಿಲ್ಲ. ಘಟೋತ್ಕಜನ ಮರಣದಲ್ಲಿ ಮಾತ್ರ ಉದ್ದೇಶಪೂರ್ವಕವಾಗಿಯೇ ಭಾವೋದ್ರೇಕವಿರುವಂತಿದೆ. ಯುದ್ಧದ

(ನಲವತ್ತೆಂಟನೇ ಪುಟ ನೋಡಿ)

ಮಾಸ್ತಿ

ಮಾಸ್ತಿ ಯಾರು ?
  ಮಾಸ್ತರರು ನನ್ನನ್ನೇ
    ನಿಲ್ಲಿಸಿ ಕೇಳಿದ್ದರು

ಎದ್ದು ನಿಂತಿದ್ದೆ ನಾನು ನೆನೆಸುತ್ತ
ಶೆಲ್ಲಿ ಷೇಕ್ಸ್‌ಪಿಯರರ ನಡುವೆ
ಮಹಾಕವಿ ಸಾಫೋಕ್ಲೀಸನಿಂದ ಹಿಡಿದು
ಮೊನ್ನೆಯ ಕ್ರಾಂತಿಕವಿ ಬೆಂಜಮಿನ್ನನವರೆಗೆ
ಪಾಬ್ಲೋ ನೆರೂದಾಗಳ, ಬರ್ನಾರ್ಡ್ ಷಾಗಳ
ಪಕ್ಕ ಸರಿಸಿದ್ದೆ.

    ಆದರೂ ನೆನಪಾಗಲಿಲ್ಲ
    ಹಾಳು ದರಿದ್ರದವ ಇವನೆಂದು ಬದುಕಿದ್ದ

ಪಂಪ ರನ್ನರಿಗಿಂತ ಮೊದಲಿನವನಿರಬೇಕು
ಮುಜುಗರದಿ ನೆಲ ನೋಡುತ್ತಿದ್ದೆ
ಡೆಸ್ಕಿನಾ ಕೆಳಗೆ ಹೂವರಳುತ್ತಿದ್ದುವು
ಹುಡುಗಿಯರ ಹಲ್ಲುಗಳು ಮುಳ್ಳುಗಳಂತಿದ್ದವು.
ಮಾಸ್ತರರು ಹೇಳುತ್ತಿದ್ದರು ಮುಂದೆ

  'ಮಾಸ್ತಿ ನಮ್ಮ ಕನ್ನಡದ ಖ್ಯಾತ ಸಾಹಿತಿ
    ಎಲಾ ಎಲಾ
      ಇಷ್ಟು ಹತ್ತಿರದವನೇ ಈ ಹಣ್ಣು ಹಣ್ಣು ಮುದುಕ

ಆ ಮನೆಯ ಅಂಚಿಗೆ ಒರಗಿ
  ದಿನವೂ ಸಂಜೆ ಕಾಯುತ್ತಿದ್ದ—ಪಕ್ಕದಲ್ಲೊಂದು ಕೋಲು ಇರುತ್ತಿತ್ತು
    ಇದೇ ಮುದುಕನ ಮೇಲೆ ದಿನದಿನವೂ
    ನಾನು ನಾಯಿ ಛೂ ಬಿಟ್ಟಿದ್ದೆ
    ಮುದುಕ ಗಾಬರಿಯಾದಾಗ ನಾ ಖುಷಿಗೊಂಡಿದ್ದೆ

ಒಮ್ಮೆಯಾದರೂ ಹೇಳಬಾರದೆ ಮುದುಕ
  ನಾನು ಕತೆಗಾರ 'ಶ್ರೀನಿವಾಸ' ಎಂದು

ಕೆ.ವೈ. ನಾರಾಯಣಸ್ವಾಮಿ, ಪ್ರಥಮ ಎಂ.ಎ., ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂ-೫೬

ಆತ ಎಂದೂ ಸಿಡುಕಿರಲೇ ಇಲ್ಲ
ಎಂಥ ಸೌಜನ್ಯ ಮೂರ್ತಿ
ಪ್ರೀತಿ ಉಕ್ಕಿ ಬಂತು
ಕ್ಲಾಸಿನ ನಂತರ ಕಾಣಬೇಕೆಂದುಕೊಂಡೆ

ಮಾಸ್ತರರೆಂದರು ಕೊನೆಗೆ
ಮಾಸ್ತಿ ಇನ್ನಿಲ್ಲ ನಮಗೆ.

ದುಃಖ ಒತ್ತರಿಸಿ ಬಂತು
ಹೃದಯ ಪದರಗಳ ನಡುವೆ
ಮಾಸ್ತಿ ಮರೆತ ಕೋಲು
ಅಜ್ಜನ ಕೋಲಿದು ನನ್ನಯ ಕುದುರೆ
ದೇಸಿಗೆ ಓಡುತ್ತಿತ್ತು.

—ನಾರಾಯಣಸ್ವಾಮಿ ಕುಪ್ಪೂರು

ಓದಿ :

ಆಧುನಿಕ ಕನ್ನಡ ನಾಟಕ

—ಡಾ॥ ಕೆ. ಮರುಳಸಿದ್ದಪ್ಪ

ಪ್ರಿಂಟರ್ಸ್ ಪ್ರಕಾಶನ, ಪ್ರಜಾವಾಣಿ, ಬೆಂಗಳೂರು–1, ಬೆಲೆ : 40 ರೂ.

ಈ ಪುಸ್ತಕವನ್ನು ಇತ್ತೀಚೆಗೆ ಓದುವ ಅವಕಾಶಸಿಕ್ಕಿತು. ಇದನ್ನು 'ಶೂದ್ರ'ದಲ್ಲಿ ಗುರ್ತಿಸಿಲ್ಲವಲ್ಲ ಎಂಬ ವಿಷಾದದಿಂದ ಈ ಮಾತನ್ನು ಬರೆಯುವ ಅಗತ್ಯ ಅನ್ನಿಸಿತು. ಮರುಳಸಿದ್ದಪ್ಪನವರು ನಮ್ಮ ನಡುವಿನ ಸೂಕ್ಷ್ಮಪ್ರಜ್ಞೆಯ ವ್ಯಕ್ತಿಗಳಲ್ಲಿ ಒಬ್ಬರು. ಈ ಪುಸ್ತಕ ಅವರ ಪಿ.ಎಚ್.ಡಿ. ಪ್ರಬಂಧ. ಕನ್ನಡ ರಂಗಭೂಮಿಯ ಬೆಳವಣಿಗೆಯನ್ನು ಆರೋಗ್ಯಪೂರ್ಣವಾಗಿ ಓದುವವರಿಗೆ ಉಪಯುಕ್ತವಾದ ಪುಸ್ತಕ. ಸಾಹಿತ್ಯದ ವಿದ್ಯಾರ್ಥಿಗಳಂತೂ ಓದಲೇಬೇಕಾದ ಪುಸ್ತಕ —ಶೂದ್ರ

ವಿಮರ್ಶೆಗೆ ಬಂದ ಪುಸ್ತಕಗಳು

1) ರಾಜಧಾನಿಯಲಿ ಶ್ರೀಮತಿಯರು —ಕೆ. ಸತ್ಯನಾರಾಯಣ, ನೇತ್ರ ಪ್ರಕಾಶನ, 6ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು–560018, ಬೆಲೆ : 12 ರೂ.

ಸತ್ಯನಾರಾಯಣ ಅವರು 'ನಮ್ಮ ಪ್ರೀತಿಯ ಕ್ರಿಕೆಟ್' ಮತ್ತು 'ಒಂದು ಕಥಾನಕದ ಮೂಲಕ' ಕೃತಿಗಳನ್ನು ಬರೆದ ವರ್ಷದಲ್ಲಿಯೇ ಇದನ್ನು ಬರೆದಿದ್ದಾರೆ. ಅವುಗಳಷ್ಟೇ ವಸ್ತುವಿನ ಸಾಂದ್ರತೆ ಗಾಢವಾಗಿದ್ದರೂ ಬರವಣಿಗೆಯ ಶೈಲಿಯಿಂದ ಒಟ್ಟು ಲೇಖಕರ ಪ್ರಜ್ಞೆ ಗಟ್ಟಿಯಾಗುವುದಿಲ್ಲ. ಹಿಂದಿನ ಕೃತಿಗಳು ಕೊಟ್ಟ ಅನುಭವವನ್ನು ಇದು ಕೊಡುವುದಿಲ್ಲ. ಆದರೂ ಪ್ರಯೋಗದ ದೃಷ್ಟಿಯಿಂದ ಮಹತ್ವಪೂರ್ಣವಾದದ್ದು.

2) **ಇನ್ನೊಬ್ಬಳು ಶಕುಂತಲೆ** (ಕವನ ಸಂಕಲನ) — ಕೆ. ಎಂ. ಮುನಿಕೃಷ್ಣಪ್ಪ, ಸುವಿದ್ಯಾ ಪ್ರಕಾಶನ, ಬೆಂಗಳೂರು–4, ಬೆಲೆ : 16 ರೂ. ಇದು ಮುನಿಕೃಷ್ಣಪ್ಪನವರ ಎರಡನೆ ಸಂಕಲನ. ಅತ್ಯಂತ ಚೆನ್ನಾಗಿ ಪ್ರಕಟವಾಗಿರುವ ಪುಸ್ತಕ. ಅವರ "ಮೊದಲು ಗೊತ್ತಿರಲಿಲ್ಲ" ಕವನ ಸಂಕಲನದ ಕಾವ್ಯದ ಹೊಸತನ ದಟ್ಟವಾಗಿ ಮಡುಗಟ್ಟಿಲ್ಲ. ಆದರೂ ಕಾವ್ಯದ ಬಗೆಗಿನ ಗಂಭೀರತೆ ಎದ್ದುಕಾಣುತ್ತದೆ. ಓದಬಹುದಾದ ಒಂದಷ್ಟು ಕವನಗಳಿವೆ.

3) **ವಾಚಕರವಾಣಿ** — ಸಾಹಿತ್ಯಾನಂದ, ನಿವೇದಿತ ಪ್ರಕಾಶನ, ಸುಬ್ರಹ್ಮಣ್ಯನಗರ, ಬೆಂಗಳೂರು–10, ಬೆಲೆ : 12 ರೂ. ಸಾಹಿತ್ಯಾನಂದರು ತುಂಬ ವಿಚಾರಶೀಲ ವ್ಯಕ್ತಿ. ಸಾಹಿತ್ಯ, ರಾಜಕೀಯ ಎಲ್ಲವೂ ವಿಚಾರಪೂರ್ಣವಾಗಿರಬೇಕು ಎಂದು ಆಶಿಸುವ ಇವರು ನಾನಾ ವಿಷಯಗಳ ಬಗ್ಗೆ ಬೇರೆ ಬೇರೆ ಪತ್ರಿಕೆಗಳಲ್ಲಿ ಪತ್ರಗಳ ಮೂಲಕ ಪ್ರತಿಕ್ರಿಯಿಸಿರುವ ಕ್ರಮ ಅರ್ಥಪೂರ್ಣವಾಗಿದೆ.

4) **ಸುಮನ** — ಸಂ : ಎಂ.ಆರ್. ವಿಶ್ವನಾಥರೆಡ್ಡಿ ಮತ್ತು ಡಾ॥ ಬಸವರಾಜಮಲ್ಲಶೆಟ್ಟಿ, ಶ್ರೀ ಎನ್. ತಿಪ್ಪಣ್ಣ ಷಷ್ಠಿಪೂರ್ತಿ ಸಮಾರಂಭ ಸಮಿತಿ, ಜನತಾ ಬಜಾರ್ ಮಹಡಿ, ಬಳ್ಳಾರಿ–1, ಬೆಲೆ : 50 ರೂ. ನಮ್ಮ ಸಾಮಾಜಿಕ ಕ್ಷೇತ್ರದಲ್ಲಿ ನಾನಾ ವ್ಯಕ್ತಿಗಳು ಆಡಂಬರವಿಲ್ಲದೆ ಬದುಕಿರುತ್ತಾರೆ. ಆದರೆ ಇವರು ನಿಜವಾದ ಅರ್ಥದಲ್ಲಿ ಜನರ ನಡುವೆ ಜನಪ್ರಿಯರಾಗಿರುತ್ತಾರೆ. ಇಂಥ ನ್ಯಾಯವಾದಿ, ಶಿಕ್ಷಣತಜ್ಞ ಎನ್. ತಿಪ್ಪಣ್ಣನವರ ಅಭಿನಂದನ ಗ್ರಂಥ. ಇದನ್ನು ವಿಶ್ವನಾಥರೆಡ್ಡಿ ಮತ್ತು ಬಸವರಾಜ ಮಲ್ಲಶೆಟ್ಟಿಯವರು ಕೆಲವು ಒತ್ತಡಗಳ ನಡುವೆಯೂ ಚೆನ್ನಾಗಿ ತಂದಿದ್ದಾರೆ.

5) **ಕಯ್ಯಾರ ಕಿಞ್ಞಣ್ಣರೈ** (ಒಂದು ಪ್ರಸ್ತಾಪನೆ) — ಮುರಳೀಧರ ಉಪಾಧ್ಯ ಹಿರಿಯಡಕ, ಕಯ್ಯಾರ 75 ಅಭಿನಂದನ ಸಮಿತಿ ಮಣಿಪಾಲ, ಬೆಲೆ : 5ರೂ. ಮುರಳೀಧರ ಉಪಾಧ್ಯ ಅವರು ಸಾಹಿತ್ಯ, ಸಂಸ್ಕೃತಿ ಮತ್ತು ನಮ್ಮ ಒಟ್ಟು ಪರಿಸರದ ಆಗುಹೋಗುಗಳ ಬಗ್ಗೆ ಅರ್ಥಪೂರ್ಣ ರೀತಿಯಲ್ಲಿ ಯೋಚಿಸುವವರಾಗಿದ್ದಾರೆ. ಪ್ರಸ್ತುತ ಈ ಕಿರು ಕೃತಿಯು ಕಯ್ಯಾರ ಕಿಞ್ಞಣ್ಣರೈ ಅವರ ಸಾಂಸ್ಕೃತಿಕ ಹೋರಾಟವನ್ನು ಯಾವ ಆಡಂಬರವಿಲ್ಲದೆ ಪರಿಚಯಿಸಿದ್ದಾರೆ. ಗಂಭೀರ ಸಾಹಿತ್ಯ ವಿದ್ಯಾರ್ಥಿ ಮಾಡುವ ಕೆಲಸವನ್ನು ಮಾಡಿದ್ದಾರೆ.

— ಸಿದ್ಧಾರ್ಥ

(ನಲವತ್ನಾಲ್ಕನೆ ಪುಟದಿಂದ)

ಗುರಿಯೇ ವಿನಾಶವಾಗಿದ್ದು, ಅಲ್ಲಿ ಏಳುವ ಧೂಳು, ಬೀಳುವ ಹೆಣಗಳು, ಯುದ್ಧೋನ್ಮತ್ತರ ಅಟ್ಟಹಾಸದ ಕೇಕೆ, ದುಃಖಾರ್ತರ ಆಕ್ರಂದನ, ರಕ್ತದಿಂದ ತೊಯ್ದ ನೆಲ–ಇದೆಲ್ಲವನ್ನೂ ಕಣ್ಣಿಗೆ ಕಟ್ಟಿದಂತೆ ಚಿತ್ರಿಸಲಾಗಿದೆ,

ಮಹಾತ್ಮ ಗಾಂಧಿಯನ್ನು ಕುರಿತ ಅದ್ಭುತ ಚಲನಚಿತ್ರವೊಂದನ್ನು ನೀಡಿದ ಪಾಶ್ಚಾತ್ಯ ಜಗತ್ತು ಈಗ 'ಮಹಾಭಾರತ'ದಂತಹ ವಿಶಿಷ್ಟ ಕಾಣಿಕೆ ನೀಡಿದೆ. ಎರಡೂ ಪ್ರಯತ್ನಗಳು ಅದ್ವಿತೀಯವಾದವು. ಎರಡೂ ಚಿತ್ರಗಳನ್ನು ತಯಾರಿಸಲು ನಮ್ಮಲ್ಲಿಯೇ ಇದ್ದ ಮಹಾನ್ ಪ್ರತಿಭಾವಂತ ನಿರ್ದೇಶಕರಿಗೆ ಏಕೆ ಅವಕಾಶವಾಗಲಿಲ್ಲವೆನ್ನುವುದು ಬಿಡಿಸಲಾಗದ ಒಗಟಿನಂತಿದೆ. ಸತ್ಯಜಿತ್ ರೇಯವರು 'ಮಹಾಭಾರತ'ವನ್ನು ಕುರಿತ ಚಿತ್ರಕಥೆ ಸಿದ್ಧಪಡಿಸಿದ್ದರೆಂದೂ ಆರ್ಥಿಕ ಅಡಚಣೆಯಿಂದ ಕೈಬಿಟ್ಟರೆಂದೂ ಜೀನ್ ಕ್ಲಾಡೆ ತನ್ನ 'ಮಹಾಭಾರತ'ದ ಮುನ್ನುಡಿಯಲ್ಲಿ ಹೇಳುತ್ತಾನೆ. ಮಹಾಭಾರತದ ಯಥಾವತ್ತಾದ ಕಥಾ ನಿರೂಪಣೆಯನ್ನು ಗಂಭೀರವಾಗಿ ನಿರ್ವಹಿಸಿದರೂ ಅದ್ಭುತ ಪರಿಣಾಮ ಉಂಟು ಮಾಡಲು ಅವಕಾಶವಿರುವಾಗ ಬಿ.ಆರ್. ಚೋಪ್ರಾನಂತಹವರು ಪ್ರತಿವಾರವೂ ದೂರದರ್ಶನದ ಮೂಲಕ ಭಾವೋದ್ರೇಕಕಾರಿ ಮಾದಕತೆಯನ್ನು ಪ್ರೇಕ್ಷಕರಿಗೆ ಉಣಬಡಿಸುತ್ತಿದ್ದಾರೆ. ಮಹಾಭಾರತದ ವ್ಯಾಪಾರೀ ಸರಕೊಂದು ಹೀಗೆ ಬಿಕರಿಯಾಗುತ್ತಿರುವ ಸಂದರ್ಭದಲ್ಲಿಯೇ ಪೀಟರ್ ಬ್ರೂಕ್ 'ಮಹಾಭಾರತ' ನಮ್ಮಲ್ಲಿಗೆ ಬಂದುದು ಸಂತೋಷದಾಯಕವಾದ ಒಂದು ಆಕಸ್ಮಿಕವೆನ್ನಬಹುದು.

ಪೀಟರ್ ಬ್ರೂಕ್ ಥಿಯೇಟರ್ ಡೇಸ್‌ನ ಸಾಂಸ್ಕೃತಿಕ ನೆನಪಿಗಾಗಿ

ಉಮೇಶ್‌ರುದ್ರ ಮತ್ತು ಉಲ್ಲಾಳ್ ಪರ್ಯಾಯ ಪಾರಿತೋಷಕಗಳಿಗಾಗಿ ರಾಜ್ಯಮಟ್ಟದ ಅಂತರ ಕಾಲೇಜು ನಾಟಕ ಸ್ಪರ್ಧೆ–ಜನವರಿ 1990

ನಾಟ್ಯಸಂಘ ಥಿಯೇಟರ್ ಸೆಂಟರ್
ನಂ. 148, ಜಲಧಿಗೆರೆ, 33ನೇ 'ಎ' ಅಡ್ಡರಸ್ತೆ,
ಐ.ಟಿ.ಐ. ಕಾಲೋನಿ, ಸಾರಕ್ಕಿ, ಬೆಂಗಳೂರು–560078
(ದೂರವಾಣಿ: 608608)

ಲಂಕೇಶ್‌ರವರ ಎರಡು ಕವನಗಳು

ಅಮೆರಿಕನ್ ಜಾರಿಣಿಯರ ಸಮಸ್ಯೆ

ಕಳೆದ ಹತ್ತು ವರ್ಷಗಳು
ಎಲ್ಲವನ್ನೂ ಅಲ್ಲಾಡಿಸಿರುವದು ಮಾತ್ರ ನಿಜ.

ಕ್ರಾಂತಿಯ ಕಹಳೆ ಕಾರ್ಮಿಕನ ತುಟಿ ತೊರೆದು
ನಿರ್ವಾಹಕನ ಮೇಜು ಮೇಲೆ ಬಿದ್ದಿದೆ;
ಸರ್ವಾಧಿಕಾರಿಯ ಚಣ್ಣ ತನ್ನಷ್ಟಕ್ಕೆ
ಕೆಳಗೆ ಜಾರಿ ಬಿದ್ದು
ಎಲ್ಲೆಲ್ಲೂ ಗುಲ್ಲೆದ್ದಿದೆ.

ಕಾರ್ಖಾನೆಗಳು ಉಗುಳುವ ಹೊಗೆ
ಪೆಟ್ರೋಲ್‌ನ ಅವಾಂತರಗಳು
ತಿಂದೆಸೆವ ಸ್ವಾರ್ಥಿಗಳ ದಂಥೆ
ಹಾಸ್ಯಾಸ್ಪದವಾಗಿ ಕಾಣುತ್ತಿದೆ.

ಮಾರ್ಕ್ಸ್ ಮತ್ತು ಎಂಗೆಲ್ಸ್‌ಗಳು
ಎಪ್ಪತ್ತನೆ ಸುತ್ತಿನ ಬಾಕ್ಸಿಂಗ್‌ನಲ್ಲಿ
ಇಕ್ಕಿಸಿಕೊಂಡು
ಮೂಲೆಯಲ್ಲಿ ಮುಖ ಮರೆಸಿಕೊಂಡು
ಮೌನ ತಾಳಿದ್ದಾರೆ.

ಸಮತಾವಾದದ ಗೋಡೆಗೆ ಹೊಡೆದು
ಚೆಂಡು ಪುಟಿಸುತ್ತಿದ್ದ ಪುಢಾರಿಗಳು,
ಸಮತಾ ಹುಡುಗಿಯರ ಗುಗ್ಗುತನದ ಮುನ್ನೆಲೆಯಲ್ಲಿ
ಕುಣಿಯುತ್ತಿದ್ದ ಅಮೆರಿಕನ್ ಜಾರಿಣಿಯರು

ತಮ್ಮ ಆಟಗಳಿಗೆ ರಂಗ ಹುಡುಕಿಕೊಳ್ಳಬೇಕಾಗಿದೆ,
ಕಾರಣ ಕಂಡುಕೊಳ್ಳಬೇಕಾಗಿದೆ.

ಮಾತುಗಳಿಂದ ಹಿಡಿದು ಮನಸ್ಸನ್ನೊಳಗೊಂಡ
ಬೆಟ್ಟ, ಬಯಲು, ಸಮುದ್ರದ ಅಲೆಗಳಿಗೆ
ಹೊಸ ಸ್ಪಂದನವೊಂದು ಹೊಮ್ಮುತ್ತಿದೆ.

ಪಿ. ಲಂಕೇಶ್, ಬಸವನಗುಡಿ, ಬೆಂಗಳೂರು-4

ಸೋತ ಮಾರ್ಕ್ಸ್‌ನ ಲೆಕ್ಕ, ಸವಾಲಿಗೆ ಬದಲು
ಅವನ ಆತ್ಮಗೌರವದ, ದುಡಿಮೆಯ, ಸರಳತೆ,
ಧರ್ಮ
ನಮ್ಮ ಆತ್ಮಗಳ ತಲುಪಬೇಕಾಗಿದೆ.

ಹೊರಗೆ ಬೆಳೆವ ಮರ, ಹಾರುವ ಪಕ್ಷಿ,
ಹರಿವ ನೀರಿನಂತೆಯೇ
ಹಸಿರು ಹೊಮ್ಮಬೇಕಾಗಿದೆ,
ನಮ್ಮ ಎದೆಯಲ್ಲಿ, ಮನದಲ್ಲಿ, ಮನೆಯಲ್ಲಿ.

●

ಮರ, ಕುರ್ಚಿ

ಮರ ಬಿರುಗಾಳಿಗೆ ಅಲ್ಲಾಡಿದ್ದ ಕಂಡ
ಬಡಗಿ
ಕತ್ತರಿಸಿ ಕುರ್ಚಿ ಮಾಡಿದ:
ಸಾಹಿತಿಗಳು, ಪೋಲೀಸರು, ನ್ಯಾಯಾಧೀಶರಿಗಾಗಿ,
ಸೋಮಾರಿಗಳು, ಸಂಸಾರಿಗಳಿಗಾಗಿ.

ಕುರ್ಚಿ ಮುರಿದು ಮಣ್ಣು ಸೇರಿ
ಹೊಸ ಮರ ಬೆಳೆಯಲು ನೆರವಾದದ್ದು
ಸಹಸ್ರಾರು ವರ್ಷಗಳ ಬಳಿಕ.

ಈ ನಡುವೆ ಕುರ್ಚಿಯನ್ನ
ಬಳಸಿದವರು
ಚಿಂತಿಸಿದ್ದು ಮತ್ತು ಮಾಡಿದ್ದು
ಮನುಕುಲದ ದುಗುಡವ
ಹೆಚ್ಚಿಸಿತೆಂಬುದು
ವನ್ನ ನಮ್ಮ ಊಹೆ.

—ಪಿ. ಲಂಕೇಶ್

●

ಕನ್ನಡಿಗೊಂದು ಕಣ್ಣು

ಸಾಹಿತಿಗಳು ಬಿಳಿಯ ಹಂದಿಗಳು !

ಕೆಲವು ದಿನಗಳ ಹಿಂದೆ ಗೆಳೆಯರೊಬ್ಬರ ಹತ್ತಿರ ಕೂತು ಮಾತಾಡುತ್ತಿದ್ದೆ. ಅಲ್ಲಿಗೊಬ್ಬರು ಮಹಿಳೆ ಬಂದರು. ಪರಿಚಯ ಮಾಡಿಕೊಟ್ಟರು. ಮಾತುಮಾತಿನ ನಡುವೆ ಆಕೆ ಸಾಹಿತಿಗಳನ್ನು ದೈವಾಂಶ ಸಂಭೂತರೆಂದು ಕರೆಯಲು ಶುರುಮಾಡಿದಳು. ನನಗೆ ಒಳಗೊಳಗೆ ನಗುಬಂದರೂ ನಗಲಿಲ್ಲ. ಆಕೆಯ ಮುಗ್ಧತೆಯನ್ನು ಕಂಡು ಅಯ್ಯೋ ಅನ್ನಿಸಿತು. ಆಕೆಯನ್ನು ರೇಗಿಸುವುದಕ್ಕೆ: ನೀವು ತಿಳಿದಿರುವುದು ತಪ್ಪು. ಬಹುಪಾಲು ಸಾಹಿತಿಗಳು ಬಿಳಿಯ ಹಂದಿಗಳಂತೆ. ಪುಢಾರಿಗಳ ಎಲ್ಲಾ ಗುಣಗಳನ್ನು ಮೈಗೂಡಿಸಿಕೊಂಡಿರುತ್ತಾರೆ. ಅವರು ತಿನ್ನುವುದು ನೇರವಾಗಿ ಗೊತ್ತಾಗುವುದಿಲ್ಲ. ಮೇಲ್ನೋಟಕ್ಕೆ ಕೊಳಕು ಹಂದಿಗಳಂತೆ ಕಾಣುವುದಿಲ್ಲ. ಯಾಕೆಂದರೆ ಗೊತ್ತಾಗದಂತೆ ತಿನ್ನುವುದನ್ನು ಕಲಿತಿರುತ್ತಾರೆ. ಮನುಷ್ಯ ಸಂಬಂಧಗಳ ದೌರ್ಬಲ್ಯಗಳ ನಾಡಿಯನ್ನು ಚೆನ್ನಾಗಿ ಹಿಡಿದು ಆಟ ಆಡಿಸಬಲ್ಲರು. "ಏನಪ್ಪ ನೀವು ಕವಿಗಳು, ಸಾಹಿತಿಗಳು" ಎಂದು ಜನಸಾಮಾನ್ಯರಿಂದ ಹೊಗಳಿಸಿಕೊಳ್ಳಲು ಸದಾ ಕಾತುರದಿಂದಿರುತ್ತಾರೆ. ಅಷ್ಟೇ ಅಲ್ಲ ತಮ್ಮ ಹೆಸರಿಗಾಗಿ ದುಡ್ಡುಕೊಟ್ಟು ಕಾರ್ಯಕ್ರಮ ಏರ್ಪಡಿಸಿಕೊಳ್ಳುತ್ತಾರೆ. ತಮ್ಮ ಕತ್ತು ಬಗ್ಗುವ ಮಜಭೂತಾದ ಹೂವಿನ ಹಾರಗಳನ್ನು ತರಿಸುತ್ತಾರೆ. ಇನ್ನೂ ಮುಂದೆ ಹೇಳಬೇಕೆಂದರೆ ತಮಗಾಗಿ ಪ್ರಶಸ್ತಿಗಳಿಗೋಸ್ಕರ ಎಲ್ಲಾ ಕಡೆ ಏಜೆಂಟರುಗಳನ್ನು ತಯಾರುಮಾಡಿರುತ್ತಾರೆ ಎಂದ. ಆಕೆ ಪಿಳಪಿಳ ಕಣ್ಣುಬಿಡತೊಡಗಿದರು. ಆತನ ಮಾತು ರುಚಿಸಲಿಲ್ಲ ಅನ್ನಿಸುತ್ತೆ: 'ಹಂದಿಗಳು' ಎನ್ನುವ ಶಬ್ದದ ಬಗ್ಗೆಯೇ ದೊಡ್ಡ ಆಕ್ಷೇಪಣೆಯನ್ನು ಎತ್ತುವಂತೆ ನೋಡುತ್ತಿದ್ದಳು.

ಮತ್ತೆ ಮಾತಿನ ನಡುವೆ ಗೆಳೆಯ ಮುಂದುವರಿಸಿದ : ನಮ್ಮ ಇಂಗ್ಲಿಷ್ ವಿದ್ಯಾಭ್ಯಾಸ ಜನಕ್ಕೆ ಮೋಸಮಾಡುವುದನ್ನು ಕಲಿಸಿತು. ಹಿಂದಿನ ಕಾಲದಲ್ಲಿದ್ದ ದಳ್ಳಾಳಿಗಳು ಕಂಪ್ಯೂಟರ್ಸ್ ರೀತಿಯಲ್ಲಿ ನಯ ನಾಜೂಕಿನ ಬ್ರೋಕರ್ಸ್ ಆದರು. ಎಣ್ಣೆಯಲ್ಲಿ ಕೂದಲು ತೆಗೆಯುವ ರೀತಿಯಲ್ಲಿ ತಿನ್ನುವುದನ್ನು ಕಲಿತರು. ಅಷ್ಟೇ ನಯ ನಾಜೂಕಿನಿಂದ ನಗಬಲ್ಲರು. ಕೊನೆಯ ಪಕ್ಷ ಈ ನಗುವನ್ನು ತಾತ್ಕಾಲಿಕವಾಗಿ ನಮ್ಮ ಚಾರಿತ್ರಿಕ ನಾಯಕರಾದ ಶ್ರೀ ಕೃಷ್ಣನಿಂದ, ಮಹಾತ್ಮಗಾಂಧಿಯವರಿಂದ ಗುಟ್ಟಾಗಿ ಕದಿಯಬಲ್ಲರು. ಹೀಗೆಯೇ ಮಾತು ಸಾಗಿತ್ತು. ಆಕೆ ಬದಲಾಗುವುದಿಲ್ಲ ಎಂಬ ಸತ್ಯ ಅರಿವಾಗತೊಡಗಿತು. ಸಮಯ ಹಾಳು ಮಾಡಿಕೊಂಡೆ ಅನ್ನಿಸಿರಬೇಕು. ಮೌನಿಯಾದ. "ಏನೇ ಹೇಳಿ ಸಾಹಿತಿಗಳನ್ನು ನೀವು ಹಾಗೆಲ್ಲ 'ಬಿಳಿಯ ಹಂದಿಗಳು' ಎಂದು ಕರೆಯಬಾರದು. ಅವರು ದೈವಾಂಶ ಸಂಭೂತರು. ದೇವರು ಅವರಿಗೆ ಬರೆಯುವ ಸುಯೋಗವನ್ನು ಕೊಟ್ಟಿದ್ದಾರೆ" ಎಂದು ಆಕೆ ಎದ್ದಳು. ಎಲ್ಲಾ ವರ್ಗದ ಚಟುವಟಿಕೆಗಳು ಸಾಹಿತ್ಯದಷ್ಟೇ ಮುಖ್ಯವಾದಾಗ ಈ ರೀತಿಯ 'ದೈವಾಂಶ ಸಂಭೂತ' ಎಂಬ ಮುಗ್ಧತೆಯ ಮಾತುಗಳು ತಿಳಿಯಾಗಬಹುದು. ಸಾಂಸ್ಕೃತಿಕ ಪುಢಾರಿ ರಾಜಕೀಯ ಕಡಿಮೆಯಾಗಬಹುದು.

24–12–1989 ಶೂದ್ರ ಶ್ರೀನಿವಾಸ್

ಸುದ್ದಿಯ ಸುದ್ದಿ

ಚಂದ್ರಶೇಖರ ಉಪಾಲ : ಈತ ಸದಾನಗುಮೋರೆಯ ಕ್ರಿಯಾಶೀಲ ಹುಡುಗ. ಸಾಹಿತ್ಯ ಮತ್ತು ಕಲೆಯ ಬಗ್ಗೆ ಕಳಕಳಿಯನ್ನು ಹೊಂದಿರುವ ಹುಡುಗ. ಏನೇ ಕೆಲಸ ವನ್ನು ಮಾಡಿದರೂ ಅಚ್ಚುಕಟ್ಟಾಗಿ ಮಾಡಬಲ್ಲಂಥವರು. ಕಪ್ಪಣ್ಣನವರಿಗಂತೂ ಉಪಾಲ ಮತ್ತು ವಿಶ್ವಪ್ರಸಾದ್ ಇರುವುದರಿಂದ ಅರ್ಧ ಬರ್ಡನ್ ಕಡಿಮೆಯಾಗಿದೆ. ಚೆನ್ನಾಗಿ ಚಿತ್ರ ಬರೆಯಬಲ್ಲರು. ಕೆಲವು ವರ್ಷಗಳ ಹಿಂದೆ ನಾಗೇಶ್‌ರವರು ನಿರ್ದೇಶಿಸಿದ ತಬರನ ಕಥೆ ನಾಟಕದ ಪ್ರಯೋಗಕ್ಕೆ ಮಾರ್ಮಿಕವಾದ ಚಿತ್ರಗಳನ್ನು ಬಿಡಿಸಿದ್ದರು. ಈಗ ಕಪ್ಪಣ್ಣ ನವರ ನಾಟ್ಯಸಂಘಕ್ಕೆ ಉಪಾಲ ಆಧಾರವಾಗಿದ್ದಾರೆ.

ತಿಮ್ಮರಾಜು : ಕಳೆದ ಒಂದು ದಶಕದಲ್ಲಿ ನಮ್ಮ ದಲಿತರ ನಡುವಿನಿಂದ ಎಷ್ಟೊಂದು ಕ್ರಿಯಾಶೀಲ ವ್ಯಕ್ತಿಗಳು ಬಂದರೆಂದರೆ ಹೇಳುವುದಕ್ಕೆ ಸಂತೋಷವಾಗುತ್ತದೆ. ತಮಗೆ ಮುಚ್ಚಿದ್ದ ಬಾಗಿಲುಗಳನ್ನು ತೆರೆದು ಹೊರಗೆ ಬಂದಿದ್ದಾರೆ. ಈಗ ಹಾಡು, ಕುಣಿತ, ಬರವಣಿಗೆ, ಹೋರಾಟ ಅವರಿಗೆ ಬೇರೆ ಬೇರೆ ಅಲ್ಲ. ಇಂಥವರಲ್ಲಿ ಸದಾ ಹಾಡಿನ ಬಗ್ಗೆಯೇ ಯೋಚಿಸುವ ತಿಮ್ಮರಾಜು ಸಾಹಿತ್ಯದ ವಿದ್ಯಾರ್ಥಿ. ಕಾಲೇಜೊಂದರಲ್ಲಿ ಕನ್ನಡ ಅಧ್ಯಾಪಕನಾದರೂ ನಾಡಿನಗಲ ಹಾಡಲು ಕುಣಿಯಲು ತುದಿಗಾಲಿನಲ್ಲಿ ನಿಂತಿ ರುವ ತಿಮ್ಮರಾಜು ಮದುವೆಯಾಗಲು ತುದಿಗಾಲಿನಲ್ಲಿ ನಿಂತಿದ್ದಾನೆ. ಮದುವೆಯಾಗ ಬೇಕು ಅನ್ನಿಸಿದರೆ ಆಗಿಬಿಡುವುದು ಒಳ್ಳೆಯದು. ಮದುವೆಯ ಮಾತಿರಲಿ : ತಿಮ್ಮರಾಜು ಕ್ರಿಯಾಶೀಲ ಹಾಡುಗಾರ.

ಶೂದ್ರ ವಿಚಾರ ಸಂಕಿರಣ : 1990ರಲ್ಲಿ ಇಡೀ ವರ್ಷ ಪ್ರತಿ ತಿಂಗಳು ಬೇರೆ ಬೇರೆ ಕಡೆ ಸಾಹಿತ್ಯ, ಸಂಸ್ಕೃತಿ ಮತ್ತು ರಾಜಕಾರಣ ಕುರಿತು ಸೀಮಿತ ಮಟ್ಟದಲ್ಲಿ ವಿಚಾರ ಸಂಕಿರಣ ಮಾಡಬೇಕೆಂದಿದ್ದೇವೆ. ದಯವಿಟ್ಟು ಶೂದ್ರದ ಗೆಳೆಯರು ಸಹಕರಿಸಬೇಕಾಗಿ ವಿನಂತಿ. ಈ ವಿಚಾರ ಸಂಕಿರಣದ ಮುಖ್ಯ ಉದ್ದೇಶ ಕರ್ನಾಟಕದ ಕೆಲವು ಮುಖ್ಯ ನಗರಗಳನ್ನು ಬಿಟ್ಟು ಬೇರೆ ಕಡೆ ಇರುವ ವಿಚಾರಶೀಲರನ್ನು ಶೂದ್ರದ ವೇದಿಕೆಗೆ ಬರ ಮಾಡಿಕೊಳ್ಳುವ ಆಶಯದಿಂದ ಈ ಯೋಜನೆಯನ್ನು ರೂಪಿಸುತ್ತಿದ್ದೇವೆ.

ಅನ್ಯೋನ್ಯ ಮತ್ತು ಶೂದ್ರ

ನವಂಬರ್ ತಿಂಗಳ ಕೊನೆಯ ಶನಿವಾರ 'ನಮ್ಮ ಜೀವನ್ತಿನ ಮೌಲ್ಯಗಳು' ವಿಷಯದ ಬಗ್ಗೆ ಪ್ರೊ॥ ಎಂ.ಎನ್. ಮೂರ್ತಿರಾವ್ ಅವರು ಮಾತಾಡಿದರು. ಮೂರ್ತಿರಾವ್ ಅವರು ತಮ್ಮ 90ನೆಯ ವಯಸ್ಸಿನಲ್ಲಿಯೂ ಉಳಿಸಿಕೊಂಡಿರುವ ಜೀವನ ಕಳಕಳಿ ಅಪೂರ್ವವಾದದ್ದು. ಒಬ್ಬ ದೊಡ್ಡ ವ್ಯಕ್ತಿಯ ಉದ್ದನೆಯ ಬದುಕಿನಲ್ಲಿ ಅನೇಕ ಸೂಕ್ಷ್ಮ ಸಂಗತಿಗಳೆಲ್ಲ ನಡೆದಿರುತ್ತದೆ. ಆದರೆ ಅವೆಲ್ಲವನ್ನು ಗ್ರಹಿಸುವ ಕ್ರಮ ಮುಖ್ಯವಾದದ್ದು. ಈ ದೃಷ್ಟಿಯಿಂದ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಆಳವಾಗಿ ಬೇರೂರಿರುವ ಭ್ರಷ್ಟತೆಯನ್ನು ಕುರಿತು ತಮ್ಮ ಅನುಭವದ ಮೂಲಕ ಮಾತಾಡಿದರು. ಈ ಸಮಾಜದಲ್ಲಿ ವೃತ್ತಿಯಿಂದ ನಿವೃತ್ತರಾದವರೆಲ್ಲ ಒಂದೆಡೆ ಸೇರಿ ಹೋರಾಡುವ ಮನೋಭಾವನೆ ಬೆಳೆಸಿಕೊಳ್ಳಬೇಕು. ಕಿರಿಯರೆಲ್ಲ ತಮ್ಮ ವಿದ್ಯಾಭ್ಯಾಸ ಬಿಟ್ಟು ಜೀವನವನ್ನು ರೂಪಿಸಿಕೊಳ್ಳುವುದನ್ನು ಬಿಟ್ಟು ಹೋರಾಡಲಾಗುವುದಿಲ್ಲ. ಹಾಗೆಯೇ ಹೋರಾಟಕ್ಕೆ ಬೇಕಾಗಿರುವುದು ಆರೋಗ್ಯಪೂರ್ಣವಾದ ಮನಸ್ಸು ಮಾತ್ರ ಎಂದರು. ಸ್ವತಂತ್ರ ಭಾರತದಲ್ಲಿ ನೆಹರೂರವರು ತಮ್ಮೆಲ್ಲ ಒಳ್ಳೆಯತನದ ನಡುವೆಯೂ ಭ್ರಷ್ಟ ವ್ಯಕ್ತಿಗಳನ್ನು ತಮ್ಮ ತೆಕ್ಕೆಯೊಳಗೆ ಹಾಕಿಕೊಂಡರು. ರಕ್ಷಿಸುತ್ತ ಹೋದರು. ಆದ್ದರಿಂದ ಭ್ರಷ್ಟಾಚಾರ ರಾಜಾರೋಷವಾಗಿ ಬೆಳೆಯುತ್ತಾ ಹೋಯಿತು. ನಮ್ಮ ರಾಜಕಾರಣದಲ್ಲಿ ಸ್ವಾಮಿಗಳು ತಲೆಹಾಕುವುದನ್ನು ನಿಲ್ಲಿಸಬೇಕು ಎಂದು ಖಾರವಾಗಿ ಹೇಳಿದರು. ನಂತರ ಚರ್ಚೆಯಲ್ಲಿ ಪ್ರಾಮಾಣಿಕ ಬದುಕು ಮತ್ತು ಕ್ರಿಯಾಶೀಲತೆಯ ಬಗ್ಗೆ ಹಾಗೂ ವ್ಯಕ್ತಿಗತ ಬದಲಾವಣೆ ಮತ್ತು ಸಾಮೂಹಿಕ ಬದಲಾವಣೆಯನ್ನು ಕುರಿತು ಚರ್ಚೆ ನಡೆಯಿತು. ಚುನಾವಣೆ ಆಗ ತಾನೇ ಮುಗಿದಿದ್ದರಿಂದ ಚುನಾವಣೆಯ ಭ್ರಷ್ಟ ಸ್ವರೂಪದತ್ತ ಮಾತು ನಡೆಯಿತು. ಕಲಾಕ್ಷೇತ್ರದ ವಿರಾಮ ಕೊಠಡಿಯ ತುಂಬ ಜನರನ್ನು ಕಂಡು ರಾಮಚಂದ್ರಶರ್ಮ ಅವರು ಸಂತೋಷದ ಉದ್ಗಾರ ತೆಗೆಯುತ್ತ ಮೂರ್ತಿರಾವ್ ಅವರು ಹೀಗೆಯೇ ತಮ್ಮ ನೂರು ವರ್ಷದ ಕಾರ್ಯಕ್ರಮದಲ್ಲೂ ನಮ್ಮೊಡನೆ ಇರಲಿ ಎಂದರು. ಅದೇ ನಗುಮೊಗದ ಮೂರ್ತಿರಾವ್ ಅವರು ಪುಟ್ಟ ಹುಡುಗರಂತೆ ಗುಡು ಗುಡು ನಡೆದರು. ಎಷ್ಟೋ ಜನ ಯುವಕರು ಅವರಿಗಿಂತ ವೃದ್ಧರಾಗಿ ಕಾಣುತ್ತಿದ್ದರು.

—ಶೂದ್ರ

FNP/KRNU/72 No. M (2) PRB 211/73/74

SHOODRA Kannada Monthly

ಫೆಬ್ರುವರಿ 1990ರ ಸಂಚಿಕೆಯಲ್ಲಿ :

ಗಾಂಧಿ ತತ್ವಚಿಂತನೆ ಮತ್ತು ವಿಕೇಂದ್ರೀಕರಣ–ವಿಶೇಷಾಂಕ–ಕೆ. ಪಿ. ಸುರೇಶ್ ಡಾ|| ಮುರಾರಿ ಬಲ್ಲಾಳ–ಕೆ. ಸತ್ಯನಾರಾಯಣ–ಡಾ|| ಡಿ. ಆರ್. ನಾಗರಾಜ್ ಡಾ|| ಕೆ. ಎಸ್. ಕೃಷ್ಣಸ್ವಾಮಿ–ಕೆ. ಎಸ್. ನಾರಾಯಣಸ್ವಾಮಿ–ಪ್ರೊ|| ವಿ. ಕೆ. ನಟರಾಜ್–ಸಿ. ನಾರಾಯಣಸ್ವಾಮಿ–ಡಾ|| ಯು. ಆರ್. ಅನಂತಮೂರ್ತಿ ಜಾರ್ಜ್ ಆರ್ವೆಲ್– ಮುಂತಾದವರ ಲೇಖನಗಳಿರುತ್ತವೆ.

Faith in a special social order, in the communal system of Russian life; hence-faith in the possibility of a peasant socialist revolution-that is what inspried them and roused dozens and hundreds of people to wage a heroic struggle against the government.

—LENIN

ಶೂದ್ರದ ಕೃಷ್ಣ ಆಲನಹಳ್ಳಿ ನೆನಪಿನ ಸಂಕ್ರಾಂತಿ ಕಥಾಸ್ಪರ್ಧೆಯಲ್ಲಿ ಡಾ|| ಕರೀಗೌಡ ಬೀಚನಹಳ್ಳಿಯವರ ವಿಯೋಗ ಕಥೆ ಡಾ|| ಅರವಿಂದ ಮಾಲಗತ್ತಿಯವರ ಅಹಿಂಸಾ ಚಪ್ಲಿಯ ಅಯ್ಯಪ್ಪ ಕಥೆಗಳು ತಲಾ ಒಂದೊಂದು ಸಾವಿರದ ಬಹುಮಾನವನ್ನು ಪಡೆದಿವೆ. ಕಥೆಗಳ ತೀರ್ಪುಗಾರರಾಗಿ ಸಹಕರಿಸಿದ ಡಾ|| ಕೆ. ವಿ. ನಾರಾಯಣ ಅವರಿಗೆ ಹಾಗೆಯೇ ಕಥಾಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲರಿಗೂ ಶೂದ್ರ ಋಣಿಯಾಗಿದೆ. ಜನವರಿಯಲ್ಲಿ ಮೈಸೂರಿನಲ್ಲಿ ನಡೆಸುವ ವಿಚಾರ ಸಂಕಿರಣದ ಸಮಯದಲ್ಲಿ ಕೃಷ್ಣನ ಕುಟುಂಬದ ಕಡೆಯವರಿಂದ ಬಹುಮಾನವನ್ನು ಕೊಡಲಾಗುವುದು.

—ಸಂ

M. Srinivas, Editor for Shudra, Printed at :
Pallavi Printers, No. 1, 3rd Cross, Balaji Nagar,
Suddagunte Palya, D.R. College Post, Bangalore-29